ಶೀ:- ಪ್ರೀತೆಗಾ

ಲೇ:- ದೇಶಿ ಕೊಟ್ಟೂರು



1958

1958

ಸಾಹಿತ್ಯ ಪ್ರಕಾಶನ

ಕೊಟ್ಟೂರು

# ಔತಣ

ದೇಶಿ, ಕೊಟ್ಟೂರು.

ಸಾಹಿತ್ಯ ಪ್ರಕಾಶನ
ಕೋಟೆ, ಕೊಟ್ಟೂರು.



ಶ್ರೀ ದೇಶಿ, ಕೊಟ್ಟೂರು.

ಬರೆವ ಹಂಬಲವಿದ್ದು ಬರೆಯಲಾಗದ ಪ್ರಾಣಿ
ಬಂಜೆ ಹೆಂಗಸಿಗಿಂತ ದುಃಖಿ ಅವಮಾನಿತನು;
ಬರೆವುದನು ಸಲ್ಲದಕೆ ಬಳಸಿಕೊಳ್ಳುವ ಪ್ರಾಣಿ
ರೋಗಿ ಮಕ್ಕಳ ತಾಯಿಯಂತೆ ಬಳಲುವನು.

ಸಾಹಿತ್ಯ ಪ್ರಕಾಶನ: ಒಂದು.

ಶ್ರೀ ಎ. ಬಿ. ಕೃಷ್ಣರಾಜ, Asst., Branch Manager, Branch: Bellary.
ಇವರಿಗೆ ಪ್ರೀತಿಪೂರ್ವಕವಾಗಿ,

# ಔತಣ

ಟಿ. ಶಿವಾನಂದ
ದಿ. 14. 10. 1960.

(ಸುರಸ ಸುಂದರ ಜೀವನ ಚಿತ್ರಗಳು)



ಲೇಖಕರು :
ದೇಶಿ, ಕೊಟ್ಟೂರು.



ಸಾಹಿತ್ಯ ಪ್ರಕಾಶನ
ಕೋಟೆ, ಕೊಟ್ಟೂರು.

ಮೊದಲನೇ ಮುದ್ರಣ: ೧೯೫೮. ಒಂದು ಸಾವಿರ ಪ್ರತಿಗಳು.



ಬೆಲೆ: ಎಂಭತ್ತು ನಯೇ ಪೈಸೆ.



ಮುದ್ರಕರು:
ಅಂಬಿಕಾ ಪ್ರೆಸ್,
ಮೈಸೂರು.

# ನನ್ನ ನುಡಿ

ಈ ಕೃತಿಯು, ಶ್ರೀ ಗುರುದೇವ ಬಳ್ಳಾರಿಯ ವೈ. ನಾಗೇಶಶಾಸ್ತ್ರಿಗಳವರ ಅನುಗ್ರಹದಿಂದ ಪ್ರೇರಿತವಾಗಿ ರಚಿತವಾಗಿದೆ. ಅವರಿಗೆ ನನ್ನ ತ್ರಿಕರಣ ಪೂರ್ವಕವಾದ ವಂದನೆಗಳು.

ಸಾಮಾನ್ಯವಾಗಿ ದುಃಖದ ಪರಿಚಯವಿಲ್ಲದವರಿಲ್ಲ. ಆದರೆ ನೈಜ ಸುಖದ ಪರಿಚಯ ಮಾತ್ರ ಬಹು ಕಡಿಮೆ. ಆದಕಾರಣ ಸುರಸ ಸುಂದರ ಜೀವನ ಚಿತ್ರಗಳ ಮೂಲಕ ನೈಜ ಸುಖದ ಪರಿಚಯ ಮಾಡಿಕೊಡಬೇಕೆಂಬ ನನ್ನ ಆಕಾಂಕ್ಷೆಯ ಫಲವೇ ಈ ಔತಣ. ಸಹೃದಯರು ಈ ಔತಣವನ್ನುಂಡು ತೃಪ್ತಿಯಿಂದ ಡೇಗಿದರೆ ಸಾಕು—ಇನ್ನೇನು ಬೇಕು?

ಈ ಕೃತಿಯ ಪ್ರಕಟನೆಗೆ ನೆರವಾದ ಸಹೃದಯರನ್ನಿಲ್ಲಿ ನೆನೆಯುವುದು ನನ್ನ ಕರ್ತವ್ಯ. ನಮ್ಮೂರಿನ "ಸಾಂಸ್ಕೃತಿಕ ಸಂಘ" ಮತ್ತು "ಗೆಳೆಯರ ಗುಂಪಿ"ನ ಗೆಳೆಯರ ಪ್ರೋತ್ಸಾಹವನ್ನೂ ಧನಸಹಾಯ ಮಾಡಿದ ಮಹಾನೀಯರನ್ನು ನನ್ನ ಬಗ್ಗೆ ಸದಾ ಸಹೃದಯತೆಯಿಂದ ವರ್ತಿಸುತ್ತಿರುವ ತುಮಕೂರಿನ ಟಿ. ಜಿ. ಆರಾಧ್ಯ ಬಂಧುಗಳನ್ನೂ ಮುದ್ದಾದ ಹಸ್ತ ಪ್ರತಿ ತಯಾರಿಸಿ ಕೊಟ್ಟ ಚಿ॥ ಬಿ. ರೇಣುಕನನ್ನೂ ಒಟ್ಟನಲ್ಲಿ ಎಲ್ಲಾ ವಿಧದಿಂದ ನೆರವಾದ ಎಲ್ಲಾ ಮಿತ್ರರನ್ನೂ ಹೃತ್ಪೂರ್ವಕವಾಗಿ ನೆನೆಯದಿರಲಾರೆ. ಅಂದವಾಗಿ ಮುದ್ರಿಸಿಕೊಟ್ಟ ಅಂಬಿಕಾ ಪ್ರೆಸ್ಸಿನವರಿಗೂ ನನ್ನ ನೆನಕೆಗಳು ಸಲ್ಲುತ್ತವೆ. ಕೊನೆಯದಾಗಿ ಸದಾ ನನ್ನ ಶ್ರೇಯೋಕಾಂಕ್ಷಿಗಳಾದ ನನ್ನ ಸೋದರ ಶ್ರೀ ದೇ. ಚಿನ್ನಪ್ಪ ಮತ್ತು ನನ್ನ ಆಪ್ತ ಮಿತ್ರ ಶ್ರೀ ಕೆ. ಯಂ. ಉಮಾಪತಿ, ಬಿ. ಎಸ್‌ಸಿ., ಇವರನ್ನು ನೆನೆಯುತ್ತಾ ಈ ನನ್ನ ನುಡಿಯನ್ನು ಮುಗಿಸುತ್ತೇನೆ.

ಮುಕ್ಕಾಂ: ಮೈಸೂರು.
ದಿ. 15-5-58.

**ದೇಶಿ, ಕೊಟ್ಟೂರು.**

# ಅ ರ್ಪ ಣೆ

ಲಿಂಗೈಕ್ಯರಾದ

# ನನ್ನ ತಂದೆ

ಮತ್ತು

" ವಾತ್ಸಲ್ಯಮೂರ್ತಿಯಾಗಿರುವ "

# ನನ್ನ ತಾಯಿ

ಇವರುಗಳಿಗೆ

ಈ ಕೃತಿ ಕುಸುಮವನ್ನು

ಭಕ್ತಿಪೂರ್ವಕವಾಗಿ ಅರ್ಪಿಸಿದ್ದೇನೆ.

ದೇಶಿ, ಕೊಟ್ಟೂರು.

## ಔತಣದ ದಿನಿಸುಗಳು :

೧. ಸಿಹಿಯೂಟ : ಗಂಡ-ಹೆಂಡ್ತಿ ಮಾತು.

೧. ಪ್ರೇಯಸಿ – ಪ್ರಿಯತಮಾ.
೨. ಹ್ಞೂ !
೩. ಸಂಶಯ !
೪. ದಿವ್ಯ ದಾಂಪತ್ಯ.
೫. * ನನ್ನಾಣೆ !

೨. ಅನ್ನದೂಟ : "ನನ್ನ" ಗಳು.

೧. ನನ್ನ ಜೇವಿ.
೨. ನನ್ನ ಗೋಳು.

೩. ನೆಂಚುಗೆ : ನನ್ನ ಕೃತಿಗಳು.

೧. ಪುರುಷಾಭರಣ.
೨. ಕೊಟ್ಟೂರ್ ಟ್ರೇನ್.

* ಈ "ನನ್ನಾಣೆ" ಎಂಬ ಕೃತಿಯು ವೀರಶೈವ ಕಾಲೇಜ್ ಮ್ಯಾಗಜೀನ್‌ನಲ್ಲಿಯೂ "ಅಮರವಾಣಿ" ಪತ್ರಿಕೆಯಲ್ಲಿಯೂ ಈ ಹಿಂದೆ ಪ್ರಕಟವಾಗಿತ್ತು. ಆಯಾ ಸಂಪಾದಕರುಗಳಿಗೆ ನನ್ನ ವಂದನೆಗಳು.

—ಲೇಖಕ.

# ಚೈತ್ರ

## ಪ್ರೇಯಸಿ - ಪ್ರಿಯತಮಾ.

"ನೀವು ವರ ಆಗಿ ನನ್ನ ನೋಡಲು ಬಂದಾಗ ನಿಮ್ಮ ವರ್ತನೆಯನ್ನು ನೋಡಿ ಬೇರೆ ಯಾವ ಹುಡುಗಿಯಾಗಿದ್ದರೂ ನಿಮ್ಮನ್ನು ಒಪ್ಪುತ್ತಿರಲಿಲ್ಲ ಗೊತ್ತೇನ್ರೀ?"

"ಅಯ್ಯೋ ಹಾಗೆ ಒಪ್ಪದೇ ಇದ್ರೇ ಚೆನ್ನಾಗಿತ್ತೂಂತ ನಾನು ಎಣಿಕೆ ಹಾಕಿದ್ದೆ. ಆದ್ರೆ ನೀನು ಪಕ್ಕಾ ಹುಡುಗಿ ಇದ್ದೀ. ಒಂದೇ ಸಲಕ್ಕೇ ಒಪ್ಕೊಂಡ್ಬಿಟ್ಟೆಯಲ್ಲಾ! ನಾನಂತೂ ಮೊದಲೇ ನಿರ್ಧರಿಸಿಬಿಟ್ಟಿದ್ದೆ: ಹೆಣ್ಣು ಕೊಡ್ತೀವಿ ಅಂತ ಬಂದ್ರೆ ಮಾಡ್ಕೋಬಾರದು; ಆದರೆ 'ನಿಮ್ಮನ್ನೇ ಮಾಡ್ಕೋ ತೀನೀ' ಅಂತ ಒಂದು ಹುಡುಗಿ ನನ್ನನ್ನು ಪೂರಾ ತಿಳಿದುಕೊಂಡು ಬಂದ್ರೆ ಮಾಡ್ಕೋಬೇಕೂ ಅಂತ."

"ಹಾಗಾದರೆ ನಾನು ನಿಮ್ಮನ್ನೇ ಮಾಡ್ಕೋತೀನೀ ಅಂತ ನಿಮ್ಮೆದುರು ಬಂದು ಹೇಳಿನ್ನೇ? ಹಾಗೇನಾದ್ರೂ ಹಠ ಹಿಡಿದು ಕೂತಿದ್ದೆನೇ?"

"ಅಯ್ಯೋ ಹುಚ್ಚೀ! ಬಾಯಿಬಿಟ್ಟು 'ನೀನು ಹೇಳೀತೀರಬೇಕೆಂದೇ ನಿದೆ? ವಿದ್ಯಾವಂತ ಹೆಚ್ಚಿನದಾಗಿ ಬುದ್ಧಿವಂತ ಮೇಲಾಗಿ ಅತ್ಯುತ್ತಮನಾದ ಕಲಾವಿದ ಮತ್ತು 'ರೂಪವಂತನಾದ ನನ್ನನ್ನು ನೀನು ನೋಡಿದಾಗಿನಿಂದ ನಿನ್ನ ಮನಸ್ಸು ಏನೇನು ಎಣಿಕೆ ಹಾಕುತ್ತಿತ್ತೆಂದು ಭಾವನಾ ಜೀವಿಯಾದ ನನಗೆ ಗೊತ್ತು. ನಾನು ಮನಸ್ಸಿನಲ್ಲಿ ಮಾಡಿಕೊಂಡಂತೆ ನೀನು ನಿನ್ನ ಬಾಯಿಂದ ಹೇಳದಿದ್ದರೂ ನಿನ್ನ ವರ್ತನೆಯಿಂದಲೇ ಧ್ವನಿತವಾಗುತ್ತಿತ್ತು. ಅಲ್ಲೇ ಸುಳ್ಳು ಹೇಳಬೇಡ. ನೀನು ನನ್ನ ನೋಡಿದಕೂಡಲೇ ನನಗೆ ಮರುಳಾಗಿಬಿಟ್ಟು 'ಇಂದೇ ಏಕೆ ಲಗ್ನವಾಗಬಾರದು' ಎಂದು ಬಯಸುತ್ತಿದ್ದಿ ಯಲ್ಲವೇ?"

"ಉ್ಹೂ ಹೋಗ್ರೀ ನೀವು! ಏನು ಮಾತನಾಡಿದ್ರೂ ನನಗೇ ತಂದು ಹಾಕ್ತೀರಿ ಹಂಗೆ. ನಾನು ಹೇಳಿದ್ದೂ: ನೀವು ವರ ಆಗಿ ಬಂದಾಗ ಸ್ವಲ್ಪವಾದರೂ ಗಾಂಭೀರ್ಯವನ್ನು ಬಳಸಿಕೊಳ್ಳಲಿಲ್ಲವಲ್ಲಾ ಎಂದೆ. ಮುಖ್ಯವಾಗಿ ಕನ್ಯೆಯನ್ನು ನೋಡಲು ಹೋಗುವಾಗ ಎಂಥಾ ಸ್ವಭಾವದವರೇ ಆಗಿರಲಿ ಗಂಭೀರಸ್ಥರಾಗುತ್ತಾರೆ. ಆದರೆ ನೀವು ನಿಮ್ಮ (ಸಹಜ) ಹಾಸ್ಯ ಪ್ರವೃತ್ತಿಯಲ್ಲೇ ಇದ್ದುದನ್ನು ಕಂಡು ನನಗೆ ಬಹು ಆಶ್ಚರ್ಯವಾಗಿತ್ತು."

"ಅಲ್ಲೇ ನೀನಾದರೂ ಕನ್ಯಾ ಸಹಜವಾದ ನಾಚಿಕೆಯನ್ನು ಬಿಟ್ಟು ವರನಾದ ನನಗೆ ಊಟಕ್ಕೆ ನೀಡಿದ್ದಂತೂ ಬಹು ಆಶ್ಚರ್ಯವನ್ನುಂಟು ಮಾಡಿತ್ತು."

"ಇಲ್ಲಿ ನೋಡ್ರೀ, ಸುಳ್ಳೇಕೆ ಹೇಳಬೇಕು? ನಿಮ್ಮ ವರ್ತನೆಯನು ನೋಡಿದಮೇಲೆ ನನಗೆ ಎಳ್ಳಷ್ಟೂ ಸಂಕೋಚ, ನಾಚಿಕೆ ಉಳಿಯಲೇ ಇಲ್ಲ. ಮೊದಲು ಕೆಲವು ವರಗಳು ಬಂದಿದ್ದವು. ಆಗ ನನಗೆ ಸರಿಯಾಗಿ ಅವರನ್ನು ನೋಡುವ ಹಾಗೇ ಆಗುತ್ತಿರಲಿಲ್ಲ – ಊಟಕ್ಕೆ ನೀಡುವುದೊತ್ತಟ್ಟಗಿರಲಿ. ನಿಮ್ಮನ್ನು ನಾನು ಕದ್ದು ಕದ್ದು ಎಷ್ಟೋ ಸಲ ನೋಡಿದ್ದೆನಲ್ಲದೆ ನಮ್ಮ ಮನೆಯವರ ಮಾತಿಗೆ ಈ ಸಲ ಒಪ್ಪಿ ನಾನೇ ನಿಮಗೆ ಬಡಿಸಲು ಬಂದು ಬಿಟ್ಟದ್ದೆ. ಅಲ್ಲಾ, ನೀವು ನಗುತ್ತಾ ಕೆಲೆಯುತ್ತಾ, ನಿಮ್ಮ ಸ್ನೇಹಿತನೊಡನೆ ಮಾತಾಡುತ್ತಾ ನನ್ನನ್ನು ಮಾತಾಡಿಸಲು ಯತ್ನಿಸಿದ್ದಿರಲ್ಲಾ! ಹ್ಞಾ! ಆಗಂತೂ ನನ್ನ ಎದೆ ಝಲ್ಲೆನ್ನುತ್ತಿತ್ತು ಮಹಾರಾಯರೇ...."

"ಅಲ್ಲೇ, ಊಟಕ್ಕೆ ನೀಡುವವರ ಸಂಗಡ ಮಾತಾಡಲು ನಮಗೇತರ ಸಂಕೋಚ? ಆದರೆ ನೀನು ಮಾತ್ರ ಬರೀ 'ಹ್ಞೂ' ಮೇಲೇ ತಡಾಯಿಸಿ ಬಿಟ್ಟೆಯಲ್ವೇ?"

"ಅಲ್ರೀ, ನೀವು ನಾನು ನೀಡಿದಷ್ಟನ್ನು ಊಟ ಮಾಡುವುದನ್ನು ಬಿಟ್ಟು "ಸಾಕ್ರೀ" ಎನ್ನುತ್ತಿದ್ದಿರಲ್ಲಾ ಆಗಂತೂ ಮೈಯೆಲ್ಲಾ ಜುಮ್ಮೆಂದಂತಾಗುತ್ತಿತ್ತು. ಅಲ್ದೇ, ನಾನಿನ್ನು ಮೊಸರು ತರಬೇಕೆಂದುಕೊಳ್ಳುತ್ತಿದ್ದಾಗಲೇ ನೀವು 'ಮೊಸರಿದೆಯೇ' ಎಂದು ಖಾನಾವಳಿಯಲ್ಲಿ ಕೇಳಿದಂತೆ ಕೇಳಿಬಿಟ್ಟರಲ್ಲಾ! ಆಗಂತೂ ನನಗೆ 'ಹ್ಞೂ' ಎನ್ನಲು ಸಾಕುಸಾಕಾಗಿ ಹೋಯಿತು ನೋಡಿ."

"ಮತ್ತೇ, ಏನಾದರೊಂದು ನೆವದಿಂದ ಮಾತನಾಡಿಸಬೇಕೆಂದು ನಾನು ಎಣಿಕೆ ಹಾಕುತ್ತಿದ್ದೆ. ನೀನು 'ಹ್ಞೂ' ಗುಟ್ಟಿ ಮುಗಿಸುತ್ತಿದ್ದೆ. ಅಲ್ಲೇ

ನಾನು ‘ ಮೊಸರಿದೆಯೇ ’ ಎಂದಾಗ ನೀನು ಮರ್ಯಾದೆ ಮುಚ್ಚಿಕೊಳ್ಳಲು ‘ ಇನ್ನೂ ಸ್ವಲ್ಪ ಅನ್ನ ನೀಡಲೇ ? ’ ಎಂದೇಕೆ ಕೇಳಬಾರದಿತ್ತು. ನನಗೇನೋ ಸಾಕಾಗಿದ್ದರೂ ನಿನ್ನ ಕೇಳಿಕೆಗೆ ಬೆಲೆ ಕೊಟ್ಟು, ಇನ್ನೂ ಸ್ವಲ್ಪ ಅನ್ನ ನೀಡಿಸಿ ಕೊಳ್ಳುತ್ತಿದ್ದೆ.

“ ಮೊಸರನ್ನೇ ಕೇಳಿದವರು ಇನ್ನೂ ಸ್ವಲ್ಪ ಅನ್ನವನ್ನೇಕೆ ಕೇಳಲಿಲ್ಲ? ”

“ ನನಗೆ ಅಷ್ಟೇ ಸಾಕಾಗಿತ್ತೆಂದು ಮೊದಲೇ ಹೇಳಿದೆನಲ್ಲಾ ! ”

“ಬಿಡ್ರೀ ನೀವು! ನಾನು ಅಷ್ಟು ನೀಡಿದ್ದೇ ಹೆಚ್ಚೆಂದುಕೊಳ್ಳದೆ, ಇನ್ನೂ ಕೇಳಿ ಕೇಳಿ ನೀಡಬೇಕಾಗಿತ್ತೆನ್ನುವಿರಲ್ಲಾ ! ”

“ ಹಾಗಿದ್ದ ಪಕ್ಷದಲ್ಲಿ ಊಟಕ್ಕೆ ನೀಡಲಿಕ್ಕಾದರೂ ಏಕೆ ಬರಬೇಕಾಗಿತ್ತು. ನಿಮ್ಮವ್ವನೋ ನಿಮ್ಮಕ್ಕನೋ ಬಂದು ಕೇಳಿ ಕೇಳಿ ಹೊಟ್ಟೆತುಂಬಾ ಎಲ್ಲೆಲ್ಲೂ ಜಾಗ ವುಳಿಯದಂತೆ ಉಣಿಸುತ್ತಿದ್ದರು.”

“ ಬೇರೆಲ್ಲರಿಗೂ ಅವರೇ ನೀಡುತ್ತಿದ್ದರು. ಈ ಸಲಮಾತ್ರ ನಿಮಗೆ ನೀಡಲು ನಾನು ನಿಂತೆ.”

“ ಏಕೆ ? ”

“ ನೀವು ನನ್ನನ್ನು ಲಗ್ನವಾಗ್ತೀರಂತ.”

“ ನಿನಗಾಗಲೇ ಮೊದಲೇ ಹೇಗೆ ತಿಳಿದಿತ್ತೆ ? ”

“ ಬೇರೆ ವರಗಳನ್ನು ನೋಡಿದಾಗ ಮನಸ್ಸಿಗೆ ಒಂದು ತರಹಾ ಬೇಸರ ವಾಗುತ್ತಿತ್ತು. ನಿಮ್ಮನ್ನು ನೋಡಿದಾಗ ಒಂದು ತರಹಾ ಉಲ್ಲಾಸವಾಗು ತ್ತಿತ್ತು. ಕನಸಿನ ವಸ್ತುವನ್ನು ನನಸಿನಲ್ಲಿ ಕಂಡಂತಾಗಿತ್ತು.”

“ ನನ್ನನ್ನು ಒಂದು ವಸ್ತುವನ್ನಾಗಿ ಮಾಡಿಕೊಂಡಿದ್ದಿಯಾ ?”

“ ಊ್ಹ ನೀವಂತೂ! ನನ್ನನ್ನು ಗೋಳಾಡಿಸಲು ಹಾತೊರೆಯುತ್ತೀರಿ.”

“ ಅಲ್ಲೇ ಅಷ್ಟರ ಮೇಲಿಂದಲೇ ನಾನು ನಿನ್ನನ್ನು ಮದುವೆ ಮಾಡ್ಕೊ ಳ್ತೀನಿ ಅಂತ ನೀನು ಹೇಗೆ ತಿಳಿದೆ?”

“ ಏಕೋ ನನಗೆ ಹಾಗೆನಿಸುತ್ತಿತ್ತು. ”

“ ಹುಚ್ಚೀ, ನಾನು ತಮಾಷೆಮಾಡಿ ನಗುತ್ತಿರುವುದನ್ನು ನೋಡಿ ನಿನಗೆ ಹಾಗೆನಿಸಿರಬಹುದು. ನಾನು ಕನ್ಯೆ ನೋಡಲು ಹೋದಲ್ಲೆಲ್ಲಾ ಸ್ವಲ್ಪ ಹಾಗೇ

ಇರುವುದು, ಗೊತ್ತೇನು? ಎಷ್ಟೋ ಕನ್ಯೆಯರನ್ನು ಬಿಟ್ಟಂತೆ ನಿನ್ನೂ ಬಿಟ್ಟು, ಬೇರೆಯುವಳನ್ನು ಲಗ್ನವಾಗಿದ್ದರೆ?"

"ನಾನು ಅದನ್ನೂ ಯೋಚಿಸಿದ್ದೆ. ಒಂದು ಪಕ್ಷ ಹೀಗಾದರೆ ಹೇಗೆ ಅಂತಲೂ ಆಲೋಚಿಸಿದ್ದೆ. ಎಷ್ಟೋ ಕತೆ ಕಾದಂಬರಿಗಳಲ್ಲಿ ಆ ರೀತಿ ಆದು ದನ್ನು ನಾನು ಓದಿದ್ದೆ. ನನ್ನ ಸ್ಥಿತಿಯೂ 'ಹಾಗಾದರೆ ಹೇಗೆಂದು ಬಹು ದುಃಖಿತಳಾಗಿದ್ದೆ. ಒಂದು ಪಕ್ಷ ನೀವು ನನ್ನ ಮಾಡಿಕೊಳ್ಳದಿದ್ದರೆ ನನ್ನ ಜೀವನವೇ ಒಂದು ದುಃಖದ ಹೊಂಡದಲ್ಲಿ ಕೊಳೆಯಬೇಕಾಗುತ್ತಿತ್ತು. ಮನಸ್ಸಿಗೆಷ್ಟೂ ನೆಮ್ಮದಿ ಇರುತ್ತಿರಲಿಲ್ಲ."

"ಭಲೇ ಭಲೇ! ಎಲೇ, ಬಾರೇ ಇಲ್ಲಿ. ನಿನಗೇನು ವರಬೇಕು ಬೇಡು."

"ಇದೇನ್ರೀ, ನಾಟಕಾ ಆಡ್ತೀರಲ್ಲಾ! ಅದೇಕೆ ಹಾಗೆ ಕೇಳ್ತೀರಿ?"

"ನೀನು ನನ್ನನ್ನು ಅಷ್ಟು ಪ್ರೇಮಿಸುತ್ತಿದ್ದಿ ಎಂದ ಮೇಲೆ ನಾನು ನಿನಗೆ ವರ ಕೊಡಬೇಕೋ ಬೇಡವೋ? ಅಲ್ಲೇ, ನಾನು ಬರೀ ಓದಿದ್ದೆ, ಕೇಳಿದ್ದೆ ನೋಡೆ – ನಾಯಕ ನಾಯಕಿಯರು ಮೊದಲ ನೋಟಕ್ಕೇ ಪ್ರೇಮ ಪಾಶ ಬಂಧಿತರಾದರೆಂದು. ಆದರೆ ನೀನು ಅದನ್ನು ಪ್ರತ್ಯಕ್ಷಾನುಭವದಿಂದ ತೋರಿಸಿಕೊಟ್ಟೆ. ಎಲೇ, ಪ್ರಿಯತಮೇ, ನೀನು ನನಗೆ ಒಂದು ಮಹತ್ತಮ ನಾದ ಪಟ್ಟಕಟ್ಟಿ, ನನಗೆ ಅತಿ ಸಂತೋಷವನ್ನುಂಟು ಮಾಡಿರುವೆ; ಹೆಮ್ಮೆ ಪಡುವಂತೆ ಮಾಡಿರುವೆ. ಆದುದರಿಂದ ನೀನು ಕೆಲವು ದಿನಗಳಿಂದ ಕಾಡಿ ಬೇಡುತ್ತಿದ್ದ ಆ ರೇಷ್ಮೆಸೀರೆಯನ್ನು ಆನಂದದಿಂದ ತಂದುಕೊಡುತ್ತೇನೆ, ಇಂದೇ."

"ಅಯ್ಯೋ, ನೀವು ಸೀರೆಯನ್ನು ತಂದುಕೊಟ್ಟು, ನನ್ನ ಪ್ರೇಮದ ಪ್ರತಿಫಲವೆನ್ನುವಿರಾ?!"

"ಛೇ, ಛೇ! ಹುಚ್ಚೀ, ಸೀರೆಯು ಪ್ರೇಮದ ಕಾಣಿಕೆ. ಅಲ್ಲದೆ ಬಾಳಿನಲ್ಲಿಯೂ ಅವಶ್ಯಕವಾದುದು. ನಿನ್ನ ಪ್ರೇಮಕ್ಕೆ ಪ್ರತಿಫಲವಾಗಿ ನಾನು ಕೊಡುವುದು ಇದು .... ಎಲ್ಲಿ? .... ಸುಮ್ನೇ ಮುಖ ಎತ್ತೇ .... ಹ್ಞಾ, ಈಗಾದ್ರೂ ಸಮಾಧಾನವಾಯ್ತೇ?"

"ಅಯ್ಯೋ, ನಿಮ್ಮ ಜೊತೆ ಬಾಳ್ವೆ ಮಾಡೋದೂ ಹುಚ್ಚರ ಜೊತೆ ಬಾಳ್ವೆ ಮಾಡಿದಂತೆ."

"ಮೆಲ್ಗೇ ಹುಚ್ಚಾ ಅಂದ್ಬಿಟ್ಟೆಯಲ್ಲೇ, ಹುಚ್ಚರಲ್ಲದವರನ್ನು ಹುಚ್ಚ ರನ್ನಾಗಿಸುವ ಮಾಟಗಾರತಿ?"

" ಹ್ಞಾ ! "

" ಹಾಗೇನಿಲ್ಲಾ, ಅಯ್ಯೋ ಮಹಾರಾಯ್ತಿ, ಮಾತಿನಲ್ಲೇ ನೀನು ಬಹಳ ಮೈಮರೆಯುತ್ತೀ. ಬೇಗ ಹೋಗಿ ಅಡುಗೆ ಮಾಡು ಮಹಾರಾಯಳೇ, ನಾನು ಸ್ವಲ್ಪ ಹೊರಗೆ ಹೋಗಿ ಬರ್ತೀನಿ. ಹೀಗೇ ಮಾತಾಡಿಕೊಳ್ತಾ ಇದ್ರೆ ನಾನೇನೋ ಸುಮ್ಮನೇ ಇದ್ದೇನು–ಆದರೆ ಹೊಟ್ಟೆಯೊಂದು ಕೇಳ್ಬೇಕಲ್ಲಾ ? "

" ಬೇಗನೇ ಬರ್ರಿ – ನನಗೆ ಬೇಸರವಾಗುತ್ತೆ. "

" ಅಲೇಲೆಲೇ ! ನನಗೇನೂ ಬೇರೇ ಉದ್ಯೋಗಾನೇ ಇಲ್ಲಂತ ತಿಳ ಕೊಂಡಿಯಾ ಇಪ್ಪತ್ನಾಲ್ಕುತಾಸೂ ನಿನ್ನಬಳಿ ಇರಲು ? ಅಡಿಗೆ ಕೆಲಸದಲ್ಲಿ ಮೈಮರೆತರೆ ಏನೂಬೇಸರವಾಗೋದಿಲ್ಲ. ನೋಡೇ ಇಲ್ಲಿ, ಒಂದೇ ಸಮನೇ ಬಿಡದಂತೆ ಮಾತಾಡಿದರೂ ಸಹ ಬೇಸರವಾಗುತ್ತೆ. ಅದಕ್ಕಂತಲೇ ಆಗೀ ಗೊಮ್ಮೆ ಮಾತಾಡುತ್ತಿದ್ದರೇ ರುಚಿ ಹೆಚ್ಚು. ಉಹ್ಞ, ಇನ್ನು ನಡೀ ಕರ್ಮ ಪ್ರಪಂಚಕ್ಕೆ. ಎಲ್ಲೀ .... ಇನ್ನೊಂದ್ಸಲ. "

" ಉಹ್ಞ ಹೋಗ್ರೀ ನೀವೂ, ಚಿಕ್ಕಮಕ್ಕಳ ಹಾಗೆ ಮಾಡ್ಕೊಂತಾ. "

" ಚಿಕ್ಕಮಕ್ಕಳಿಗಿಂತಲೂ ಚಿಕ್ಕವನೇ ನಾನು. ಗೊತ್ತೇ .... ಹ ಹ್ಹ ಹ್ಹಾ ....! "

" ಉಹ್ಞ ಹೋಗ್ರೀ ನೀವಂತೂ .... "

" ಹೊರಟೇ ಬಿಟ್ಟೆ. "

# ಹ್ಞಾ !

" ಅಲ್ರೀ, ನೀವು ಇಂಟರ್‌ಮಿಡಿಯೆಟ್ ಫೇಲಾಗಲಿಕ್ಕೆ ಕಾರಣ, ನೀವು ಓದನ್ನು ಅಲಕ್ಷೆಮಾಡಿ ಅನೇಕ ನಾಟಕಗಳನ್ನು ಕಾಲೇಜಿನಲ್ಲಾಡಿದ್ದೇ ಅಂತೆ ಅಲ್ವೇನ್ರೀ ? "

" ಹ್ಞಾ "

"ಅಲ್ರೀ, ಪುನಃ ಪರೀಕ್ಷೆಗೆ ಕಟ್ಟಲಿಕ್ಕೆ ನಿಮಗೆ ಮನಸ್ಸೇ ಆಗದೆ ನಾಟ್ಯ ಕಲೆ, ಸಾಹಿತ್ಯ, ಮೊದಲಾದವುಗಳ ಸೇವೆಯಲ್ಲೇ ತೊಡಗಿಬಿಟ್ಟರಂತೆ ಹೌದೋ ? "

" ಹ್ಞಾ "

" ಅಲ್ರೀ, ನೀವು ಕಾಲೇಜಿನಲ್ಲಿ ತೆಗೆಸಿದ ನಾಟಕದ ಫೋಟೋಗಳನ್ನೆಲ್ಲಾ ನೋಡಿದ ಮೇಲೆ ನನಗೆಷ್ಟು ಉಲ್ಲಾಸವಾಗಿತ್ತು ಬಲ್ಲಿರಾ ? ನಾನು ಇಂಥವರು ನನ್ನ ಪತಿಯಾಗಬಹುದೇ ಎಂದು ಚಿಂತಿಸುತ್ತಿದ್ದೆ. ಜೊತೆಗೆ ನಿಮ್ಮ ಕವನ, ಕತೆ ಮೊದಲಾದ ಸಾಹಿತ್ಯ ಕೃತಿಗಳನ್ನು ನೋಡಿದ ಮೇಲಂತೂ ನಾನು ಎಷ್ಟು ಜನ್ಮಗಳ ಪುಣ್ಯದಿಂದ ನಿಮ್ಮ ಕೈ ಹಿಡಿದೆನೋ ಎನಿಸುತ್ತದೆ. ನಿಮ್ಮನ್ನು ಅರ್ಥ ಮಾಡಿಕೊಳ್ಳಲು ನನಗೇನೂ ತಡವಾಗಲಿಲ್ಲ. ಆದರೆ ನನ್ನ ಹಾಗೆ S.S.L.C. ಪಾಸಾದವರೆಲ್ಲರೂ ನನ್ನಂತೆ ಅರ್ಥಮಾಡಿ ಕೊಳ್ಳುತ್ತಾರೆಂದು ಹೇಳಲಿಕ್ಕೂ ಬರುವಂತಿಲ್ಲ. ಅಲ್ರೀ, ನಿಮ್ಮಂಥವರನ್ನು ತಿಳಿದುಕೊಳ್ಳದ ಜನಗಳು ಕೇವಲ ಮಡ್ಡುಗಳೆಂದೇ ನನ್ನ ಭಾವನೆ. ಏಕ್ರೀ ? "

" ಹ್ಞಾ "

" ಅಲ್ರೀ, ಕಾಲೇಜು ಬಿಟ್ಟ ಮೇಲೆ ಒಂದು ವರ್ಷ ಊರಲ್ಲಿ ನಾಟಕಾ ಗೀಟಕಾ ಆಡಿ, ನಂತರ ಮದ್ರಾಸಿಗೆ ಸಿನೇಮಾ ಛಾನ್ಸ್ ನೋಡಲು ಹೋಗಿದ್ದಿ ರಂತೆ ಅಲ್ರೇ ?

" ಹ್ಞಾ "

" ಅಲ್ರೀ, ಬಹಳಾ ತಡವಾಗುವುದೆಂದು ಸಿನೇಮಾದವರು ಹೇಳಿದ್ದಕ್ಕೆ ವಾಪಸು ಬಂದು ಗುಬ್ಬಿ ಕಂಪೆನಿಗೆ ಹೋಗಿ ಸೇರಿದ್ದಿರಂತೆ ; ಅಲ್ವೇನ್ರೀ ? "

" ಹ್ಞೂ "

" ಅಲ್ರೀ, ನಿಮಗೆ ಪದ್ಯರಚನಾ ಸ್ಪರ್ಧೆ, ನಟನಾ ಸ್ಪರ್ಧೆಗಳಲ್ಲಿ ಅನೇಕ ಬಹುಮಾನಗಳು ಬಂದಿದ್ದಾವಂತೆ ..... ಮೊನ್ನೆ ತೋರಿಸಿದಿರಲ್ಲಾ ಅವೇ ಅಲ್ವೇ ಅವು?"

" ಹ್ಞೂ "

" ಅಲ್ರೀ, ನೀವು ಗುಬ್ಬಿಕಂಪನಿ ಬಿಟ್ಟು ಬಂದ ಮೇಲೆ ನಿಮ್ಮ ಮಿತ್ರರ ದೊಂದು ನಾಟಕ ಕಂಪೆನಿಯ ಮೇನೇಜ್‌ಮೆಂಟ್‌ಗಾಗಿ ಹೋಗಿದ್ದಿರಂತೆ ಅಲ್ವೇ? "

" ಹ್ಞೂ "

" ಅಲ್ರೀ ನನ್ನ ಗೆಳತಿಯರು ಹೇಳ್ತಾರೆ: ಕವಿಕಲಾವಿದರ ಕೈ ಹಿಡಿಯು ವುದೇನೋ ಭಾಗ್ಯವಾದರೂ ಕಲಾವಿದ ಹುಚ್ಚನಂತೆ; ಮತ್ತು ಭಾವನಾ ಜೀವಿಯು ಬಾಳಿನ ಕುರುಡ—ಅವನಿಗೆ ಎಲ್ಲವೂ ಗೊತ್ತಿರುತ್ತದಾದರೂ ಏನೂ ತಿಳಿಯದವನಂತೆ ಅವನ ವರ್ತನೆ ಇರುತ್ತದೆ. ನಿನ್ನ ಪತಿಯು ಕಲಾವಿದ, ಕವಿ ಎರಡೂ ಆಗಿದ್ದಾನೆ. ನೀನು ಬಹಾಳ ಜಾಗರೂಕತೆಯಿಂದ ಬಾಳ್ವೆ ಮಾಡಬೇಕಮ್ಮಾ, ನೀನೇನೋ ಮಹಾ ಭಾಗ್ಯವಂತೆ ಅಂತೂ—ಎಂದು. ನೋಡಿ, ಅವರು ಹಾಗೆ ಹೇಳಿದಾಗ ನನಗೇಕೋ ಭಯಾನಂದವಾಗುತ್ತದೆ; ಎದೆ ನಡುಗುತ್ತದೆ. ಆದರೆ ನಿಮ್ಮನ್ನು ಕಂಡರೆ ಸಾಕು. ಆ ಭಯವು ಕ್ಷಣವೂ ನಿಲ್ಲುವುದಿಲ್ಲ. ಆದರೂ ನಿಮ್ಮ ವರ್ತನೆಯನ್ನು ನಾನು ಸೂಕ್ಷ್ಮವಾಗಿ ನೋಡಿ ದಾಗ ನನ್ನ ಗೆಳತಿಯರಮಾತು ಸುಳ್ಳೆನಿಸುವುದಿಲ್ಲ. ಅಂತೂ ನಿಮ್ಮ ಕೈ ಹಿಡಿದ ನಾನು ಪುಣ್ಯವಂತೆ ಕಾಣ್ರೀ....ಏನಂತೀರಿ? "

" ಹ್ಞೂ "

" ಅಲ್ರೀ, ನಿಜವಾಗ್ಲೂ ಸುಳ್ಳಲ್ರೀ, ನಿಮ್ಮನ್ನು ಮೊದಲು ನೋಡಿದಾಗಿ ನಿಂದ ನಿಮ್ಮ ಜೊತೆ ಹೇಗೆ ಹೇಗೆ ನಡಕೊಳ್ಳಬೇಕಾದೀತು ಎಂದು ಎಣಿಕೆಹಾಕಿ ಕೊಂಡಿದ್ದೆನೋ ಅಂತೆಯೇ ನಡೆಯುತ್ತಿದೆ. ಇದಕ್ಕಲ್ಲವೇನ್ರೀ ಪೂರ್ವಾರ್ಜಿತ ಪುಣ್ಯವನ್ನೋದು? "

" ಹ್ಞೂ "

" ಅಲ್ರೀ, ನಿಮಗೆ ಕೆಮ್ಮು ಆಗಿತ್ತಲ್ಲಾ ಆ ಗುಳಿಗಿ ತೊಗೊಂಡಿದ್ಯಾ್ರ?"

" ಹ್ಞೂ "

"ಅಲ್ರೀ, ಹುಟ್ಟಿದಾಗಿನಿಂದ 16 ವರ್ಷದ ವರೆಗೆ ಇದ್ದ ತೌರೂರನ್ನು ಹೇಗೆ ಬಿಟ್ಟುಹೋಗಬೇಕು....ಹಾಗೆ ಬಿಟ್ಟಿರುವುದು ಸಾಧ್ಯವಾದೀತೇ ಎಂದು ಬಹು ಚಿಂತಿಸುತ್ತಿದ್ದೆ. ಆದರೆ ಗಂಡನ ಸಹವಾಸದಲ್ಲಿ ತೌರನ್ನು ಮರೆಯು ಲಿಕ್ಕೆ ಅಷ್ಟೇನೂ ಕಷ್ಟವಾಗಲಾರದೆಂದು ಹೇಳಿದರೂ ಆಗಾಗ್ಗೆ ಹಂಬಲವಾಗು ತ್ತಿರುತ್ತದೆ. ಇದು ಎಲ್ಲರಿಗೂ ಸ್ವಾಭಾವಿಕ ನೋಡ್ರಿ?"

"ಹ್ಞಾ"

"ಅಲ್ರೀ, ನೀವು ದುಡಿಮೆ ಇಲ್ಲದೇ ಹೀಗೇ ಎಷ್ಟು ದಿನ ಇರಬೇಕೆಂದಿ ದ್ದೀರಿ? ಸಿನೇಮಾ ಕಂಪೆನಿ, ನಾಟಕ ಕಂಪೆನಿಗಳನ್ನೆಲ್ಲಾ ತಿರುಗಾಡಿ, ಸುಮ್ಮನೇ ಕೈಯಿಂದ ನೂರಾರು ರೂಪಾಯಿಗಳನ್ನು ಕರ್ಚುಮಾಡಿಕೊಂಡು ಕುಳಿತಿರಲ್ಲಾ ಮುಂದೇನೆಂಬ ಯೋಚನೆಯಿಲ್ಲವೇ?....ಎಲ್ಲಾ ಯೋಚನೆಯಿದೆ ಆದರೆ ದೈವಾನುಕೂಲವಿಲ್ಲವೆನ್ನುವಿರಾ?"

"ಹ್ಞಾ"

"ಅಲ್ರೀ, ನೀವು ಮದ್ರಾಸಿನಿಂದ ಬಂದದಿನ ಹೊರಗಡೆ ಬೇಲಿಗಳ ಸಂದಿಯಲ್ಲಿ ಹೋಗುತ್ತಿದ್ದಾಗ ಒಂದು ನಾಗರ ಹಾವು ಮುಂದೆ ಮಗ್ಗುಲಲ್ಲಿಯೇ ಇದ್ದರೂ ನೀವು ಯೋಚನೆಯಲ್ಲೇ ಮಗ್ನರಾಗಿ ತೀರಾ ಅದರ ಸಮೀಪಕ್ಕೆ ಹೋಗಿಬಿಟ್ಟಿರಂತೆ. ಅದು ಬುಸ್ಸೆಂದೆದ್ದು ನಿಮ್ಮ ಮಣಕಾಲಿಗೆ ಹೆಡೆ ತಾಗಿಸಿ ದಾಗ ನಿಮಗೆಚ್ಚರವಾಗಿ ಒಮ್ಮೆಯೇ ಮೇಲಕ್ಕೆ ಜಿಗಿದು ಹಿಂದಕ್ಕೆ ಹಾರಿ ಕೊಂಡಿರಂತೆ. ಆಮೇಲೆ ಅದು ನಿದಾನವಾಗಿ ಎಡಗಡೆಯ ಬೇಲಿಯೊಳಗೆ ಹರಿದು ಹೊಯ್ತಂತೆ ಅಲ್ವೇ?"

"ಹ್ಞಾ"

"ಅಲ್ರೀ, ಛೇ ಛೇ! ನಿಮ್ಮದೆಂಥಾ ಭಾವನಾಪರವಶತೆ ಮಹಾ ರಾಯರೇ!! ನಿಜವಾಗಲೂ ಅದು ಒಂದು ಕಂಟಕ ಪಾರಾದಂತೆ. ಅಂತೂ ನಿಮ್ಮ ಭಾವನಾಪರವಶತೆಗೆ ಸರಿಸಮಾನವಿಲ್ಲವೆಂದು ನನ್ನ ಅಭಿಪ್ರಾಯ. ಹೇಗ್ರೀ?"

"ಹ್ಞಾ"

"ಅಲ್ರೀ, ನೀವು ಬಳ್ಳಾರಿಯಲ್ಲಿ ಕಾಲೇಜಿನಲ್ಲಿ ಓದುತ್ತಿದ್ದಾಗ, ಬಳ್ಳಾರಿ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯವರು ಏರ್ಪಡಿಸಿದ್ದ ನಾಟಕಗಳ ಸ್ಪರ್ಧೆಗೆ

ಎಲ್ಲಾ ಸಂಸ್ಥೆಗಳಿಂದಲೂ ನಾಟಕಗಳು ಬಂದಿದ್ದವಂತೆ. ಒಟ್ಟು ನಾಲ್ಕು ಭಾಷೆಗಳ ಹತ್ತು ನಾಟಕಗಳಲ್ಲಿ—ಕನ್ನಡ ನಾಟಕದಲ್ಲಿ ಅಭಿನಯಿಸಿದ ನಿಮಗೆ 'ಅತ್ಯುತ್ತಮ ನಟ' [Best Actor] ಪದಕ ಬಂದಿತಂತೆ ಅಲ್ವೇ? ಆ ಮೆಡಲೇ ಏನು ಮೊನ್ನೆ ತೋರಿಸಿದ್ದು? ಈ ವಿಷಯ ಹಿಂದೂ ದೈನಿಕದಲ್ಲಿ ಕೂಡಾ ಪ್ರಕಟವಾಗಿದೆಯಂತೆ ಅಲ್ವೇನ್ರಿ?"

"ಹ್ಞೂ"

"ಅಲ್ರೀ, ನಮ್ಮೂರಲ್ಲಿ ಒಂದೇ ವರ್ಷ ಮಳೆ ಬೆಳೆ ಚೆನ್ನಾಗಿ ಆದ್ರೆ ರೈತರಿಗೆ ನಾಲ್ಕು ವರ್ಷ ಏನೂ ತೊಂದರೆಯಿಲ್ಲದಂತೆ ಜೀವನ ಸಾಗಿಸಲು ಅಡ್ಡಿ ಯಿಲ್ಲ. ಆದರೆ ಆ ರೀತಿ ಮಳೆ ಬೆಳೆ ಚೆನ್ನಾಗಿ ಆಗುವುದಾದರೂ ನಾಲ್ಕೈದು ವರ್ಷಕ್ಕೊಮ್ಮೆಯೇ! ಇದೂ ಆ ವಿಧಾತನ ಲೀಲೆ ಇರಬೇಕಲ್ವೇ?"

"ಹ್ಞೂ"

"ಅಲ್ರೀ, ನೀವು ಹುಟ್ಟು ಕಲಾವಿದರು ಕಾಣ್ರೀ. ನಿಮ್ಮದು ಸದಾ ಹಾಸ್ಯ ಪ್ರಕೃತಿ. ನೀವು ಚಿಕ್ಕವರಿದ್ದಾಗ ಅಂದ್ರೆ ಐದಾರು ವರ್ಷದವರಿದ್ದಾಗ ಒಮ್ಮೆ ನಿಮ್ಮ ಅಕ್ಕ ಅಣ್ಣರಿಗೆ ಜಗಳವಾಯಿತಂತೆ. ಅತ್ತೆ ಹೇಳಿದರು; ಬಹು ಸ್ವಾರಸ್ಯವಾಗಿದೆ ಈ ಜಗಳ ಮತ್ತು ನಿಮ್ಮ ತೀರ್ಪು. ಅವರಿಬ್ಬರ ಬಣ್ಣವೂ ನಿಮ್ಮ ಹಾಗೆ ಕೆಂಪಲ್ಲವಲ್ಲ? ಕಪ್ಪು ಬಣ್ಣದ ಅವರಿಬ್ಬರಿಗೂ 'ನಾನು ನಿನಗಿಂತ ಕೆಂಪು. ನೀನು ನನಗಿಂತ ಕಪ್ಪು' ಎಂದು ವಾದ ಹುಟ್ಟಿ ಜಗಳ ವಾಗುತ್ತಿರುವಾಗ, ನೀವು ದೊಡ್ಡ ಮನುಷ್ಯರು ಹೋಗಿ, 'ಎಲ್ಲಿ ನಾನು ನೋಡಿ ಹೇಳುತ್ತೇನೆ ಯಾರು ಹೆಚ್ಚು ಕಪ್ಪೆಂದು' ಎಂದಿರಂತೆ. ಆಗ ಅವ ರಿಬ್ಬರೂ ಕೈಗಳನ್ನು ಮುಂದೆ ಚಾಚಿದರಂತೆ. ನೀವು ಅವರಿಬ್ಬರ ಕೈಗಳನ್ನು ಸ್ವಲ್ಪಹೊತ್ತು ಪರೀಕ್ಷಿಸಿ, ಹಾಗೇನ್ರೀ ಹೇಳೋದು?! ಹಹ್ಹಾ ಹಹ್ಹಾ. 'ಥೂ ಒಂದು ಕರೇ ಕಾಗಿ, ಒಂದು ಕರೇ ಮುಸ್ಯಾ' ಎಂದಿರೆಂದರೆ ಆಗಲೇ ನಿಮ್ಮ ಹಾಸ್ಯದ ಮಟ್ಟವೆಷ್ಟು! ಛ್ಞ! ಹ್ಹಹ್ಹಾ.... ಆಗ ಅವರಿಬ್ರೂ ಒಂದಾಗಿ ನಿಮ್ಮಗೆ 'ನೀನು ಬಹಾಳ ಚೆನ್ನಾಗಿದ್ದೀಯಾ ಕೆಂಪು ಮಂಗ' ಎಂದೆನ್ನುತ್ತಾ ಜಗಳಕ್ಕೆ ಬಂದಾಗ, ಅತ್ತೆಯವರು ಬಂದು ಬಿಡಿಸಿಕೊಂಡರಂತೆ. ಇಲ್ಲದಿದ್ರೇ ನಿಮ್ಮ ಗತಿ ಗಣಪತಿ ಆಗತಿತ್ತಲ್ವೇ....ಆಗಲೇ ಅಷ್ಟು ಚಾಷ್ಟಿ, ಈಗ ಇನ್ನೆಷ್ಟಿರಬೇಡ? ನಾನು ನಿಮ್ಮ ಕೈಯಲ್ಲಿ ಪೂರೈಸುವುದು ಬಹಾಳ ಕಷ್ಟ—ಏಕ್ರೀ?"

"ಹ್ಞೂ"

“ಅಲ್ರೀ, ನಿಮ್ಮ ಹಾಸ್ಯಕ್ಕೂ ಒಂದು ವೇಳೆ ಒಂದು ತಾಣವಿರಬೇಡವೇ! ನೀವೇನೋ ಅದು ಬೃಹದ್ವ್ಯಾಪಿ ಅಂತ ವಾದಿಸ್ತೀರಿ – ಆದರೆ ಕೆಲವೆಡೆಯಾದರೂ ದಯ ಮಾಡಿ ಉಪಯೋಗಿಸಬೇಡಿ ಮಹಾರಾಜರೇ .... ಏನ್ರೀ ಹಾಸ್ಯಬ್ರಹ್ಮರೇ, ತಾವುಗಳು ನನ್ನನ್ನು ನೋಡಲು ಬಂದಾಗ, ಊಟಮಾಡಿ ತಾಂಬೂಲಕ್ಕೆ ಕುಳಿತಾಗ ನಮ್ಮ ತಂದೆಯವರು ಡೇಗಿದಾಗ, ನೀವೂ ‘ಓಬ್ಬ’ ಅಂತ ಅವರ ಹಾಗೇ ಡೇಗಿ ಅಣಕಿಸಬೇಕೇ? ನಾನು ಕದದ ಹಿಂದೆ ನಿಂತು ನೋಡುತ್ತಿದ್ದವಳು ನಗು ತಡೆಯ ಲಾರದೆ ಹಿತ್ತಲಕಡೆ ಓಡಿಬಿಟ್ಟೆ. ನಿಮ್ಮ ಜೊತೆ ಕುಳಿತವರೆಲ್ಲಾ ನಕ್ಕು ನಕ್ಕು ಬಿದ್ದರು. ನಮ್ಮ ತಂದೆಯವರಂತೂ ಅವರೆಲ್ಲರಿಗಿಂತಲೂ ಹೆಚ್ಚಾಗಿ ನಕ್ಕುಬಿಟ್ಟರಲ್ಲವೇ?”

“ಹ್ಞೂ”

“ಅಲ್ರೀ, ಹೊರಗಿನಕಿಂತಲೂ ಒಳಗೆ ನಮ್ಮ ಹೆಂಗಸರ ನಗೆ ಹೇಳಿ ತೀರದು. ಮೂರು ದಿನ ನೆನಸಿಕೊಂಡು ನಗುತ್ತಿದ್ದೆವು ಮಹಾದೇವರೇ. ನೀವು ಬಂದು ಹೋದದ್ದು ನಗೆಯ ಮಳೆಯೇ ಬಂದು ಹೋದಂತಾಯಿತು. ಅದರ ಹಸಿ ಆರಲು ಬಹು ದಿನ ಬೇಕಾಯಿತು. ಮತ್ತೆ ನೆನಸಿಕೊಂಡಂತೆ ಆ ಮಳೆ ಬಂದೇ ಬರುತ್ತೆ. ಏನ್ರೀ ನಿಮ್ಮ ಹಾಸ್ಯದಲ್ಲಿ ನಮ್ಮ ತಂದೆ ತನ್ನ ಅಪಮಾನ ಮರೆತುಬಿಟ್ಟರು ಪಾಪ. ದಯವಿಟ್ಟು ಇನ್ನು ಮೇಲಾದರೂ ಕೆಲವು ಕಡೆಯಾದರೂ ನಿಮ್ಮ ಹೊತ್ತಿಗೆಯನ್ನು ಬಿಚ್ಚಬೇಡಿ ಕಾಣ್ರೀ ಆ್ಞ?”

“ಹ್ಞೂ”

“ಅಲ್ರೀ, ನೀವು ಬಹಾಳ ಒಳ್ಳೇಯವರು ಕಾಣ್ರೀ.... ನನ್ನಾ ತುಂಬಾ ಪ್ರೇಮಿಸ್ತೀರಿ....ಅಲ್ವೇನ್ರೀ?”

“ಹ್ಞೂ”

“ಅಲ್ರೀ, ನೀವು ಎಲ್ಲಿಗಾದ್ರೂ ಹೋದ್ರೇ ಪತ್ರ ಬರೆಯೋದ್ನಾ ಮರೀಬೇಡಾ ಕಾಣ್ರೀ, ನನಿಗೆ ಸ್ವಲ್ಪವಾದರೂ ಸಮಾಧಾನವಾಗುವುದೇ ಇಲ್ರೀ. ನೀವಿಲ್ಲಿಲ್ಲದಿದ್ದಾಗ ದಿಕ್ಕು ತಪ್ಪಿದ ಹರಿಣಿಯಂತಾಗುತ್ತದೆ – ನನ್ನ ಸ್ಥಿತಿ. ಆಗ ನಿಮ್ಮ ಪತ್ರವನ್ನಾದರೂ ಕಂಡ್ರೇ ಎಷ್ಟೋ ಸಮಾಧಾನವಾದೀತು. ನೀವೇನೋ ಹೋಗುವಾಗ ಮರೆಯದೇ ಬರೀತೀನಿ ಅಂತ ಹೇಳಿ ಹೋಗ್ತೀರಿ– ಆದರೆ ಬರೆಯೋದೇ ಇಲ್ಲ. ಬಹಳ ಕೆಲಸವಿತ್ತು ಬಿಡುವಾಗಲಿಲ್ಲಾ ಅಂತ ಹೇಳಿಬಿಡ್ತೀರಿ–ತಿರುಗಿ ಬಂದಮೇಲೆ. ಪತ್ರ ಬರೆಯುವಷ್ಟು ಪುರುಸೊತ್ತಿರು

ವುದಿಲ್ಲವೇ ಅಲ್ಲಿ ? ನೋಡ್ರೀ, ಇನ್ನು ಮೇಲಾದರೂ ಹಾಗೆ ಮಾಡಕೂಡದು. ದಯವಿಟ್ಟು ಹೋದ ತಕ್ಷಣವೇ ಬರಿಯಬೇಕು. ಏನ್ರೀ ? ”

“ ಹ್ಞೂ ”

“ ಅಲ್ರೀ, ನೀವು ಯಾವಾಗ್ಲೂ ಇಷ್ಟೇ ಬರಿ ಹ್ಞೂ ಅಂತೀರಿ ಅಷ್ಟೇ. ಬೇರೆ ಊರಿಗೆ ಹೋದಮೇಲೆ ಮರೆತೇ ಬಿಡ್ತೀರಿ ನೋಡ್ರೀ ? ”

“ ಹ್ಞ ”

“ ಅಲ್ರೀ, ನನ್ನ ಹಣೇಬರಹವೇ ಹಾಗಿದೆಯೆಂದ ಮೇಲೆ ನೀವ್ಯಾಕೆ ಸುಳ್ಳು ಹೇಳ್ತೀರಿ ಪಾಪ ! .... ಮರೀತೀರಿ ನೋಡ್ರೀ ಅಂದ್ರೇ ಹ್ಞೂ ಅಂತೀರಲ್ಲಾ !! ಮರಿಬ್ಯಾಡ್ರೀ ಅಂತಾ ಗೋಳಾಡಿದರೂ ನಿಮಿಗೆ ಲಕ್ಷ್ಯ ಇದ್ರೆ ತಾನೇ !! ಶಿವಶಿವಾ !!! ಇಂಥಾ ಹುಚ್ಚರ ಕೈಯ್ಯಲ್ಲಿ ಹೇಗಪ್ಪಾ ಪೂರೈಸೋದೂ ! ಏನ್ರೀ. ನನ್ನ ಪಾಲಿನ ದೇವರೇ, ಮರೆಯದಂತೆ ಬರೀತೀನೀ ಅಂತಾ ಹೇಳ್ರೀ .... ಇಲ್ದಿದ್ರೇ ಸಮಾಧಾನವಾಗೋದೇ ಇಲ್ಲ ನನಗೆ. ಙ್ಞ ? ಬರೀತೀರಿ ತಾನೇ ? ”

“ ಹ್ಞೂ ”

“ ಅಲ್ರೀ, ಬರೀ ಹ್ಞೂ ಅಂತೀರಿ ಹೊರ್ತು ಈ ದಿನ ಏಕೋ ಮಾತಾಡೋದೇ ಇಲ್ವಲ್ಲಾ ! ಸಿಟ್ಟಾಗಿದ್ದೀರಾ ಸನ್ನ ಮೇಲೆ ? ಅಥವಾ ನಿಮಿಗೆ ಮಾತಾಡಲಿಕ್ಕೆ ಆಸ್ಪದ ಕೊಡದಂತೆ ನಾನೇ ಎಲ್ಲಾ ಮಾತಾಡ್ತೀನೀಂತ ಅಸಮಧಾನವೇ ? ಎಷ್ಟು ಮಾತಾಡ್ತಾಳಂತ ಬೇಸರವೇ ? ಮಹಾಸ್ವಾಮೀ, ಈ ಸಾರೆ ಭಾಳ ಮಾತಾಡೊಲ್ಲ ನೀವು ಉತ್ತರ ಕೊಡೋತನ್ಕ ಮುಂದೆ ಮಾತಾಡೋದೇ ಇಲ್ಲ. ಇನ್ನಾದ್ರೂ ಮಾತಾಡ್ತೀರಿ ತಾನೇ ? .... ಏನ್ರೀ ?”

“ ಹ್ಞೂ ”

“ ಅಲ್ರೀ, ಮತ್ತೇ ಬರೇ ಹ್ಞೂ ಮೇಲೇ ತಡಾಸ್ತೀರಲ್ರೀ ? ಸನ್ನಾ ಎಷ್ಟು ಗೋಳ್ಹೊಯ್ಕೊಂಡ್ರೂ ನಿಮಿಗೆ ಸಮಾಧಾನವೇ ಇಲ್ಲ. ನಾನು ನಿಮಿಗೆ ಇಷ್ಟವಿಲ್ಲವೇನ್ರೀ ? ”

“ ಹ್ಞೂ ”

“ ಅಲ್ರೀ, ನಾನು ಅತ್ತರೇ ನಿಮಗೆ ಸಮಾಧಾನವೇನ್ರೀ ! ? ‘ನಾನು ಇಷ್ಟವಿಲ್ಲವೇನ್ರೀ’ ಎಂದು ಕೇಳಿದರೂ ‘ ಹ್ಞೂ ’ ಎನ್ನೋದೇ !! ಸನ್ನ

ದೇವರೇ, ಏಕೋ ಈ ಗಳಿಗೆಯೇ ಚೆನ್ನಾಗಿದ್ದಂತಿಲ್ಲ. ಈಗ ನಿಮ್ಮನ
ಮಾತನಾಡಿಸೋದು ಸರಿಯಲ್ಲ, ಏನು ಕೇಳಿದರೂ ಹ್ಞೂ ಎಂದು ಬಿಡ್ತೀರಿ
ಏನೂ ಕೇಳಲೇ ಬಾರದು ಈಗ. ಆಮೇಲೆ ನೋಡೋಣ – ಈ ಕೆ
ಸಮಯ ಕಳೆದಮೇಲೆ. ಅಂತೂ ನನ್ನ ಪ್ರೇಮಿಸ್ತೀರಿ ತಾನೆ?"

"ಹ್ಞೂ"

"ಅಲ್ರೀ, ನನ್ನ ಮೇಲೆ ಇಷ್ಟ ತಾನೇ?"

"ಹ್ಞೂ"

"ಅಲ್ರೀ, ಮಹಾರಾಯರೇ, ಈಗ ಇಷ್ಟಕ್ಕೇ ಸಾಕು ಮಾಡಿಬಿಡ್ತೀನಿ.
ಮುಂದೆ ಒಳ್ಳೇ ಸಮಯ ನೋಡಿ ಮಾತಾಡಿಸ್ತೀನಿ; ಆಗಲಾದರೂ ಚೆನ್ನಾಗಿ
ಮಾತಾಡ್ತೀರಿ ತಾನೇ?"

"ಹ್ಞೂ"

"ಞ್ಞಾ?"

"ಹ್ಞೂ"

# ಸಂಶಯ

“ ಅಲ್ರೀ, ನೀವ್ಯಾಕೋ ಈ ದಿನ ಊಟ ಸರಿಯಾಗಿ ಮಾಡಲಿಲ್ಲಲ್ರೀ? ನೀವು ಹೀಗೆ ಮಾಡಿದರೆ ನನಗೆ ಬಹಳ ದುಃಖವಾಗುತ್ತೆ ನೋಡ್ರಿ. ಎಲ್ಲಾದ್ರೂ ತಿಂಡಿ ತಗೊಂಡಿದ್ರೇನು ಮತ್ತೆ ? ”

“ ಹ್ಞೂ, ಈ ಹೊತ್ತು ಸಾಯಂಕಾಲ ತಿರುಗಾಡಲಿಕ್ಕೆ ಹೋದಾಗ ಹಳ್ಳದ ದಂಡೆಯ ಅಂಟು ಪುರಿಕೆಯಿಂದ ತಿಂಡಿ ತಗೋಂಡಿದ್ದೆ ! ”

“ ಏನು ಮಾತಾಡಿದರೂ ಕಷ್ಟ! ಏನಾದ್ರೂ ಒಂದು ಜೋಡಿಸೇ ಇರ್ತೀರಿ ! ”

“ ಮತ್ತೆ? ನೀನು ಸಣ್ಣ ಹುಡುಗರನ್ನು ಕೇಳಿದಾಂಗೆ ಕೇಳ್ತೀಯಲ್ಲೇ, ನನ್ನ ಹೊಟ್ಟೆ ಗುಟ್ಟು ನನಗೇ ಗೊತ್ತಿರೋದಿಲ್ವೇ ? ”

“ ಹಾಗಾದ್ರೇ ದಿನಾ ಊಟಮಾಡಿದಂಗೆ ಏಕೆ ಉಣಲಿಲ್ಲ ? ”

“ ದಿನಾ ಒಂದೇತರ ಇರಲಿಕ್ಕೆ ಈ ಜೀವನದಲ್ಲಿ ಸಾಧ್ಯವೇ ಇಲ್ಲ.”

“ ಸರಿ. ಆದರೆ ಜೀವನದಲ್ಲಿ ಪ್ರತಿಯೊಂದು ಆಗುಹೋಗಿಗೂ ಕಾರಣ ವಿಲ್ಲದಿರುವುದಿಲ್ಲ. ಅಂದಲ್ಲಿ ದಿನದಂತೆ ಉಣಲಿಲ್ಲದ್ದಕ್ಕೂ ಒಂದು ಕಾರಣ ಬೇಕಲ್ಲ ? ”

“ ನಿಮ್ಮಪ್ಪ ಎಲ್ಲೀತನಕ ನಿನ್ನ ಓದಿಸಿದ್ದು ? .... ಮರ್ತೇ ಬಿಟ್ಟೇನೀ ”

“ ಮತ್ತೆ ದಾರೀ ಬದಲಾಯಿಸ್ಬೇಡ್ರೀ ದಾರೀ ಹಿಡಿದು ಮಾತಾಡ್ರೀ ”

“ ಆ್ಞ .... ಹ್ಞಾ ! ನಾನು ದಾರಿ ತಪ್ಪಿರೋದು ನಿನಿಗ್ಹ್ಯಾಗೆ ಗೊತ್ತು? ”

“ ಉತ್ತರ ದೊರೆಯದಿದ್ರೇ ಅಡ್ಡದಾರೀ ಹಿಡಿದು ಅಣಕಿಸಲಿಕ್ಕೆ ಹೋಗ್ತೀರಲ್ಲಾ ! ಅಷ್ಟೂ ತಿಳಿಯೋದಿಲ್ವೇ ನನಗೆ ?

“ ಅಷ್ಟಾದರೆ ಸರಿ ಮಹಾರಾಯಳೇ ! ಮತ್ತೇ, ನಾನು ಅಡ್ಡದಾರೀ ಹಿಡಿದಿದ್ನ ಯಾರಾದ್ರೂ ಹೇಳಿದರೇನೋ ಅಂತಿದ್ದೆ ! ”

“ ಏನು ಅಡ್ಡದಾರಿಯೋ ! ಏನು ಕತೆಯೋ !! ಅದಿರ್ಲಿ, ಈಗ ಊಟ ಮಾಡ್ಲಿಲ್ಲದ ಕಾರಣ ಮೊದಲು ಹೇಳ್ರೀ ? ”

" ಊಟ ಮಾಡೀನಲ್ಲೇ ! "

" ಊಟಮಾಡಿದಿರಿ ನಿಜ. ಅದಲ್ಲ; ಊಟ ಸರಿಯಾಗಿ ಮಾಡಿಲ್ಲದ್ದರ ಕಾರಣ ಹೇಳ್ರೀ ? "

" ಆ್ಞ .... ಊ್ಞ, ತಿಂಡಿ ತಿಂದಿದ್ದೆ ಬೇಡೇ "

" ಮತ್ತೆ ಅಲ್ಲಿಗೇ ಹೋಗ್ತೀರಲ್ಲಾ – ಹಳ್ಳದ ದಂಡೇ ಅಂಟು ಪುರಿಕೇ ಹತ್ರ ! "

" ಛೀ ! ಛೀ ! ಈಗ ಅಲ್ಲಿಗಲ್ಲ ಕಾಣೆ ಹೋಗಿದ್ದೂ ನಿಮ್ಮ ತಂಗೀ ಮನೆ ಕಡೆ."

" ಅವಳ್ಯಾವಳವಳು ನನ್ನ ತಂಗೀ – ಈ ಊರಾಗೇ!!! "

" ಅಯ್ಯಯ್ಯೋ!! ಮಹಾರಾಯ್ತಿ ಸ್ವಲ್ಪ ಬಾಯಿ ಸಣ್ಣದು ಮಾಡು. ಹೊರಗೆ ನಿಮ್ಮತ್ತೆಗೆ ಕೇಳೀತು ಮತ್ತೆ ! ರಾಮಾಯಣ, ಮಹಾಭಾರತ, ಭಾಗವತ ಶುರುವಾದಾವು ! "

" ಯಾಕೇ ? ಅವರಿಗೂ ಅಷ್ಟು ಗೊತ್ತಾಗ್ಲೇಳ್ರೀ ನಮ್ಮ ಬಿಸಿ ಬಿಸೀ ತಂಗೀಸುದ್ದಿ ! "

"ಥೂ ! ಹಿಂಗೆಲ್ಲಾ ಮಾಡಿದರೇ ಏನೂ ಹೇಳಲ್ಲ ನೋಡು ಮತ್ತೇ.... ಆ್ಞ ? "

" .... .... .... .... "

" ಜಾಣೇ .... ಹೀಗೆ ಸುಮ್ಮನಿದ್ರೇ ಏನು ಬೇಕಾದ್ದು ಹೇಳಿ ಬಿಡ್ತೀನಿ ನೋಡು, ಸ್ವಲ್ಪಾದ್ರೂ ಮುಚ್ಚಿಕೊಳ್ಳದಂಗೆ. ಆ್ಞ ? ನನ್ನ ಸ್ವಭಾವ ನಿನಿಗೆ ಗೊತ್ತೈತಿಲ್ಲೋ ? ಒಳಗೊಂದಿಟ್ಟುಕೊಂಡು ಹೊರಗೊಂಥು ಮಾತಾಡಲ್ಲ ಅನ್ನೋದು ?

" ಎಲ್ಲಾ ಗೊತ್ತೈತಿ; ಅಲ್ಲೊಂದು ಮಾಡೋದು, ಇಲ್ಲೊಂದು ಮಾಡೋದು ! "

" ಹಂಗೆಲ್ಲಾ ಕೊಸರಿ ಕೊಸರಿ ಮಾತಾಡಬಾರದು ಶಬ್ಧಗಳು ನುಚ್ಚು ನುರಿಯಾದಾವು ! ಮೊದಲೇ ಕನ್ನಡದಲ್ಲಿ ಶಬ್ದಗಳ ಅಭಾವ ಅಂತಾ ಕೆಲವರು ಬೊಬ್ಬೆಕುಟ್ತಾ ಇದ್ದಾರೆ. ಇನ್ನೂ ಅಷ್ಟು ಶಬ್ದಗಳಾದರೆ ಅವೆಂಥೆಂಥಾ ಹಿಂದಿನವನ್ನು ಮೀರಿಸುವಂಥಾ ಕಾವ್ಯಗಳನ್ನು ಬರಿತಾರೋ ಏನೋ ಇವರು !

ಅದರಾಗೇ ಮತ್ತೆ ನೀನಷ್ಟು ಶಬ್ದಗಳನ್ನು ಪುಡಿಪುಡಿ ಮಾಡಿದರೆ ಬರಗಾಲ ದಾಗೆ ಅಧಿಕಮಾಸ ಬಂದಂಗಾದೀತು !! ”

“ ಇಂಥಾಮಾತು ಆಡಿದರೇ ಮರುಳಾಗೋಳಲ್ಲನಾ—ಗೊತ್ತೇನ್ರೀ ? ರೀತೀ ರಿವಾಜೂ ಸರಿಯಾಗಿದ್ರೇನಾ ಮನಿಷ್ಯಾಳು.”

“ ಇಲ್ಲದಿದ್ದರೇ--ಹ್ಣಾ ? ”

“ ಅದೇನಂತೀರೋ ಅನ್ನಿ—ನಾನೂ ಕೇಳೋತನಕ ಕೇಳ್ತೀನಿ ಆಮೇಲೇ ಗದ್ಲಮಾಡಿ ಅತ್ತೀರ್ಗೆ ತಿಳಿಸೇ ಬಿಡ್ತೀನಿ.”

“ ಹೋಗ್ಲಿ. ನೀಮರುಳಾಗದಿದ್ರೇ ಇಲ್ಲ; ಮದುವ್ಯಾಗೀನಿ ಆತು. ಇರ್ಲಿ ಅದೆಂಥಾದಲೇ ಅದು ರೀತೀರಿವಾಜೂ ? ”

“ ಇನ್ನೆಂಥಾದೂ ? ತಂಗಿ ಮಂಗಿ ಅಂತಾ ಮಾತಾಡೋದೂ ! ”

“ ಹಂಗಾದ್ರೇ ನಾನೂ ಅದನ್ನೇ ಅಲ್ಲೇನೇ ಮಾತಾಡಿದ್ದು ? ”

“ ಹ್ಣೂ ಸಾಕುಬಿಡ್ರೀ ಯಾಕೆ ಮಾತಾಡ್ತೀರಿ—ಆಹಾ ! ಇನ್ನು ದಿಮ್ಮನಾಗೇ ಮುಟ್ಟಕೊಳ್ರೀ ಬಾಯ್ನು ಹಂಗಾದ್ರೆ ಚಂದಾ ಕಾಣ್ತೈತೆ.”

“ ಸಾಕೇ ? ”

“ ........ ”

“ ಸಾಕೇನೇ ? ”

“ ಹ್ಣೂ ಇನ್ನೂ ಗಟ್ಯಾಗಿರ್ಲಿ ”

“ ........ ”

“ ತಂಗೆಂತೆ ! ಮಂಗೆಂತೆ !! ಎಲ್ಲಾರಂಗೇ ನಿಮಿಗೂ ಬಡೀತೇನು ಈ ಚಾಳೀ ? ನಾನೂ ಸಂಪನ್ನರೂ ಸಂಪಿಗೇತೆನಿ ಅಂತಾ ಮಾಡಿದ್ದೆ. ನನ್ನ ಗೆಳತೀರಿಗೂ ಹಂಗೇ ಹೇಳ್ತಿದ್ದೆ. ಇನ್ನಾತು—ನನ್ನ ಮರ್ಯಾದೆ ಕಾಸಿಗೆ ಸಂಚೇರಾಗ್ಯೋತು ! ”

“ ಮಣಕ್ಕೆ ಎಂಟು ಕಾಸಾಗುತ್ತೆ ಹಾಗಾದರೆ ! ”

“ ಸಾಕು ಬಿಡ್ರೀ ಯಾಕೆ ಮಾತಾಡ್ತೀರಿ.”

“ ಯಾಕಲೇ ? ನಿನ್ನ ಗೆಳತೀರ ಮುಂದೆ ‘ನನ್ನ ಗಂಡ ಪುಣ್ಯವಂತ ಅಂತ ಹೇಳೂ’ ಅಂತ ನಾನು ಹೇಳಿದ್ನೇ ನಿನ್ನ ಮುಂದೆ ? ಹೌದಲೇ, ಇನ್ನು

ಮುಂದೆ ನಿನ್ನೆದುರು ಯಾವುದ್ನೂ ಹೇಳಬಾರದು ನೋಡು. ಹಂಗಾದ್ರೇ ಬೇಸಿ."

"ಯಾವುದ್ನೂ ಹೇಳಬೇಡಿ ಹೋಗ್ರೀ.... "

"........"

"ಸರೀರಿ ಅತ್ಲಾಗೇ—ನನ್ಯಾಕ ಮುಟ್ತೀರಿ....ನನ್ನ ಮುಟ್ಬೇಡಿ ನೋಡ್ರಿ."

"ಎಲೇ, ನಿನ್ನ ಲಗ್ನಾಗೋಕೆ ಮೂರು ಸಾವಿರ ಸಾಲ ಮಾಡ್ಯಾರೇ ನಮ್ಮನ್ಯಾಗೆ!"

"ಮಾಡಿದ್ರೂ ಮಾಡಿದ್ದಾರು, ಏನು ದೊಡ್ಡಮಾತು!"

"ಅಲೇಲೆಲೆ ಕುಬೇರನ ಮೊಮ್ಮಗಳೇ!"

"ಹೌದ್ರಿ ಮತ್ತೆ....ಎಂಥೆಂಥವರೋ ಸುಡುಗಾಡು ಗಿತ್ತಿಗಳ್ಳಿಯರೇ ಬೇಕಾದಷ್ಟು ಕರ್ಚು ಮಾಡಿಸ್ತಾರಂತೇ....ನಾನ್ಯಾಕೆ ಬೇಡ ಮೊಳೆ ಹೊಡೆಸಿ ಬಂದವಳು? ಇನ್ನೂ ನಾನು ಮೊದಲು ಮಾತ್ರ ಮೂರು ಸಾವಿರ ಮಾಡಿಸಿರ ಬಹುದು. ಅಂಥವರು ಮಾತ್ರ ಪ್ರತಿ ನಿತ್ಯಾ ಕರ್ಚು ಮಾಡಿಸ್ತಲೇ ಇರ್ತಾರಿ— ಅಂಥವರೇ ಬೇಸಿ ಪಾಪ; ನಿಮ್ಮಂಥವರಿಗೇ ಅಂಥವರೇ ಬೇಕು ಮತ್ತೆ!"

"........"

"ನಾವು ಹಗಲೂ ರಾತ್ರ್ಯೂ ದುಡುದು ದುಡುದು ನಿಮ್ಮ ಒಳ್ಳೇದ್ಕೆ ಎಷ್ಟು ಚಿಂತೆ ಮಾಡ್ತೀವಿ! ಕಷ್ಟ ಪಡ್ತೀವಿ! ಅದೆಲ್ಲಾ ಯಾರಿಗ್ಬೇಕು? ಹಗಲೆಲ್ಲಾ ಹಿಂಡೋರಾದ್ರೇ ಪಾಡು. ಪಾಪ. ದೇವರೇ ಏನಾಟಪ್ಪಾನಿಂದು! ನಿನ್ನ ಲೀಲಾ ವಿಚಿತ್ರ್ಯತಪಾ...."

"ಹೌದಪ್ಪಾ ಶಿವನೇ! ನಿನ್ನಾಟ ನಿನ್ನಾಣೆಯಾಗಿಯೂ ವಿಚಿತ್ರ ಐತಪ್ಪಾ! ಒಂದು ಸಣ್ಣ ವಿಷಯಕ್ಕೇ ಸಾವಿರಮಾತಾಡುನ ಮಾನಿನಿಯರನ್ನ ನೋಡಿದ್ರೇ ಇನ್ನೂ ವಿಚಿತ್ರ ಅನಿಸ್ತೈತಪ್ಪಾ!"

"ಸಾಕು ಬಿಡ್ರೀ. ಮತ್ತಿನ್ನೂ ಸಣ್ಣ ವಿಷಯವಂತೆ! ನಿಮಗೆ ಸಣ್ಣ ವಿಷಯವಾದ್ರೂ ನನಗೆ ಸಣ್ಣ ಚೀಳಿದ್ದಂಗೈತ್ ಗೊತ್ರ್ಯಾ? ಸಣ್ಣದೇನು, ದೊಡ್ಡದೇನು? ಉರಿಯೆಲ್ಲಾ ಒಂದೇ. ನಿಮಗ್ಯಾಕಿಂಥಾ ಬುದ್ಧಿ ಹುಟ್ಟೈತೋ ಊ್ಞ ಊ್ಞ ಊ ಊ"

"ಮಹಾರಾಯಳೇ, ಏನಾರ ಮಾಡೇನು ಮೆಲ್ಲಕೆ ಮಾತಾಡು. ಅಳ ಬೇಡ ಕಾಣೆ, ಅವ್ವ ಬಂದಾಳು! ನೀನಿಲ್ಲಿ ಅತ್ರೇ ಆಕೆಗಲ್ಲೇ ಹೊಟ್ಯಾಗೆ ಸಂಕಟವಾಗುತ್ತೆ. ಏನೋ ಇರಬೇಕೂ ಅಂತಾ ವಿಚಾರಿಸಲಿಕ್ಕೆ ಬಂದ್ರೇ ಗುಟ್ಟು ರಟ್ಟಾಗಿ ಬಿಡುತ್ತೆನಂದು!"

"ಆದರೇನು ತಪ್ಪೈತೇಳ್ರಿ? ನಮ್ಮ–ಅಲ್ಲಲ್ಲ – ನನ್ನ ಹಣೇಬರಹಾನ ಅವರೊಂದಿಷ್ಟು ಓದಲಿ. ನೀವಿಷ್ಟು ಧೈರ್ಯವಾಗಿದೀರೆಂದ ಮೇಲೆ ನಿಮ ಗೆಲ್ಲಿ ಭಯ ಬಿಡ್ರೀ"

"ನಿಜ, ನನಗಂತೂ ಭಯವಿಲ್ಲ. ನಮ್ಮ ವಂಶವಾವುದು ನೋಡೂ? ವಿಜಾಪುರದ ರಾಜವಂಶದವರಂತೆ ನಾವು–ಗೊತ್ತೇನೇ ನನ್ನ ಮುತ್ತಿನ ಚಂಡೇ."

"ನಾನ್ಯಾಕಾಗಲಿ ನಿಮ್ಮ ಮುತ್ತಿನ ಚಂಡು? ಅವಳ್ಯಾವಳೋ ಅವಳು ಅಂದ್ರ್ಯೆಲ್ಲಾ ಅವಳೇ ಆಗಿದ್ದಾಳು?"

"ಆಹಾ! ಅವಳ ಮುಖ ಕೂಡಾ ನೋಡಿಲ್ಲ ನೀನಿನ್ನೂ, ಆಗ್ಲೇ ಎಷ್ಟು ತಂಗಿಯ ಪ್ರೀತಿ! ಅವಳಿಗಾಗಲೇ ನನ್ನ ಮುತ್ತಿನ ಚಂಡಿನ ಪಟ್ಟ!! ಅದ್ಭುತ! ಅದ್ಭುತ!!"

"ಹ್ಞಾ? ಅದ್ಭುತ! ಭಯಾನಕ!! ಭೀಭತ್ಸ!!! ರೌದ್ರ!!!!

"ಯಾಕಲೇ ಇನ್ನೈದು ರಸಗಳನ್ನು ಬಿಟ್ಟುಬಿಟ್ಟೆಯಲ್ಲೇ? ನಿನ್ನ ಬಾಯಲ್ಲಿ ಬರೇ ಭಯಾನಕ, ಭೀಭತ್ಸ, ರೌದ್ರಗಳೇ ಬಂದವೇ ಹೊರ್ತು ವೀರ, ಕರುಣ, ಶಾಂತಿ, ಹಾಸ್ಯ, ಶೃಂಗಾರಗಳು ಸುಳಿಯಲೂ ಇಲ್ಲ ನೋಡು."

"ಅವೇನೋ ನನಗೆ ಚಿರಪರಿಚಿತವಾಗಿವೆ. ಇನ್ನೂ ಅಪರಿಚಿತವಾದವುಗಳನ್ನುಚ್ಚರಿಸಿದೆ ಅಷ್ಟೇ"

"ಪರಿಚಿತ ಮಾಡಿಕೊಳ್ಳಬೇಕೆಂದೇ?"

"ನಾನು ಮಾಡಿಕೊಳ್ಳುವುದೇನು? ಅವೇ ಧಾವಿಸಿ ಬರುತ್ತಿವೆ ನಿಮ್ಮ ದೆಶೆಯಿಂದ."

"ಅಂದರೆ ನಾನವುಗಳ ತೌರೇ?"

"ಹಾಗಲ್ಲ. ನನ್ನ ಪಾಲಿಗೆ ನೀವು ಅವುಗಳ ಸೃಷ್ಟಿಕರ್ತರು."

"ಅಹಾಹಾಹಾ! ಇದ್ದರಿರಬೇಕೆಲೇ ನಿನ್ನಂಥಾ ಮಡದಿ – ನನಗೆ ಬ್ರಹ್ಮನ ಪಟ್ಟವನ್ನು ಕಟ್ಟಿದ ನಿನ್ನಂಥಾ ಮಡದಿಯನ್ನು ಪಡೆದ ನಾನೇ ಧನ್ಯ!"

ನನ್ನ ಪಡೆದದ್ದಕ್ಕೆಲ್ಲಾ ಎಷ್ಟು ಧನ್ಯವಾದೀರೀ....ಅವಳ್ಯಾವಳನ್ನೋ ಪಡೆದದ್ದಕ್ಕಿರಬಹುದು!"

“ನೋಡಿಲ್ಲದೇ ಎಷ್ಟು ಪ್ರೀತಿ ಮಾಡ್ತಿಕಾಣೀ ಅವಳ್ನಾ! ಅದೇ ನನಗೆ ಸೋಜಿಗ!!”

“ಹೌದ್ರೀ! ಪ್ರೀತಿ ಮಾಡ್ತೀನೀ—ನಾನೂ ಪ್ರೀತಿ ಮಾಡ್ತೀನಿ!.....”

“ಹಂಗಾದ್ರೇ ಅವಳ್ನಾ ಮನೆಗೇ ಕರಕೊಂಬರ್ತೀನೇ....ನಾನೂ ಕರಕೊಂಬರ್ತೀನಿ.”

“ಸಾಕು ಬಿಡ್ರೀ ನೀವು....ವಿಚಾರಿಲ್ಲಾ ಮಣ್ಣಿಲ್ಲ.”

“ಸುಮ್ನಿರು ಮಹಾರಾಯ್ತಿ. ಅವ್ವಗೆ ಕೇಳಿಬಿಟ್ಟಂಗಾಯ್ತು....ಹ್ನಾ! ಲೇಲೇ, ಸುಮ್ನಿರ್ಲಿ ಅಂತಾ ಬಾಯ ಮುಚ್ಚಿದ್ರೆ ಕೈ ಕಡೀತೀಯಲ್ಲೇ?.... ಮನೆಯವರಿಗೆಲ್ಲಾ ಗೊತ್ತಾಗಿ ನನ್ನ ಪರಿ ಹಿಡಿದ್ರೆ ನಿನಿಗೆ....ಚೆಂದಾಗಿ ಕಾಣುತ್ತೇನೋ? ಸುಮ್ನಿರು ಅಂದ್ರೇ ಇರಬೇಕೂ.ಜಾಣೆ ಅಂತೀನಿ.”

“ಅನ್ನದೇನು ಮಾಡೀರಿ ಪಾಪ....ಯಾವುದ್ಕೂ ಅಡ್ಡಿ ಮಾಡದಿದ್ರೇ ಜಾಣೆ–ಜಾಣೆ ಆಗಲಾರೆನೇ?”

“ನೀನಾವುದಕ್ಕೆ ಅಡ್ಡಿಮಾಡಿದ್ದೀ ಪಾಪ....ನಾನೇನು ಮಾಡಿದರೂ ನಿನಿಗೆ ರಾಜಿ”

“ಬಾಯಮೇಲಿನ ಕೈತಗೀತೀರೋ ಇಲ್ವೋ? ಅಯ್ಯೋ ತುಟಿ ಒಡೆದ್ವು—ತಗೀರಿ ಕೈಯ....ಉ್ಞ ಉ್ಞ ಊ ಊ....”

“ಲೆಲೆಲೇಲೇ ಅಳಬ್ಯಾಡಕಣೇ ನನಗೂ ಅಳುಬರುತ್ತೇ....?”

“ಅಳ್ರೀ ನಿಮಗೇನು? ಅತ್ರೇ ಕಣ್ಣೀರಾ ಒರಸ್ತಾಳೋಗ್ರಿ?”

“ಯಾವಳೀ?”

“ಅವಳ್ಯಾವಳೋ ಅಂದ್ರೆಲ್ಲಾ ಅವಳೂ....”

“ಎಲೇ, ಇಷ್ಟುಕಾಲ ನನ್ನೊಡನೆ ಬಾಳ್ವೆಮಾಡಿದರೂ ನನ್ನ ತಿಳಿಕೊಳ್ಳಿಲ್ಲವಲ್ಲಾ! ಇಷ್ಟು ಸಂಶಯವೇ?”

“ಇಷ್ಟು ಹೊತ್ತು ಮಾತಾಡಿದ್ದು ತಮಾಷೆಗೇನ್ರೀ? ಹಾಗಾದ್ರೇ ಸುಳ್ಳಲ್ವೇನ್ರೀ–ಏನ್ರೀ? ಸುಳ್ಳಲ್ವೇನ್ರೀ?”

“ಎಲ್ಲಾ ಸುಳ್ಳು ಬಿಡೇ”

“ಹ್ನೂ”

“ಸತ್ಯವಾಗಿ ಕಣೇ”

“ನನ್ನ ದೇವರೇ!”

# ದಿವ್ಯ ದಾಂಪತ್ಯ

"ಮನೆಗೆ ಇದೇ ಮೂರು ರೂಪಾಯಿ ಬಾಡ್ಗೆ ಕೊಡ್ತಿದ್ರೂ ಆ ಊರ ಮನೆಯೇ ಚೆನ್ನಾಗಿತ್ತೂಂದ್ರೇ. ಇದರ ನೆಲ 'ತಗ್ಗು ಮುಗ್ಗಾಗಿದೆ. ಬರಿ ಜಮುಖಾನೆಯ ಮೇಲೆ ಮಲಗಿದರೇ ಮೈಯೆಲ್ಲಾ ನೋವಾಗಿ ಬಿಡುತ್ತೆ-ಏಳು ವಷ್ಟೊತ್ತಿಗೆ. ಆ ಓಣಿಯವರೊಬ್ರು ಬಂದಿದ್ರು. ಅವರು ಎಂಟು ರೂಪಾಯಿ ಕೊಡ್ತಾರಂತೆ. ಸಿಮೆಂಟ್ ಮಾಡಿಸಿದ್ದಾರಂತೆ ನೆಲಕ್ಕೆ; ಬಳಿಯೋದು ಹಗುರವಾಯ್ತು ಅಂದ್ರು"

ನಾನೂ ಈ ದಿನ ಒಬ್ಬ ಸ್ನೇಹಿತರ ಮನೆಗೆ ಹೋಗಿದ್ದೆ. ಬಹಳ ಚೆನ್ನಾಗಿತ್ತು. ಅದನ್ನು ನೋಡಿ, ನಾನೂ ಒಂದು ಬೇರೆ ಮನೆ ಮಾಡಬೇಕೂ ಅನಿಸ್ತು. ಒಂದು ಹತ್ತು ರೂಪಾಯಿ ಕೊಟ್ಟು ಒಂದು ಸಿಮೆಂಟ್ ಮಾಡಿ ಸಿದ್ದು ಕಾಯಂ ಮಾಡಿಬಿಡ್ತೇನೆ!"

"ಶಿವ ಶಿವಾ! ಹೀಗೆ ವ್ಯಂಗವಾಗಿ ನುಡಿದ್ರೆ ನಾನಿನ್ನೇನು ಮಾತಾಡ್ಲಿ? ಪ್ರತಿ ತಿಂಗ್ಳೂ ಅಷ್ಟು ಬಾಡಿಗೆ ಕೊಡೂದಂದ್ರೇ ಹೇಗೆ ಸಾಧ್ಯ? ಬಳಿದು ಕೊಳ್ತಾ ಇದ್ರೂ ಪರವಾಗಿಲ್ಲಾ ಅಷ್ಟು ಬಾಡಿಗೆ ಕೊಟ್ಟು ಅಂಥಾ ಮನೇಲಿರೋದೇನು ನಿಂತಿದೆ? ನಿಮಗಿಷ್ಟು ಸುಸ್ತಾಗಿರೋದೂ ಇಂಥಾ ತಗ್ಗು ಮುಗ್ಗಿನ ನೆಲದ ಮೇಲೆ ಮಲಗೋದ್ರಿಂದ್ಲೇ. ಅದಕ್ಕೇ ಒಂದು ತಡೀನಾದ್ರೂ ಹಾಕಿಸಿಬಿಟ್ರೇ ಹಾಯಾಗಿ ಮಲಗೋದ್ಕೂ ಅಡ್ಡಿಯಿಲ್ಲ; ಪ್ರತಿ ತಿಂಗಳೂ ಹೆಚ್ಚು ಖರ್ಚು ಮಾಡಬೇಕಾಗಿರಲ್ಲ."

"ಹೌದು ಹೌದು. ಹಾಗೇ ಒಂದು ಮಂಚ, ಒಂದು ಸುಪ್ಪತ್ತಿಗೆ ತಡಿ ತರ್ಶೀನಿ ತಡಿಯೇ .... ಒಂದೇ ಒಂದು ಕೃತಿ ಪ್ರಕಟವಾಗಿಬಿಡ್ಲಿ. ಬರೀ ಅಷ್ಟೇ ಅಂತ ತಿಳಿಕೊಂಡ್ಯಾ ಸ್ವಲ್ಪ ಜಾಸ್ತಿ ಸಂಬಳದ ನೌಕರಿ ದೊರೆತರೂ ಸಾಕು ಒಂದು ಬಂಗ್ಲೆ ಹಿಡಿದು, ತೂಗು ಮಂಚ ಹಾಕಿಸಿ ಇಬ್ಬರೂ ಕುಳಿತು ತೂಗಿಕೊಳ್ಳುತ್ತಾ ನಲಿಯೋಣವಂತೆ."

"ನೀವು ನಲಿಯೋದೂ ಬರೀ ಕತೆ ಕಾದಂಬರಿಗಳಲ್ಲೇ ಎಂದು ಕಾಣುತ್ತೆ. ನಿವೇನೂ ಈ ಲೋಕದಲ್ಲೇ ಇದ್ದವರ ಹಾಗೆ ಕಾಣಲ್ಲ. ನಿಮ್ಮ ಕನಸಿನ

ಲೋಕವನ್ನೇ ಸತ್ಯವೆಂದು ಭ್ರಮಿಸಿದ್ದೀರಿ!"

"ಏಕೇ ಹಾಗಂತಿ? ನಾನು ಸಾಹಿತ್ಯ ರಚಿಸುವುದು ಸುಳ್ಳೆ? ಅವು ಪ್ರಕಟಾರ್ಹವೆಂಬುದು ಸುಳ್ಳೆ? ಹಾಗೆ ಪ್ರಕಟವಾದಲ್ಲಿ ಹಣ ದೊರೆಯುವುದೂ ಸುಳ್ಳೆ?"

"ಮೊದಲವೇನೋ ನಿಜ. ಆದ್ರೇ .... ಕೊನೆಯದೇ ಕನಸು."

"ಏಕೆ? ಪ್ರಕಟವಾದರೆ ಪ್ರತಿಗಳು ಮಾರಾಟವಾಗುತ್ತವೆ. ಪ್ರಕಟಿಸಿದವರಿಗೆ ಬೇಕಾದಷ್ಟು ಲಾಭ ಸಿಗುತ್ತೆ. ಅದರಲ್ಲಿ ನನಗೊಂದು ಚಿಕ್ಕ ಭಾಗವನ್ನಾದರೂ ಕೊಡಲಾರರೇ ಅವರು? ಕೊಟ್ಟೇ ಕೊಡುತ್ತಾರೆ; ನನಗೆ ಹಣ ಬಂದೇ ಬರುತ್ತೆ. ಮತ್ತೆ ಪ್ರಕಟವಾದ್ರೆ ಹಣ ಬರಲ್ಲಂತೆ!"

"ಲಗ್ನವಾಗುವವರೆಲ್ಲಾ ತಮಗೆ ಮಕ್ಕಳಾಗೇ ಆಗುತ್ತವೆಯೆಂದು ಕೊಂಡಂತೆ ನೀವೂ ಅಂದುಕೊಂಡರೆ ಬೇಡವೆನ್ನುವವರಾರು?"

"ಶಿವ ಶಿವಾ! ನಿನ್ನಂಥಾ ನಿರಾಶಾವಾದಿಯು ಜಗದಲ್ಲೇ ಇಲ್ಲವೆನ್ನಲೆ?"

"ನಗು ಬರುತ್ತೆ."

"ನಗು; ನಕ್ಕು ನಗೆಗಾರನಾದ ನನ್ನಗೆ ಹುರುಪುಕೊಡು. ನಿನ್ನನ್ನು ನೋಡು ಆಗ ಹೇಗಿಡುತ್ತೇನೆಂದು. ನಿನ್ನ ಹುರುಪಿನಿಂದ ಮತ್ತೆ ಎಷ್ಟೋ ಹೆಚ್ಚು ಕೃತಿಗಳನ್ನು ರಚಿಸಿ, ಹೆಚ್ಚು ಸೌಲಭ್ಯ ದೊರಕಿಸಿಕೊಂಡು ನನ್ನ ಚಿಕ್ಕದಾದರೂ ಚೊಕ್ಕದಾದ ಸಾಮ್ರಾಜ್ಯದ ಚಿರಸಾಮ್ರಾಜ್ಞಿಯನ್ನಾಗಿ ಮಾಡಿ ಸುಖ ಸಂತೋಷಗಳಿಂದ ನಲಿಯುವಂತೆ ಮಾಡುವೆ."

"ಇಷ್ಟೆಲ್ಲಾ ಅಂದುಕೊಂಡು ಪಡೆಯಲು ಸಾಧ್ಯವಾಗದೇ ಕೊರಗುವುದಕ್ಕಿಂತ ಸುಮ್ಮನಿರುವುದೇ ಮೇಲು ಕಾಣ್ರಿ. ಇರಲಿ ಊಟ ಮಾಡೇಳ್ರಿ."

"ಏನು ಮಾಡಿದ್ದೀಯೇ ಊಟಕ್ಕೆ?"

"ಅಕ್ಕಿ ಆಗಿದ್ದು; ಎರಡೇ ರೊಟ್ಟಿಗಾಗುವಷ್ಟು ಹಿಟ್ಟಿತ್ತು."

"ನೋಡೇ, ಈಗೆಷ್ಟು ಹಸಿವಾಗಿದೆಯಂದ್ರೇ ಆ ಎರಡು ರೊಟ್ಟಿಗಳನ್ನು ಒಂದೇ ಗುಕ್ಕಿಗೆ ತಿಂದು ಮೇಲೆ ನಿನ್ನನ್ನೂ ನುಂಗುವಷ್ಟಾಗಿದೆ."

"ಹಾಗಾದ್ರೂ ಆದ್ರೇ, ಈ ಕ್ಲಿಷ್ಟಪರಿಸ್ಥಿತಿಯಲ್ಲಿ ನಿಮಗೆ ಅನುಕೂಲವೇ ಆದೀತು."

"ನನಗಾವ ಕ್ಲಿಷ್ಟ ಸಂದರ್ಭವೊದಗಿದೆ ಪ್ರೇಯಸೀ? ನೀನಿರುವತನಕ

ಮತ್ತು ನನ್ನಲ್ಲಿ ಬರೆವ ಕಲೆಯಿರುವತನಕ ನನಗಾವ ಕ್ಲಿಷ್ಟವೂ ಇಲ್ಲವೆಂದೇ ನಂಬಿರುವೆ.”

“ಇರ್ಲಿ, ಊಟಮಾಡೇಳ್ರಿ.... ನನ್ನಿಂದ ಅದೇನು ಸಿಗುತ್ತೋ ನಿಮ್ಗೆ! ಈ ದರಿದ್ರಳಿಂದ ಅದೆಷ್ಟು ತೊಂದರೆಯಾದ್ರೂ ಯಾವಾಗ್ಲೂ ಹೀಗೇ ಅಂತಿರ್ತೀರಿ!”

“ಏನೇ, ನಾನು ನಿನಗೊಂದು ದ್ರೋಹ ಮಾಡಿದ್ದೇನೆ! ಅದಕ್ಕೇ ಇಂದು ಉಣ್ಣಲ್ಲ”

“ಅದೇನ್ರೀ ಅದು?”

“ಅದೇ, ಈ ದಿನ ಸ್ನೇಹಿತರ ಮನೆಗೆ ಹೋಗಿದ್ದೆ ಅನ್ನಿಲ್ವಾ? ಅಲ್ಲೇ ನನ್ನ ಊಟ ಮುಗಿದೋಯ್ತು. ನಿನ್ನ ಬಿಟ್ಟು ಊಟ ಮಾಡಿದ್ರಿಂದ ನಿನಗೆ ದ್ರೋಹ ಮಾಡಿದಂಗಾಯ್ತು. ಅದಕ್ಕೇ ಈಗ ಉಣ್ಣಲ್ಲ. ಬೆಳಿಗ್ಗೆತನಕ ಉಪವಾಸವ್ರತ ಕೈಕೊಳ್ತೀನೆ. ಆಗ ದ್ರೋಹಕ್ಕೆ ತಕ್ಕ ಶಿಕ್ಷೆ ಅನುಭವಿಸಿದ ಹಾಗಾಗುತ್ತೆ.”

“ಸಾಯಂಕಾಲ ಊಟ ಮಾಡಿದ್ದರೂ ಈಗ ಸ್ವಲ್ಪಾದ್ರೂ ಹಸಿವೆಯಾಗಿರುತ್ತೆ. ಒಂದು ರೊಟ್ಟಿನಾದ್ರೂ ನೀವು ತೊಗೋಬೇಕು.”

“ದ್ರೋಹಕ್ಕೆ ಶಿಕ್ಷೆ ಅನುಭವಿಸಿಯೇ ತೀರುವನ ನಾಸು. ಏಳು ನೀನು ಊಟ ಮಾಡು .... ಅಲ್ಲಾ ದಿನವೂ ಮಾತಾಡುತ್ತಾ‌ಡುತ್ತಾ ಊಟ ಮಾಡಿರೂಢಿ; ಈಗ ಒಬ್ಬಳೇ ಉಣ್ಲಿಕ್ಕೆ ಬೇಜಾರಾಗಬಹುದು. ನಡಿ, ನಿನ್ಜೊತೆ ಮಾತಾಡ್ತಾ ಸುಮ್ನೆ ಕೂಡ್ತೀನಿ, ನೀನು ರೊಟ್ಟಿ ಹೊಡಿ.”

“ಬನ್ನಿ ಹಾಗಾದ್ರೆ ನಿಮಗಿಷ್ಟು ಹಾಲು ತೆಗೆದಿಟ್ಟೇನಿ. ಉಪವಾಸ ವ್ರತಕ್ಕೆ ಹಾಲಿನಿಂದ ಅಡ್ಡಿ ಬರಲಾರದು.”

“ನೋಡಿದ್ಯಾ? ನನ್ನಿಂದ ನಿಮಗೇನು ಸುಖಾ—ಅಂತ ಕೇಳ್ತೀಯಲ್ಲಾ ಇದೇ ನೋಡು ಸುಖ. ಒಂದೇ ಜೀವವೆಂಬಂತಿದ್ದೇವೆಂದ ಮೇಲೆ ಪರಸ್ಪರರಿಂದ ಸುಖದೊರೆಯದೇ?”

“ಏನೋ ಒಂದು ಹೇಳಿ ಒಪ್ಪಿಸಿ ಬಿಡ್ತೀರಿ .... ಬನ್ನಿ ಮತ್ತೆ ಅಡಗೀ ಮನೆಗೆ.”

“ನೀನು ಮೊದಲು ಹೋಗದೇ ನಾನೇ ಹೋಗಲೇ? ನಡೀ, ಸ್ವಲ್ಪ

ದೀಪಾ ದೊಡ್ಡದು ಮಾಡು .... ಅಯ್ಯೋ ಏನು ಸೆಲವೇ ಇದು! ಸ್ವಲ್ಪ ನೀರು ಬಿದ್ದರಾಯ್ತು ಕೆಸರಾಗಿ ಬಿಡುತ್ತೆ. ಕೆಸರು ಗದ್ದೆಯಲ್ಲಿ ವಾಸಮಾಡಿದಂತಾಗುತ್ತೆ ಈ ಮನೆಯಲ್ಲಿ. ಇಷ್ಟೆಲ್ಲಾ ಇದ್ದು ಗುಂಗಾಡಿ ಜೇಡವೆಂದರೆ ಏಕೆ ಬಿಟ್ಟಾವು ದಾಳಿಮಾಡದೇ ?"

"ಹೌದು ಕಣ್ರೀ, ಏನಿಲ್ದಿದ್ರೂ ಒಂದು ಸೊಳ್ಳೆ ಪರದೀನಾದ್ರೂ ತಂದ್ರೇ ಮಲೇರಿಯಾದಿಂದ ಪಾರಾಗಬಹುದು. ಇಲ್ದಿದ್ರೇ ಶಿವ ಶಿವಾ !"

"ರಾತ್ರಿ ನಿದ್ರೆ ಮಾಡೋದು ಬಹಳೇ ತೊಂದ್ರೆ ಅಂತೀಯಲ್ವೇ ?"

"ಇನ್ನೂ ಅನ್ಬೇಕೇನ್ರೀ? ನಿಮಗೇ ತಿಳಿಯೋದಿಲ್ವೇ? ರಾತ್ರಿ ಮೈಯೆಲ್ಲಾ ಚುಚ್ಚುತ್ತಿರುವಾಗ ನೀವು ತೊಂದ್ರೆ ಪಡ್ತಿರೋದು ನಿಮಗೇ ಗೊತ್ತಿಲ್ವೇ ?"

"ನಿನ್ನ ಸಂಗಡ ಮಾತಾಡುವಾಗ ನನಿಗ್ಯಾವುದರ ಲಕ್ಷ್ಯವೂ ಇರಲ್ಲ. ಮಾತಾಡ್ದೇ ಇದ್ದೇ ಅಂದ್ರೆ ಅದು ನಿದ್ದೆಮಾಡುವಾಗ ಮಾತ್ರ. ಹೀಗಾಗಿ ಸೊಳ್ಳೇ ಹಾವಳಿ ಹೇಗೆ ಹೊಳಿಬೇಕೇ ?"

"ಇನ್ನೇನೆನ್ನಬೇಕು ನಿಮಗೆ! ತುಂಬಾ ಹೊದೆದುಕೊಂಡ್ರೇ ಸೆಕೆ, ತೆಗೆದ್ರೇ ಸೊಳ್ಳೆ; ಸೆಕೆಯು ಆದ್ರೂ ಆಗ್ಲಿ ಅಂತ ಹೊದ್ದುಕೊಂಡ್ರೇ, ದುಪ್ಪಟ ಯನ್ನು ಪರಿಶೋಧಿಸಿ ಹರಿದ ಜಾಗೆಯಿಂದ ಬಂದು ದಾಳಿ ಮಾಡುತ್ತವೆ. ಇಂಥಾ ದಾಳಿಗೂ ನಿಮ್ಮ ಲಕ್ಷ್ಯವಿಲ್ಲವೆಂದರೆ ನೀವೆಂಥಾ ಮನುಷ್ಯರೋ ?"

"ಮನುಷ್ಯರೋ ಪಶುವೋ ಅಂತೀಯಲ್ವೇ ?....ಅಲ್ಲೇ, ನಾವು ಈ ಚಿಕ್ಕ ಪ್ರಾಣಿಗಳ ದಾಳಿಗೇ ಇಷ್ಟು ಕುಂದಿದರೆ ಇನ್ನೇನು ಬಾಳ್ವೆ ಮಾಡು ತ್ತೇವೆ! ಈ ಆರ್ಥಿಕ ದುಃಸ್ಥಿತಿಯಂಥಾ ದಾಳಿ ಇನ್ನಾವುದೂ ಇಲ್ಲವೆಂದ ಮೇಲೆ ಅದನ್ನೇ ಎದುರಿಸುತ್ತಿರುವ ನಾವು ಇದನ್ನೆದುರಿಸುವುದೊಂದು ದೊಡ್ಡ ಮಾತೇ? ಹೋಗಲಿ. ಸೊಳ್ಳೆ ಪರದೆ ತರಲು ಎಂಟು ರೂಪಾಯಿಯಾದರೂ ಬೇಕು. ಅದೇ ಎಂಟು ರೂಪಾಯಿಗಳಿದ್ದಿದ್ರೇ ನಿನ್ನನ್ನು ಈ ಹರುಕು ಸೀರೆ ಯಲ್ಲಿರಲು ಬಿಡುತ್ತಿದ್ದೆನೇ ? ನೀನು ಈ ಸೀರೆಯನ್ನುಟ್ಟುಕೊಂಡು ಹೊರಗೆ ಹೋಗಲು ಹಗಲು ಸಂಕೋಚಪಟ್ಟುಕೊಂಡು ಒಳಗೇ ಇದ್ದು, ಹೊತ್ತು ಮುಳುಗಿದಮೇಲೇ ನೀರು ತರುತ್ತೀಯೆಂದು ನನಗೇನೂ ತಿಳಿಯದೇ? ದುಪ್ಪಟೀ, ಜಮಖಾನಾ, ಸೀರೇ, ಬ್ಲೌಜ್, ಅಂಗಿ ಎಲ್ಲಾ ಹರಿದಿವೆ. ಇವೆಲ್ಲ

ವುಗಳಿಗಿಂತ ಸೊಳ್ಳೆ ಬಲೆ, ತಡಿಗಳು ಮುಖ್ಯವೇನೇ? ಸ್ವಲ್ಪ ತಡಿ, ಉತ್ತಮ ವಾದ ನೌಕ್ರಿ ದೊರೆತರೆ, ನಿಜವಾಗಿ ಒಂದು ಸೊಗಸಾದ ಬಂಗ್ಲೆ ತಗೊಂಡು, ಒಂದು ರೇಡಿಯೋ ಕೊಂಡು, ಕುರ್ಚಿ, ಮೇಜುಗಳನ್ನು ತಂದು, ಹೊಟ್ಟೆ ತುಂಬಾ ತಿಂದು—ಸುಖವಾಗಿ ನಲಿಯೋಣವಂತೆ. ಅಲ್ಲೀವರೆಗೆ ನಿನ್ನ ಹಿಂದಿನ ಅಂದರೆ ತೌರಿನ ಜೀವನವನ್ನು ಮೆಲುಕು ಹಾಕಿಕೊಳ್ಳುತ್ತಾ ಈ ಬಡವನ ಸಹವಾಸದಿಂದೊದಗಿದ ಕಷ್ಟವನ್ನು ನೆನಸಿಕೆಕೆಂಡು ಮರುಗಬೇಡ; ಕೊರಗಬೇಡ."

"ನಾನೆಂದಾದರೂ ಹಾಗೆ ಹೇಳಿದೆನೇನೋ?"

"ಹೇಳಿಲ್ಲ, ಹೇಳಲೂ ಬೇಡ: ಕೊರಗಲೂ ಬೇಡ. ನೋಡೇ, ನೀನೇ ನನ್ನ ಜೀವ; ನೀನೇ ನನ್ನ ಸಿರಿ–ಸಂಪತ್ತು. ನೀನು ಸರಿಯಾಗಿದ್ದರೆ ನಾನೂ ಸರಿಯಾಗಿರುತ್ತೇನೆ. ಎಂಥಾ ಕಷ್ಟ ಬಂದರೂ ಈಗಿನಂತೆಯೇ ನೀನು ತಾಳಿ ಕೊಂಡೇ ಇದ್ದೀಯಾದರೆ ನಿಜವಾಗಲೂ ಸುಖವನ್ನು ಕಾಣುವುದು ಸುಳ್ಳಲ್ಲ—ಕನಸೂ ಅಲ್ಲ. ಇಂದಿನ ಕಷ್ಟ ಮುಂದಿನ ಸುಖಕ್ಕೆ ಮೆಟ್ಟಲು. ಇದನ್ನು ಮರೆಯದೇ ಈಗಿನಂತೆಯೇ ಇರು ನನ್ನ ಪ್ರೇಯಸೀ."

"ಪ್ರಿಯತಮಾ, ತಾಳ್ಮೆಯನ್ನು ಮೀರಿ ಕೆಲವು ಮಾತುಗಳು ಬಂದು ಬಿಡುತ್ತವೆ. ಸುಖವನ್ನು ಬಯಸುವ ದೇಹವು ಹಾಗೆ ನುಡಿಸುತ್ತೆ. ಕ್ಷಮಿಸಿಬಿಡಿ."

"ನಾನು ಕ್ಷಮಿಸಲೇ ಪ್ರೇಯಸಿ, ನೀನು ಕ್ಷಮಿಸಬೇಕಲ್ಲವೇ?"

"ಅಯ್ಯೋ! ಎಂದೆಂದೂ ಹಾಗನ್ನಬೇಡಿ. ದಯವಿಟ್ಟು ಇನ್ನೊಮ್ಮೆ ಈ ಅಲ್ಪಳಿಗೆ ಹಾಗೆ ನುಡಿಯಬೇಡಿ."

"ಬಾಯಮೇಲಿನ ಕೈ ತೆಗೆಮಹಾರಾಯಳೀ. ನಮ್ಮ ಕರ್ನಾಟಕದ—ಏಕೆ—ನಮ್ಮ ಭಾರತದ ಸಂಸ್ಕೃತಿಯೇ ಮೂರ್ತಿವೆತ್ತಂತಿದ್ದೀಯೆ! ಈ ಭಾಗ್ಯಕ್ಕಿಂತ ಇನ್ನಾವ ಭಾಗ್ಯವನ್ನು ವಶಪಡಿಸಿಕೊಳ್ಳಲು ಜೀವನವನ್ನು ಸವೆಸಲಿ ಪ್ರೇಯಸೀ?"

"ಶಿವಾ! ಅಲ್ಪದರೊಳೇ ಮಹತ್ವವನ್ನು ಕಾಣುವ ನಿಮ್ಮಂಥವರು ದೊರೆತದ್ದಕ್ಕಿಂತಲೂ ಹೆಚ್ಚಿನ ಪುಣ್ಯ ಫಲವಿನ್ನೇನು?"

"ಹೀಗೆಯೇ ಒಂದಾಗಿ ಸುಖದಿ ಬಾಳೋಣ; ಜೀವನದ ಜಂಜಡವ

ಜಳ್ಳುಗೈಯ್ಯೋಣವೆಂದು' ವೆಂದು ಹಾಡಿದ "ಕಲಾಪ್ರಿಯರ" ನುಡಿಯನ್ನು ನಾವು ಸತ್ಯವಾಗಿಸೋಣ."

"ಪ್ರಿಯತಮಾ...."

"ಪ್ರೇಯಸೀ...."

"ನೀವು ಸುಮ್ಮನೇ ಮನಸ್ಸಿನ ಮಂಡಿಗೆಯೇಕೆ ತಿನ್ನುವಿರಿ? ಸುಮ್ನೆ ಕಲ್ಪಿಸಿಕೊಂಡು ಭ್ರಾಂತರಾಗುವುದಕ್ಕಿಂತ, ಕಷ್ಟವನ್ನು ಮೂಕರಾಗೇ ಸಹಿಸುವುದು ಮೇಲಲ್ಲವೇ?"

"ಪ್ರೇಯಸೀ, ಮೂಕರಾಗಿದ್ದರೆ ಕಷ್ಟದ ಹೊರೆ ಹೆಚ್ಚಿನ ಭಾರವಾಗುವುದು ಸಹಜ. ಅಲ್ಲದೇ ಎರಡು ಬಾಯಿಗಳಿದ್ದೂ ಮೂಕರಾಗಿರಲು ಸಾಧ್ಯವಿದೆಯೇ? ನಾವಿಬ್ಬರೂ ಮಾತಾಡಿದರೇನೇ ಸ್ವರ್ಗದಲ್ಲಿದ್ದಂತಾಗುತ್ತದೆ. ನಿನಗಿಂತಲೂ ಕಟು ಅನುಭವವಾಗುತ್ತೆ ಹೊರಗೆಲ್ಲಾ. ಸಹೋದ್ಯೋಗಿಗಳು ಜಬರ್ದಾಗಿರುವಾಗ್ಗೆ ನಾನು ಹೀಗೇಯೇ ಇರುವುದನ್ನು ಕಂಡು ಅಸಹ್ಯ ಪಡದವರು ಕಡಿಮೆ ಜನ—ಒಳಿದನ್ನು ತಿಳಿದವರು ಮಾತ್ರ. ಇಂತಹ ಅನೇಕ ಘಟನೆಗಳಿಂದ ಸೊಂದನಾನು ನಿನ್ನೊಡನೆ ಚಕ್ಕಂದವಾಡದೆ ಅದು ಹೇಗೆ ಬದುಕಬಲ್ಲೆ! ನಾನು ಮಾಡುವದೆಲ್ಲಾ ತಮಾಷೆಗೆ; ಆದರೆ ಆ ತಮಾಷೆಯು ಸಧ್ಯಕ್ಕೆ ಹಾಸ್ಯವೆನಿಸುವುದೇ ಹೊರತು ಮುಂದೆ ಆ ರೀತಿ ನಾವು ಆಗಲಾರೆವೆಂದು ಅದು ಹೇಗೆ ಹೇಳಲು ಸಾಧ್ಯ? ಕಾಲವು ಯಾವಾಗಲೂ ಒಂದೇ ರೀತಿ ಇರಲಾರದು. ಬರೀ ಸುಖವಿದ್ದರೆ ಅದು ಸ್ವರ್ಗವಾಯಿತು. ಬರೀ ದುಃಖವಿದ್ದರೆ ಅದು ನರಕವಾಯಿತು. ಮಧ್ಯದಲ್ಲಿ ಎರಡರ ಸಮ್ಮಿಶ್ರಣವೇ ಇರಬೇಕಲ್ಲವೇ? ಈಗ ಬರೀ ಕಷ್ಟದಲ್ಲಿ ತೊಳಲುವ ನಾವು ಮುಂದೆ ಬರೀ ಸುಖದಲ್ಲಿ ತೇಲಾಡಬಹುದು. ಅಸಂಭವವೇನೂ ಇಲ್ಲ ನನ್ನ ನುಡಿಯಲ್ಲಿ. ಈ ಸ್ಥಿತಿಯಲ್ಲಿ ಮಾತ್ರ ಹಾಸ್ಯವೆಂದು ತಿಳಕೊಂಡರೆ ಅಡ್ಡಿಯಿಲ್ಲ."

"ಶಿವಾ! ಆ ಕಾಲ ಬಂದರೇನು ಬಿಟ್ಟರೇನು? ನಮ್ಮ ಮನಸ್ಸುಗಳು ಮಾತ್ರ ಸತತವೂ ಹೀಗೆಯೇ ಇದ್ದರೆ ಸಾಕು."

"ಇದ್ದೇ ತೀರುತ್ವೆ....ಅಲ್ಲೇ ಈ ದಿನ ಒಳ್ಳೆ ಸಿನಿಮಾ ಬಂದಿದೆಯಂತೆ."

"ಈಗೇನು ಹೋಗೋದು ಬೇಡಿ ಮಹಾರಾಯರೇ, ಮುಂದೆ ಬಾಕ್ಸ್‌ನಲ್ಲಿ ಕುಳಿತು ನೋಡೋಣವಂತೆ."

" ಮಾತಾಡುತ್ತಾ ಒಂದು ರೊಟ್ಟಿ ತಿನ್ನುವುದಕ್ಕೇ ಇಷ್ಟೊತ್ತಾಯ್ತು. ಬೇಗನೇ ಇನ್ನೊಂದು ಮುಗಿಸು ಮಹಾರಾಯಳೇ."

" ಇಲ್ಲ ಕಣ್ರೀ, ನಿಮ್ಮ ಮಾತಿನಿಂದ್ಲೇ ಹೊಟ್ಟೆ ತುಂಬ್ತು. ಒಂದು ರೊಟ್ಟೀನೂ ಹೆಚ್ಚಾಗಿ ಬಿಡ್ತು. ಬೆಳಿಗ್ಗೆ ಇಬ್ರಿಗೂ ಅರ್ಧರ್ಧ ರೊಟ್ಟಿ ಟಿಫನ್ನಿಗಾಯ್ತು....ಮುಚ್ಚಿಡ್ತೇನೆ."

" ಬೆಳಿಗ್ಗೆ ಚಪಾತಿ ತರಿಸ್ತೀನಿ ಹೊಟೇಲಲ್ಲಿ ಈಗದ್ನ ತಿಂದುಬಿಡೇ."

" ನಾವೇನು ಸಾಹುಕಾರರೇ ಹೆಚ್ಚಾಗಿ ತಿಂದು ಅಜೀರ್ಣಕ್ಕೆ ಔಷಧಿ ತೆಗೆದುಕೊಳ್ಳೋದ್ಕೋ ಸೋಡಾ ಕುಡಿಯೋದ್ಕೋ ಮತ್ತೆ ಖರ್ಚುಮಾಡೋಕೆ? ನೀವು ಚಪಾತಿ ತರಿಸೋದ್ನ ಮುಂದೆ ಬಂಗ್ಲಿಯಲ್ಲಿರುವತನಕ ಮುಂದೆ ಹಾಕಿರಿ. ನೀವು ತರಿಸ್ತೀನಿ ಅಂದಾಕ್ಷಣ ನಂಬಲಿಕ್ಕೆ ನಾನೇನೂ ಮಳ್ಳು ಹುಡಿಗಿಯಲ್ಲ."

" ಹಾಗಾದ್ರೇ ಎಂಥ ಹುಡುಗಿ?"

" ಮಳ್ಳು ಮಾಡುವ ಹುಡುಗಿ."

" ನನ್ನೇನು ಮಳ್ಳು ಮಾಡೀಯೇ?"

" ನೀವು. ನಾನು—ನೀವು ಬೇರೆಯಲ್ಲವೆಂದು ತಿಳಿದುಕೊಂಡಿಲ್ವೇ? ಅದೇ ಮತ್ತೆ ನನ್ನ ಪ್ರಭಾವ."

" ಭಲೇ ಹುಡುಗಿ! ಎಷ್ಟು ಸ್ವಾರಸ್ಯವಾಗಿ, ಇನಿದನಿಯಲ್ಲಿ ಕವಿಗೆ ಕವಿಪತ್ನಿಯಾಗಿ ನುಡಿಯುತ್ತೀಯೆ? ಅಹಾಹಾ! ಹಣವಿದ್ದಿದ್ರೇ ಈಗ್ಲೇ ಹೋಗಿ ಒಂದು ಮನೋಹರವಾದ ಮುತ್ತಿನಹಾರ ತಂದು ಹಾಕುತ್ತಿದ್ದೆ ನೋಡೇ."

" ಹಣವಿಲ್ವಲ್ಲಾ ಈಗೇಕೆ ಆ ಮಾತು?"

" ಮುತ್ತಿನ ಬದಲಿ ಮತ್ತೇನಾದರೂ ಕೊಡಬಲ್ಲೆ"

" ಮತ್ತೇನು ರತ್ನ ಕೊಡ್ತೀರಾ?"

" ಅದಕ್ಕಿಂತಲೂ ಹೆಚ್ಚಿನದು...."

" ಹ್ಞಾ! ವಜ್ರ, ಮಾಣಿಕ್ಯ, ಮಕರತ, ಪುಷ್ಯರಾಗ, ನೀಲ, ಗೋಮೇದಿಕಾ, ವೈಡೂರ್ಯ, ಮುತ್ತು ಹವಳ ಇವೆಲ್ಲವುಗಳಿಗಿಂತ ಹೆಚ್ಚಿನದೇ?"

" ಹ್ಞೂ! ಇವೆಲ್ಲವುಗಳಿಗಿಂತ ಅಮೂಲ್ಯವಾದುದೂ!"

" ಸುಳ್ಳುಗಾರರೆಂದು ಡುಂಗೂರ ಹೊಡೆದಂತಾಯಿತಲ್ಲ."

" ಬುದ್ಧಿಯಿಲ್ಲದವಳು ಕೊರಳ ಗುದ್ದಿಗಿಂತ ಕಡೆ."

" ಇನ್ನು ಶುರುಮಾಡಿದಿರಾ! ಒಂದು ದಿನವಾದರೂ ನೀವು ಬಯ್ಯದೇ ಇರಲು ಸಾಧ್ಯವಿಲ್ಲವಲ್ಲವೇ?"

" ಹೆಂಗಸರನ್ನು ಗೋಳಾಡಿಸುವುದಕ್ಕಿಂತ ಹೆಚ್ಚಿನ ಆನಂದ ಇನ್ನಾವುದಿದೆ ಈ ಬಾಳಿನಲ್ಲಿ? ಈ ಲೋಕದಲ್ಲಿ?

" ಹ್ಞಾ! ಹೆಣ್ಣಿನ ಕುಲವು ಗಂಡಿನ ಕುಲದ ಲೀಲಾವಿನೋದಕ್ಕಾಗಿಯೇ ಸೃಷ್ಟಿಯಾಗಿದೆಯೋ?"

" ಒಂದು ದೃಷ್ಟಿಯಿಂದ ನಿಜ. ಪುರುಷರದು ಸಾಧಕ ಪ್ರವೃತ್ತಿ; ಸ್ತ್ರೀಯರದು ಪ್ರೋತ್ಸಾಹದಾಯಕ. ಸಾಧನೆಯಲ್ಲಿ ದಣಿದಾಗ ಸ್ತ್ರೀಯರು ತಮ್ಮ ಸಹಜ ಸೌಂದರ್ಯ ಮತ್ತು ಸೇವೆಯಿಂದ ತಣಿಸಿ, ಮತ್ತೆ ಮುಂದುವರಿಯಲು ಪ್ರಚೋದಿಸಲೆಂದೇ ಸ್ತ್ರೀಜಾತಿ ನಿರ್ಮಾಣವಾಗಿದೆ ಬಲ್ಲೆಯಾ ಬಿಂಕದವಳೇ?

" ಹ್ಞಾ! ಬಿಂಕದವಳು!! ಕವಿ, ಸಾಹಿತಿ ಅಂತ ತಿಳಿಕೊಂಡು ಬಿಟ್ಟು, ಮಾತಿನಿಂದ ಸೋಲಿಸಲು ಬರುತ್ತೀರಲ್ಲೇ—ನಾನು ಅಸಹಾಯಕಳೆಂದು."

" ನೀನೊಬ್ಬಳೇ ಏಕೆ? ಇಡೀ ಸ್ತ್ರೀಜಾತಿಯೇ ಹಾಗಿದೆ. ಅದಕ್ಕಾಗಿಯೇ ನಮ್ಮ ಪ್ರಾಚೀನ ಸಾಹಿತಿಗಳು—ರಸಿಕಶಿಖಾಮಣಿಗಳು—ಅಬಲೆಯರೆಂದು ಕರೆದಿದ್ದಾರೆ."

" ಶಿವಶಿವಾ! ನಾಳೆ ಆ ಮಹಿಳಾಸಮಾಜದ ಕಾರ್ಯದರ್ಶಿಯನ್ನು ಕರಕೊಂಡು ಬರ್ತೀನಿತಡ್ರಿ. ಹೀಗೆಲ್ಲಾ ಮಾತಾಡಿದರೇ...."

" ಸರಿಬಿಡು....ಅದೊಂದು ಕಡಿಮೆಯಾಗಿತ್ತು! ಅವಳೇಕೆ? ಅವಳನ್ನ–ಬೇಡಾ–ಅವಳ ಮಗಳು ಬಂದರೂ ನನಗೆ ಭೀತಿಯಿಲ್ಲ. ಒಳ್ಳೇ ಪೇಪರಿನಲ್ಲೇ ಬರೆದು ಎಲ್ಲಾ ಮಹಿಳೆಯರ ಎದುರು ನಿಂತಿರುವಾಗ ನಿನ್ನ ಸೊಟ್ಟ ಕಾರ್ಯದರ್ಶಿಯಳಿತ್ತಣ ತೊಪ್ಪಲು!"

" ಊಟಕ್ಕೆ ಮೊದ್ಲೇ ಹೀಗಂದಿದ್ರೇ ನಾನು ಈದಿನ ಊಟಾ ಮಾಡ್ತಾನೇ ಇರಲಿಲ್ಲಾ...."

" ನನಗಷ್ಟೂ ತಿಳಿಯೋದಿಲ್ಲಾ ಅಂದುಕೊಂಡಿದ್ದೆಯಲ್ವೇ?....ಅದೀಗ ತಪ್ಪಾಯ್ತಲ್ಲಾ...."

" ಇರ್ಲಿ. ನೀವು ನವರತ್ನಗಳಿಗಿಂತ ಅಮೂಲ್ಯವಾದುದನ್ನು ಮೆಚ್ಚುಗೆ ಕೊಡ್ತೇನೆಂದ್ರಲ್ಲಾ....ಅದೇನದು?"

" ಅದನ್ನೇಕೆ ಹೇಳಬೇಕು ಬಿಡೇ? ಗುಟ್ಟಾಗಿದ್ರೇ ಹೆಚ್ಚಿನ ಮಹತ್ವ ಅಲ್ವೇ?"

" ಬಹುಮಾನ ಕೊಡೋದ್ನ ಗುಟ್ಟಾಗಿಡ್ತಾರಂತೆ ! "

" ಹಾಗಾದ್ರೆ ಇಲ್ಲಿ ನೋಡುಬಾ ಈ ಜೇಬಿನಲ್ಲಿ."

" ನಿಮ್ಮ ಜೇಬಿನಲ್ಲೇನಿದೆರೀ, ಸಿಗರೇಟ್‌ಪ್ಯಾಕ್ ಬೆಂಕಿ ಪೆಟ್ಟಿಗೆ ಬಿಟ್ರೆ...."

" ನೊಡ್ತ್ಯಾದ್ರೂ ನೋಡು ಬಾರೇ...."

" ಅಪ್ಪ! ಬರೀ ಒಂದು ಕೊರಿ ಸಿಗರೇಟ್ ಐತಿ ...."

" ಪ್ಪ್...."

" ಏನ್ರೀ ಇದೂ....! "

" ಮುತ್ತಿನಬದಲಿ ಕೊಡ್ತೀನೆ ಅಂದೆನಲ್ಲಾ ಅದೇ....ಮುದ್ದು."

" ಅಯ್ಯ ಶಿವನೆ ? !!! "

# ನ ನ್ನಾ ಣೆ !

“ ನಿನ್ನ ಜನ್ಮದಾತ ಬಂದಿದ್ದನಲ್ಲಾ....ಏನಂತೆ? ಏನೋ ಬೋಧನೆ ನಡೆಸಿದ್ದಾ. ಏನೋ ಕೊಟ್ಟಹಾಗಾಯ್ತು, ಏನುಹೇಳೇ ಸಮಾಚಾರ ? ”

“ ಏನೋ ಸ್ತ್ರೀಯರು ನಡಕೊಳ್ಳುವ ರೀತಿಯನ್ನು ಹೇಳಿದ. ಅದನ್ನೆಲ್ಲಾ ಕೇಳಿ ನಿಮಗೇನಾಗಬೇಕಾಗಿದೆ? ಗಂಡಸಾಗಿ ಹುಟ್ಟ ಪುಣ್ಯಾತ್ಮರಾದವರಿಗೆ ಹೆಣ್ಣಿನ ಗೋಳು ಕೇಳಿ ಮಾಡುವುದೇನು ? ”

“ ಅಲೇ ಲೆಲೆಲೇ! ಯಾವಳೇ ನಿನಿಗೆ ಓದು ಹೇಳಿಕೊಟ್ಟವಳು? ಹ್ಞಾ ! ‘ಗಂಡಸರಿಗೇಕೆ ಹೆಂಗಸಿನ ಗೋಳು ’ ಎಂದಲ್ಲವೇ ನೀನಂದದ್ದು? ಊಹ್ಞೂ ! ಹಾಗಾದರೆ ಗಂಡಸಾದ ನಿಮ್ಮಪ್ಪನಿಗೇಕೇ ಹೆಂಗಸಾದ ನಿನ್ನ ಗೋಳಿನ ವಿಷಯ ? ಏನು ಹೇಳಿದ ಹೇಳು ಮೊದಲು ? ”

“ ಇಂಗ್ಲೀಸ್ ಓದಿದವರನ್ನು ಒಪ್ಪಿಸುವುದು ಸಾಧ್ಯವೇ? ಏನೋ ಹಿತೋಪದೇಶ ಮಾಡಿದ ಅಂದ್ರೆ....”

“ ಏನೇ ಅದು ಹಿತೋಪದೇಶ ? ”

“ ಹಿತೋಪದೇಶ ಅಂದ್ರೇ....‘ಗಂಡನ ಮನೆಯಲ್ಲಿ ಹೇಗೆ ನಡೆದುಕೊಳ್ಳಬೇಕು’ ಎಂಬುದನ್ನು ತಿಳಿಸಿ ಹೇಳುವುದು.

“ ಅದು ಗೊತ್ತೇ, ನನಗೆ ಪಾಠ ಹೇಳಿಕೊಟ್ಟು ನಿನ್ನ ಐದನೇ ಕ್ಲಾಸಿನ ಪಾಂಡಿತ್ಯ ತೋರಿಸಿಕೋಬೇಡ. ನಿಮ್ಮಪ್ಪ ಏನೇನು ಹೇಳಿದ ಅಂಬೋದನ್ನ ಕೇಳಿದ್ದು ನಾ.”

“ ಅದನ್ನೇರಿ ಹೇಳಿದ್ದು ನಾ. ಗೊತ್ತಿದೆ ಅಂತೀರಿ ಮತ್ತೆ ಕೇಳ್ತೀರಿ. ಹೇಗೆ ನಡೆದುಕೊಳ್ಳಬೇಕು ಅಂಬೋದನ್ನೇ ಅಪ್ಪ ಹೇಳಿದ್ದು.”

“ ಎಲೇ ! ಅದನ್ನೇ ಆಗ್ಲಿ, ಏನೇನಂದ ಎಂಬುದನ್ನೇ ಅವನು ಹೇಳಿದ ಮಾತುಗಳಲ್ಲೇ ಹೇಳು. ನೀನೂ ಸ್ವಲ್ಪ ಇಂಗ್ಲೀಷು ಕಲ್ತಿದ್ರೇ ಮುಗಿದಿತ್ತು ತಗಾನಂದು.”

“ ಹ್ಞೂ....ಮತ್ತೇನ್ಹೇಳ್ತಿದ್ದಾರು ಹಿತೋಪದೇಶಾ ಅಂದ್ರೆ ?....ನಿಮ್ಮತ್ತೆ ಏನಂದರೂ ಸುಧಾರಿಸ್ಕೋಬೇಕು—ಗಂಡನ ಹತ್ತಿರ ದೂರು ಹೇಳಬಾರದು

ಮತ್ತೆ ಹಾಗೇನಾದರೂ ಮಾಡಿದೀ ಅಂದ್ರೆ ಮನೆಯ ವಾತಾವರಣವೆಲ್ಲಾ ಕೆಟ್ಟು ನಿನಗೆ ಬಾಳಿನಲ್ಲಿ ಸುಖ ದೊರೆಯಲಾರದೂ, ಅಂತ."

"ಇಷ್ಟೇ ಆಯ್ತೇ! ಸರಿ. ನೀನು ಏನೇನು ಹೇಳಿಕಳಿಸ್ದೇ ಅದಕ್ಕೇ. ಇರಲಿ, ನಿನಗೇನಾದರೂ ನಮ್ಮ ಮನೆಯಲ್ಲಿ ತೊಂದರೆಯಿದೆಯೇ? ಯಾರಾದ್ರೂ ಏನಾದ್ರೂ ಬೈತಾರೆಯೇ? ಹೇಳು ನೋಡೋಣ."

"ಇಲ್ಲ, ಹಾಗೇನೂ ಇಲ್ಲ....ಒಂದು ಪಕ್ಷ ಹಾಗೇನಾದ್ರೂ ಬೈದ್ರೂ ನಾನು ನಿಮ್ಮೆದುರು ಹೇಳಲಾರೆ. ಏಕೆಂದರೆ ನಮ್ಮಪ್ಪ ನನ್ನನ್ನು ಆಶೀರ್ವದಿಸು ವಾಗಲೆಲ್ಲಾ ಆ ಹಿತೋಪದೇಶವನ್ನು ಮಾಡೇ ಮಾಡ್ತಾನೆ. ಅಂಥದನ್ನೆಲ್ಲಾ ನೀವೇ ಕಂಡುಹಿಡಿದುಕೊಳ್ಳಬೇಕೇ ಹೊರತು ನಾನೇ ನಿಮ್ಮೆದುರು ಎಂದೂ ಹೇಳಬಾರದು."

"ಎಲೇ, ಎಷ್ಟು ವರ್ಷೇ ವಯಸ್ಸು ನಿನಿಗೆ? ಒಳ್ಳೇ ದೊಡ್ಡ ಅನುಭವಸ್ಥೆ ಮಾತನಾಡಿದ್ಹಾಂಗೆ ಮಾನಾಡ್ತೀಯಲ್ಲೇ! ಭೇಭೇಭೇ, ಭಲೇ ಹುಡುಗಿ! ಭೇಷ್ ಬಿಡು, ಒಳ್ಳೇ ಛಲೋ ಮಂತ್ರಹಾಕಿದ್ದಾನೇಳು ನಿಮ್ಮಪ್ಪ! ಅಲ್ಲೋ ನಾನು ಬಂದಾಗ ಮಾತ್ರವೇನೋ ಮನೆಯಲ್ಲಿ ಯಾವಾಗಲೂ ಗೊಂದಲವೇ ಇರುವುದಿಲ್ಲ. ಆದರೆ ಒಳಗೊಳಗೇನಾದ್ರೂ ನಡೀತಿತ್ತೇನೂ ಅಂತ ಕೇಳಿದೆ. ಹಾಗೇನಾದ್ರೂ ಇದ್ರೆ ಹೇಳು ಪಾಪ. ನೀನೂ ಪರರ ಮಗಳು ಪಾಪ; ನಿನ್ನಾ ಚಿಕ್ಕಂದಿನಿಂದಲೂ ಗಿಳಿ ಸಾಕಿದ ಹಾಗೆ ಸಾಕಿದ್ದಾರೆ. ನಿನ್ನಪ್ಪ ಅಮ್ಮಂದಿರು....ಆದ್ರೆ ನೋಡು, ಈ ವಿಷಯದಲ್ಲಿ ಹಾಗೆಲ್ಲಾ ಮಾಡಬಾರದು. ಸುಮ್ಮನೇ ಮೂಕಿಯಂತೆ ಕಷ್ಟ ಸಹಿಸುವುದು ಸರಿಯಲ್ಲ. ಏನೇನು ನಡೆಯಿತೆಂಬದನ್ನಾದರೂ ತಿಳಿಸುತ್ತಿದ್ದರೆ–ಸಾಧ್ಯವಾದರೆ ನಾನೆಲ್ಲಾ ಸಮಯ ನೋಡಿ ಪರಹರಿಸುತ್ತಿರುತ್ತೇನೆ."

"ಭೇಭೇ ಹಾಗೇನೂ ಇಲ್ಲ. ಇಂಥಾ ಅತ್ತೆಯವರು ದೊರಕಿರುವುದು ನನ್ನ ಪೂರ್ವಜನ್ಮದ ಪುಣ್ಯ. ಇಂಥಾ ಮಾವನವರನ್ನು ನಾನು ಇನ್ನೂ ಏಳು ಜನ್ಮಗಳಲ್ಲಿಯೂ ಕಾಣಲಾರೆ."

"ನಿಜ ಹೇಳೇ ಮತ್ತೆ. ನಿಮ್ಮಪ್ಪ ಹೇಳಿದಂತೆ ಕಳ್ಳ ತೃಪ್ತಿ ನಟಿಸ್ಬೇಡಾ. ಯಾಕೋ ನಿನ್ನ ಮಾತಿನಮೇಲೆ ನನಗೆ ಅನುಮಾನವಾಗ್ತಾ ಇದೆ. ಹೇಳು ....ಏನಾದ್ರೂ ಇದ್ರೆ ಮುಚ್ಚುಮರೆಯಿಲ್ಲದೆ ಹೇಳು. ನಿನಗಿಲ್ಲಿರುವ ಕಷ್ಟವೇನು, ದುಃಖವೇನು? ತೌರು ನೆನಸಿಕೊಂಡು ಕೊರಗುವೆಯಾ? ನಾನು ದಿನಕ್ಕಾರು

ಗಂಟೆ ನಿನ್ನ ಬಳಿ ಇರುವುದಿಲ್ಲವೆಂದು ಮರುಗುವೆಯಾ? ಮನೆಯಲ್ಲೇನೂ ತೊಂದರೆಯಿಲ್ಲವೆಂದು ಹೇಳುತ್ತೀ ಮತ್ತೆ.... ನಿಜವೇ?"

"ಛೇಛೇ ಏನೂ ಇಲ್ಲ. ನಾನೆಂದೂ ದುಃಖಿಸಿಯೆ ಇಲ್ಲ ನೀವೇನೋ ಅಂತೀರಿ!"

"ಹೋಗಲಿ. ಇನ್ನೊಂದು ದಿನ ವಿಚಾರಿಸಿಕೊಳ್ಳುತ್ತೇನೆ ಅದನ್ನೆಲ್ಲಾ ಈ ದಿನ ಬೇಡ. ಹ್ಞಾ....ಈಗ ಇದನ್ನು ಹೇಳು – ನಿಮ್ಮಪ್ಪಗೆ ನೀನು ಏನು ಹೇಳಿದೆ? ಇನ್ನೂ ಮೊನ್ನೆ ಕಳಿಸಿ ಹೋದವನು ಆಗಲೇ ಬಂದಿದ್ದನಲ್ಲಾ ಗಿಳಿಯನ್ನು ಮಾತಾಡಿಸಲು ಏಕೆ ಬಂದಿದ್ದನಂತೆ–ನೋಡಲಿಕ್ಕೇ ಅಲ್ಲವೇ ನಿನ್ನಾ?"

"ನೀವಂತೂ! ಏನೋ ಈ ಊರಲ್ಲಿ ಯಾವುದೋ ಕೆಲಸದ ಮೇಲೆ ಬಂದಿದ್ದನಂತೆ. ಊರಿಗೆ ಬಂದ ಮೇಲೆ ಮನೆಗೆ ಬಾರದೇ ಹೊಂಗುವುದಾಗುತ್ತದೆಯೇ? ಹಾಗೇ ಬಂದು ಹೋದಾ. ಅದಕ್ಕೇ ಎಷ್ಟು ಪರಿಹಾಸಾ ಮಾಡ್ತೀರಿ ನೀವು? ನಿಮಿಗೆ ಸಹಿಸದಿದ್ರೆ,ಇನ್ನುಮೇಲೆ ಜಕಾ ಜಕಾ ಹಾಗೆ ಬರಬೇಡವೆಂದು ತಿಳಿಸುತ್ತೇನೆ ಬಿಡಿ."

"ಅಯ್ಯೋ ಮಹಾಕಾಳಿ! ಎಷ್ಟು ಕೋಪವೇ ನಿನಗೆ! ಇನ್ನೂ ಮಕ್ಕಳಾಗದೇ ಇಷ್ಟು ಅಧಿಕಾರ ಬಂತೇ ನಿನಗೆ? ಭಲೇ ಭಲೇ! ಏನೋ ಅಂದ್ರೆ ಅಷ್ಟುಕೋಪ ಬಂದ್ಬಿಡ್ತೇ? ನಿನ್ನ ಕೈಗೆ ಯಾವನಾದರೂ ಸಂಪನ್ನ ಗಂಡ ಸಿಕ್ಕಿದ್ರೆ ನುಂಗಿಬಿಡ್ತಿದ್ದೆಯೋನೊ! ಹೆಹ್ಹೇ .... ಹ್ಞಾ, ಹೋಗಲಿ, ಅದರ ವಿಷಯ ಅಲ್ಲ ಬಿಡೇ ನಾನಂದದ್ದು. ಅವನು ಬಂದಿರೋದು ಅರ್ಧ ತನ್ನ ಕೆಲಸಕ್ಕಿದ್ದರೆ ಅರ್ಧ ನಿನ್ನ ನೋಡೋಕೆ ಅನ್ನೋದೂ ನನಗೇನೂ ಗೊತ್ತಿಲ್ವೇ? ಇರ್ಲಿ ಮತ್ತೆ, ಈಗ ನೀನೇನಾದ್ರೂ ಹೇಳಿಕಳಿಸಿದೆಯೇನೋ ಅಂತ ಕೇಳುವುದು ಮುಖ್ಯ-ಹೇಳು ಮೊದಲು .... ಇಲ್ಲಿ ನೋಡೇ ನನ್ನ ಮುದ್ದುಗಿಳಿಯೇ, ನೀನೀಮನೆಯೊಳಿರದಿದ್ದರೆ ನನಗೂ ನನ್ನ ಮಾವನ ಮನೆಯೊಳಿರುವ ಇಷ್ಟವಾಗುತ್ತೇಯೆ. ಆದರೆ ಜನರ ಮಾತುಗಳ್ನ ಸಹಿಸೋದು ಸಾಧ್ಯವಿಲ್ಲ. ಅದಕ್ಕೇ ನೀನು ಇನ್ನುಮೇಲೆ ತವರಿಗೆ ಹೋಗಲೇ ಬೇಡವೇ; ಇಲ್ಲೇ ಇದ್ದುಬಿಡಬಾರದೇ ನನ್ನ ಮೂರನೇ ಕಣ್ಣೇ! ಮತ್ತೆ 'ಕರೆದುಕೊಂಡು ಹೋಗಲು ಬಾ' ಎಂದೇನೂ ಹೇಳಿ ಕಳಿಸಿಲ್ಲತಾನೆ ನಿನ್ನ ತಂದೆಯೊಡನೆ?"

"ಹಾಗೇನೂ ಇಲ್ಲ. ಆದರೆ ಅಲ್ಲಿ ಏನಾದ್ರೂ ಹಬ್ಬಗಳಿದ್ರೆ .... ಅವರೇ ಬಂದು ಕರೆದರೂ ಕಳಿಸುವುದಿಲ್ಲವೇ? .... ನಾನೇನುಮಾಡಲಿ? ಕರೆಯಲು ಬಂದಾಗ ನೀವು ಕಳಿಸುವುದಿಲ್ಲವೆಂದು ನಿಷ್ಠುರವಾಗಿ ಹೇಳಿದರೆ ಅವರೇ ಬಿಟ್ಟು ಹೋಗುತ್ತಾರೆ."

"ಅಲ್ವೇ ಅವರಿಗೆ ನಿಷ್ಠುರವಾಗಿ ಹೇಳುವುದು ನನ್ನಿಂದ ಸಾಧ್ಯವೇ?"

"ಹಾಗಾದರೆ ಕಳಿಸಿಕೊಟ್ಟುಬಿಡಿ."

"ಊಹ್ಞೂ, ಅದೂ ಸಾಧ್ಯವಿಲ್ಲ. ಆದರೆ ಒಂದುಪಾಯ: ನೀನು ಅವರಿಗೆ ಪತ್ರ ಬರಿ – 'ಈಸಾರೆ ನನ್ನನ್ನು ಕರೆದುಕೊಂಡು ಹೋಗಬೇಡಿರಿ. ನನಗೇ ಇಲ್ಲೇ ಇರಲು ತುಂಬಾ ಇಷ್ಟ. ನಿಮಗೆ ನನ್ನನ್ನು ನೋಡುವ ಇಷ್ಟವಾದರೆ ಇಲ್ಲಿಗೇ ಬಂದು ಕೆಲದಿನವಿದ್ದು ನೋಡಿಕೊಂಡು ಸಾಕಾದಮೇಲೆ ಹೋಗಿರಿ.' ಎಂದು ಬರೆ....ಆ್ಞ....ಸುಮ್ಮನಿರುವಿಯಲ್ಲೇ?! ನಿನಗೆ ಇಲ್ಲಿರಲು – ನನ್ನ ಬಳಿ ಇರಲು – ಇಷ್ಟವಿಲ್ಲವೇ, ನನಗೆ ನಿನ್ನ ಬಳಿಯಿರಲು – ಇಷ್ಟವಂತೆ....ಆ್ಞ?"

"ಅಯ್ಯೋ! ಇದೇನ್ರಿ ಹೀಗೆ ಕೇಳ್ತೀರಿ! ನೀವೇ ನನ್ನ ದೇವರೆಂದ ಮೇಲೆ ನಿಮ್ಮಲ್ಲಿ ಇಷ್ಟವಿಲ್ಲದಿರಲು ಸಾಧ್ಯವೇ? ಮತ್ತೆ ಇಷ್ಟವಿಲ್ಲವೇ ಎಂದು ಕೇಳ್ತೀರಲ್ಲಾ! ನಾನೇನು ಇಂಗ್ಲೀಷು ಕಲಿತ ಅಧಿಕ ಪ್ರಸಂಗಿಯೇ ಹಾಗೆ ಕೇಳಲು? .... ಅಲ್ರೀ, ನನ್ನ ತಂದೆ ತಾಯಿಗಳಿಗೆ ಹಾಗೆ ಪತ್ರ ಬರೆಯಲು! ನನ್ನಿಂದ ಸಾಧ್ಯವೇ? ಉಚಿತವೇ ಅದು? ಛೇ, ಅವರು ಏನುತಿಳಕೊಂಡಾರು 'ಹೇಗೆ ಪತ್ರಬರೆಸಿದಾರಲ್ಲಾ ಇವರು ನಮ್ಮ ಮಗಳಿಂದ! ಅಯ್ಯೋ ನಮ್ಮ ಮಗಳಗತಿ ಕಟುಕರಿಗೆ ಕೊಟ್ಟ ಕುರಿಯಂತಾಯಿತಲ್ಲಾ' ಎಂದು ಮರುಗಿಯಾರು!"

"ಹಾಗಾದರೆ ನಿನಗೂ ತೌರಿಗೆ ಹೋಗಲು ತುಂಬಾ ಇಷ್ಟವಿದೆಯನ್ನು ....ಗೊತ್ತಾಯ್ತು. ಆದರೆ ನೀನು ಹೋದರೆ ನನಗೆ ಅತ್ಯಂತ ಬೇಸರವಾಗ್ತದೆ. ಕೇಳಿಲ್ಲಿ, ಯಾವಾದರೂ ದೊಡ್ಡ ಹಬ್ಬಗಳಿಗೆ ಮಾತ್ರ ಹೋಗು ಅಂಥಾ ಹಬ್ಬಗಳು ವರ್ಷದಲ್ಲಿ ಎರಡೋ ಮೂರೋ ಇರುತ್ತದೆ. ಅಂತೂ ಜಕ ಜಕಾ ಹೋಗಬೇಡ. ಇರಲಿ, ಈಗ ಮಾತ್ರ ನಿಮ್ಮ ತಂದೆಗೆ ಮತ್ತೆ 'ಕರೆಯಲು ಬಾ, ಎಂದು ಹೇಳಿಕಳಿಸಿಲ್ಲತಾನೇ? .... ಹಾ .... ಹೇಳೇ!"

"....ಹಾಗೇನೂ ಇಲ್ಲ....ಅಪ್ಪನೇ ಏನಾದ್ರೂ...."

"ನಿಜ ಹೇಳೇ ಮತ್ತೆ, ಸುಳ್ಳು ಹೇಳಿ ಮುಚ್ಚಿಟ್ಟುಕೋಬೇಡಾ."

"ನಾನೇನೂ ಹೇಳ್ಲಿಲ್ಲಾ....ಆದ್ರೆ ಅವನೇ ಏನಾದ್ರೂ ಬಂದ್ರೆ...."

"ಎಲೇ ಸುಮ್ನೇ ನಡೆದದ್ದನ್ನೆಲ್ಲಾ ಹೇಳ್ತೀಯೋ ಇಲ್ಲೇ?"

"....ಇಲ್ಲಾ....ಕಣ್ರೀ...."

"ಅಯ್ಯೋ ಮಹಾರಾಯ್ತೀ, ಏನಾದ್ರೂ ಇರ್ಲಿ ನಾನೇನೂ ಮಾಡಲ್ಲ. ಸುಮ್ಮೆ ನಡೆದದ್ದನ್ನೆಲ್ಲಾ ಹೇಳಿಬಿಡೇ...."

"ಹ್ಣೂ....ಮತ್ತೂ ಅದೇ...."

"ಇಗೋ ಸುಮ್ನೆ ಹೇಳ್ತೀಯೋ ಇಲ್ಲೋ? ನೋಡೂ. ಇಲ್ದಿದ್ರೇ **ನನ್ನಾಣೆ.**"

"ಹ್ಣಾ! ಅಯ್ಯೋ....ನಿಮ್ಮ....ನಿಮ್ಮ ಮೇಲೆ ಆಣೆ ಇಟ್ಟುಬಿಟ್ಟರಾ!!.... ಉಹ್ಣು....ಉಹ್ಣು....ಹ್ಣೂ, ಅಪ್ಪಗೆ 'ಈಗ ಯಾವ ಹಬ್ಬಗಳಿಲ್ಲದಿದ್ದರೂ ಹಿರಿಯರನ್ನು ಮಾಡಿಕೊಳ್ತೀವೆ ಅಂತ ಹೇಳಿ ಕರಕೊಂಡು ಹೋಗ್ಲಿಕ್ಕೆ ಬಾಪ್ಪಾ' ಅಂತ ಹೇಳಿ ಕಳಿಸಿದೆ....ನೀವೂ....ಊ್ಣ ಊ್ಣ...."

"ಆ್ಣ!....ಹಾಗಾದ್ರೇ ಈ ಕ್ಷಣವೇ ಪತ್ರ ಬರಿ–ಕರೀಲಿಕ್ಕೆ ಬರಬೇಡಾಂತ. ತಾ ಇಲ್ಲಿ ಒಂದು ಕವರ್ನ, ವಿಳಾಸ ಬರೆದು ಕೊಡ್ತೀನೆ ಇಂಗ್ಲೀಷಿನಲ್ಲಿ. ಎಲ್ಲಾ ಸಮಾಚಾರ ನಾನು ಹೇಳಿದಂತೆ ಬರೆದು ಹಾಕಿಬಿಡು."

"ಊ್ಣ?....ಅಲ್ರೀ, ಏನೋ ನಾಲ್ಕುದಿನ ಇದ್ದು ಬರ್ತೀನಿ, ಮತ್ತೇಕೆ ಬರಬೇಡಾಂತ ಬರೀಬೇಕು...."

"ಯಾಕೆ?! ಸಾಲದೇನು? ಇನ್ನೂ ಮೊನ್ನೆ ತಾನೆ ಬಂದೀದಿ. ಇನ್ನೂ ಸರಿಯಾಗಿ ಒಂದು ತಿಂಗಳು ಕೂಡಾ ಕಳೆದಿಲ್ಲ....ಆಗ್ಲೇ ಹೋಗ್ತಾಳಂತೆ!....ನಿನಗೇನು ತೊಂದರೆಯಿದೆ ಹೇಳೂ ನಾನೆಲ್ಲಾ ಸರಿಮಾಡ್ತೀನೀ ತೊಂದ್ರೆ ಲೋಪಮಾಡ್ತೀನಿ ಅಂದ್ರೆ ಹೇಳ್ಪಲ್ಲೇ....ಮತ್ತೆ ನಾಲ್ಕು ದಿನ ಹೋಗ್ತಾಳಂತೆ!....ನಿನ್ನ ಜೀವಮಾನಾನೆಲ್ಲಾ ಹೀಗೇ ಕಳಿಬೇಕೂಂತ ಮಾಡಿದೀಯಾ? ಹೇಳು ಅಂದ್ರೆ ಹೇಳ್ಪಲ್ಲೆ, ಹೋಗ್ತೀನಿ ಅನ್ನೋದು ಬಿಡ್ಪಲ್ಲೆ. ತವರಿನಲ್ಲಿ ಎಷ್ಟು ದಿನ ಕಳೆದರೂ ನಿನಗೇನೋ ಅವು ನಾಲ್ಕು ದಿನ–ನನಗೇ ನಾಲ್ಕು ಕಂಟಕ! ಸುಮ್ನೆ ಒಳ್ಳೇ ಮಾತೀಲಿ ಪತ್ರ ಬರಿ, 'ಕರೀಲಿಕ್ಕೆ ಬರಬೇಡಾ' ಅಂತ. ಊ್ಣ, ಬರೀತೀಯೋ ಇಲ್ಲೋ ಮತ್ತೆ?"

" ಅಲ್ರೀ, ಇದೊಂದು ಬಾರಿ ಯಾದ್ರೂ....ಊ ಊ್ಞ....ಉಹ್ಞು...."

" ಥೂ, ಯಾವಾಗ್ಲೂ ಅದೇ....ಅಳೋದೇ! .... ಬರೀತೀಯೋ ಇಲ್ಲೋ? ನೋಡೂ ಇಲ್ದಿದ್ರೇ....**ನನ್ನಾಣೆ.**"

" ಅಯ್ಯೋ! ಆಣೆ ಇಟ್ಟುಬಿಟ್ಟರಾ! .... ಉಹ್ಞೂ ಉಹ್ಞೂ.... ಊ ಊ ಊ್ಞ .... ಹ್ಞು ತಕ್ಕೊಳ್ರೀ, ವಿಳಾಸ ಬರಕೊಡ್ರಿ ಮೊದ್ಲು."

" ಹ್ಞಾ, ಹಾಗೆ ಬಾರೇ ನನ್ನ ಕಟ್ಮಾಣಿ! ನನಗ್ಗೊತ್ತು, ಇನ್ನು ಬರೀ ಬೇಡಾಂದ್ರೂ ಬಿಡೋದಿಲ್ಲ ಅಲ್ವೇ? ಇಲ್ಲಿ ತಾ .... ಇರ್ಲಿ, ಬರೆದುಕೊಡ್ತೇನೀ .... ಆ್ಞ .... ಏನೋ ಕೊಟ್ನಲ್ಲೇ ನಿಮ್ಮಪ್ಪ? "

" ಶಿವಶಿವಾ! .... ಏನು ಕೊಡ್ತಿದ್ದಾನು ಹಗಲೆಲ್ಲಾ! ಇನ್ನೂ ಮೊನ್ನೆ ತಾನೇ ಊರಿಂದ ಬಂದೀನಿ, ಈಗ ಮತ್ತೆ ಏನು ಕೊಡ್ತಿದ್ದಾನು....ಪಾಪ? "

" ಛೀಛೀ, ನಾನು ಮರೆಗೇ ನಿಂತುಕೊಂಡು ಎಲ್ಲಾ ನೋಡೀನಿ. ಸುಳ್ಳು ಹೇಳ್ತೀಯಾ? ಸುಮ್ನೆ ಗಡಾ ಹೇಳ್ತೀಯೋ ಇಲ್ಲೋ ಎಷ್ಟು ಕೊಟ್ಟ? .... ಹ್ಞೂ ಹೇಳು ....ನೋಡೂ ಹೇಳದಿದ್ರೆ **ನನ್ನಾಣೆ.**"

" ಅಯ್ಯೋ ಮತ್ತೂ **ಆಣೆ**!....ಹಗಲೆಲ್ಲಾ ಆಣೆಯಾಕಿಡ್ತೀರೀಂದ್ರೆ? ಇಟ್ಟ ಆಣೆ ವ್ಯರ್ಥವಾದ್ರೆ ಆಯುಷ್ಯ ಕಮ್ಮಿ ಆಗುತ್ತಂತೆ! ಉಹು ಉಹು...."

" ನನ್ನ ಮುದ್ದೇ, ನಾನಿಟ್ಟ ಆಣೆಯು ನಿನ್ನಿಂದ ವ್ಯರ್ಥವಾಗುವದಿಲ್ಲೆಂದು ನಿನ್ನಾಣೆಯಾಗಿಯೂ ನನಗೆ ಗೊತ್ತು. ಹಹ್ಹಹ್ಹಾ....."

"ಉಹು ಉಹ್ಞೂ....ಅಪ್ಪಾ, 'ಬಳೀ ಗಿಳೀ ಇಟ್ಟುಕೋ' ಅಂತ ಎರಡು ರೂಪಾಯಿ ಕೊಟ್ಟ. ಅದನ್ನು ಆಗ್ಲೇ ನೋಡಿಕೊಂಡಿದೀರಲ್ಲಾ! "

" ಅಲ್ಲೇ, ನಿನಗೆ ಬೇಕಾದ್ರೆ ನಾನು ಕೊಡೋದಿಲ್ಲೇನು? ಅವನಿಂದ ಏಕೆ ತೆಗೆದುಕೊಂಡೆ? ಇನ್ಮೇಲೆ ಹಾಗೆ ಇಸ್ಕೋ ಬೇಡ. ಎಲ್ಲಿ, ಇಲ್ಲಿ ತಾ. ನಾನೆಲ್ಲಾ ನಿನಿಗೆ ಬೇಕಾದಾಗ ಕೊಡ್ತೇನಿ. ಇನ್ನೂ ಮೊಳಕೈ ತನಕ ಬಳೆ ಗಳಿರುವಾಗ ಬಳೆ ಇಟ್ಟುಕೊಳ್ಳಲು ಮೊದಲು ಜಾಗಾನೇ ಇಲ್ಲ ಕೈಯಲ್ಲಿ, ತಾರೆ ಇಲ್ಲಿ."

" ಮತ್ತೆ ನಿಮ್ಮ ಕೈಯಲ್ಲೇಕೆ ಕೊಡಬೇಕು? ನಿಮ್ಮ ಬಳಿ ಇರುತ್ತದೆಯೇ ಹಣ? ನನ್ನ ಬಳಿಯಾದರೆ ಎಂದಿಗೂ ಹಾಗೇ ಇದ್ದೀತು. ಬೇಕಾದಾಗ ಉಪಯೋಗಿಸಿಕೊಳ್ಳಲಿಕ್ಕೂ ಬಂದೀತು. ನನ್ನಲ್ಲೇ ಇರ್ಲಿ ಬಿಡಿ."

“ ಎಷ್ಟು ಮಾತಾಡ್ತೀಯೇ! ನಿನಗೆ ನಾನೆಲ್ಲಾ ಬೇಕಾದಾಗ ಕೊಟ್ರೆ ಆಯ್ತಲ್ಲೋ? ತಾರೆ ಇಲ್ಲಿ, ನನ್ನ ಹತ್ರ ಈಗ ಖರ್ಚಿಗೆ ಕಾಸಿಲ್ಲ–ಅಲ್ಲಲ್ಲ–ನಯಾಪೈಸಾ ಇಲ್ಲ....ತಾ....ಹ್ಞೂ ತಾರೆ....ಸಿಗರೇಟ್‌ಗೂ ಇಲ್ಲಾಂದ್ರೆ ಈಗ! ಏನು ಮಾಡ್ಲೀಂತ ಯೋಚಿಸ್ತಿದ್ದೆ. ಅವ್ವನ್ನ ಕೇಳೋಣಾಂತ ಮಾಡಿದ್ದೆ.... ಇಲ್ಲೇ ಸಿಕ್ತಲ್ಲ ಬೇಟೆ! ”

“ ಓಹೋ! ನಿಮ್ಮ ಕರ್ಚಿಗಿಲ್ಲದಿದ್ರೆ ನನ್ನ ಸುಲಿಗೆ ಮಾಡಬೇಕೇ? ದೊಡ್ಡ ಮನುಷ್ಯರ ಹಾಗೆ ‘ತಂದೆಯಿಂದ ಏಕೆ ತೆಗೆದುಕೊಂಡೆ’ ಎಂದು ಆಚಾರ ಹೇಳಿ ಬೆದರಿಸಿ ಮತ್ತೆ ಅದೇ ಹಣವನ್ನೇ ಕೇಳುವುದೇ? ”

“ ಅಬ್ಬಬ್ಬಾ! ಎಷ್ಟು ಮಾತಾಡ್ತೀಯೇ!!....ನಿನ್ನ ತಣಿಸಿ ಸೀನಾಗಿಯೇ ಹಣ ಕೊಡುವಂತೆ ಮಾಡಲು ಒಂದೇ ಒಂದು ಮಂತ್ರ ಸಾಕು. ಇಕಾ ನೋಡೂ....”

“ ಅಯ್ಯಯ್ಯೋ! ಸಾಕು ಬಿಡ್ರಿ ಮಹಾರಾಯರೇ. ಆಣೆ ಮಾತ್ರ ಇಡಬೇಡಿರಿ. ಇಗೊಳ್ಳಿ ಈ ಎರಡು ರೂಪಾಯ್ನ....ಊ್ಞ, ಊ್ಞ....”

“ ಇದ್ದರಿರಬೇಕೆಲೇ ನಿನ್ನಂಥ ಮಡದಿ!....ಏಕಳ್ತಿ ಬಿಡೆ ಸಾಕು. ಎಲ್ಲೀ, ಇಲ್ಲಿ ಬಾ ಸ್ವಲ್ಪ....ಆ್ಞ?....ಬರಲ್ವೇ?....ಅಯ್ಯೋ ಹುಚ್ಚೀ ನಾನಿದುವರೆಗೆ ಮಾಡಿದ್ದೆಲ್ಲಾ ತಮಾಷೆ ಕಣೇ!....ಹಹ್ಹಾ....ನೀನು ತೌರಿಗೂ ಹೋಗು, ನಿನ್ನ ರೂಪಾಯಿಗಳೂ ನಂಗೆ ಬೇಡಾ! ಹಹ್ಹಹ್ಹಾ....ಎಲ್ಲಿ ಈಗಾದ್ರು ಇಲ್ಲಿ ಬಾ ಮತ್ತೆ....”

“ ಊ ಊ ಊ ಊ್ಞ....ಉಹ್ಞು....”

“ ಲೇ, ಬಾರೇ ಇಲ್ಲಿ....ಇಕಾ ನೋಡೂ ಬರದಿದ್ರೇ **ನನ್ನಾಣೆ.**”

“ ಅಯ್ಯಯ್ಯೋ! ಇಕಾ ಬಂದೆ ಕಣ್ರೀ....”

# ನನ್ನ ಬೇವಿ

ಹೆಂಡ್ತಿ ತನ್ನ ತವರು ಮನೇಲಿರುವಾಗ, ಯಾರಿಗಾದ್ರೂ ಹೆಂಡ್ತಿ ಮನೆ ಗ್ಹೋಗ್ಬೇಕಂತಾ ಇಷ್ಟ ಆದ್ರೆ ಎಷ್ಟು ಸಂತೋಷಾಗ್ತದಂತ ನನ್ನಂತಹ ಮದುವೆ ಯಾದ ಮಿತ್ರರಿಗೆಲ್ಲಾ ಪಕ್ಕಾಗೊತ್ತು. ಅದರಾಗ ಹೆಂಡ್ತಿ ಮನೆಗೆ ಹೊರಟೇ ಬಿಟ್ಟೆ ಅಂದ್ರೆ ಅದರ ಸಂತೋಷಾನಂತೂ ಯಾವ ಕವಿಯೂ ವರ್ಣಿಸೋ ಗೋಜಿಗೇ ಹೋಗಿಲ್ಲ; ಹೋಗೋದೂ ಇಲ್ಲ: ವರ್ಣಿಸಾಕೆ ಸಿಕ್ರಲ್ವೇ ಸ್ಹೋಗೋದು? ಅಂತೂ ನಾನೂ ಧೈರ್ಯಮಾಡಿ ಮನೆಯವರಿಗೆಲ್ಲಾ ಏನೋ ಒಂದು ಟಕ್ಕು ಹಚ್ಚಿ ಹೊರಟೇ ಬಿಟ್ಟೆ. ನನ್ನ ತಾಯಿಗೆ ಮಾತ್ರ ನನ್ನ ಗುಟ್ಟು ಹೊಳೆದು ನಾನು ಬಹು ದಿನಗಳಿಂದ ತೆಗೆದುಬಿಟ್ಟಿದ್ದ ಚೌಕವನ್ನು ಹಾಕಿಸಿದಳು.

ನಾನು ಹೊರಡೋ ಮುಂಚೆ ನನ್ನ ಹೆಂಡ್ತಿಗೆ ಪತ್ರ ಬರೆದು ಸುದ್ದಿ ತಿಳಸಬೇಕೂ ಅನ್ನೋ ಹಾಗೇ ಇಲ್ಲ. ಅವಳಿಗೆ ಓದೇ ಬರಲ್ಲ. ಮೊದಲೇ ಹಳ್ಳಿ ಹೆಣ್ಣು! ಅದೂ ಒಳ್ಳೇದೇ, ಅಂಚೆ ಕರ್ಚಾದ್ರೂ ಉಳೀತು. ಇಲ್ದಿದ್ರೆ ಹೊಸತರಲ್ಲಿ ಬರೀ ಅದಕ್ಕೇ ಅರ್ಧ ರೊಕ್ಕ ಕರ್ಚಾಗ್ಬಿಡ್ತಿತ್ತು. ಅಲ್ಲಿಗೆ ಹೋಗ್ಬೇಕಂದ್ರೆ ಸೀದಾ ಅವಳ ಮನೇಮುಂದೆ ಹೋದಾಗ, ಅವಳಾಗಿ ನನ್ನ ನೋಡಿದಾಗ, ಅವಳಿಗೆ ನಾನು ಕಂಡಾಗ, ನನ್ನ ಗಂಡ ಬಂದ ಅಂತ ಅವಳಿಗೆ ಗೊತ್ತಾಗ್ಬೇಕು. ಅದರಂತೆಯೇ ನನಗೂ ಸಹ. ಪತ್ರವ್ಯವಹಾರಕ್ಕಂತೂ ಸೊನ್ನೆ.

ಬಸ್ ನಿಲ್ದಾಣಕ್ಕಂತೂ ಬಂದೇ ಬಿಟ್ಟೆ. ಅಬ್ಬಾ! ಜಾಗ ಸಿಗುವ ಬಗೆ!! ಎಷ್ಟು ಜನರಪ್ಪಾ! ಯುದ್ಧದ ಕಾಲದಾಗಿನ ಜನರಿಗಿಂತ್ಲೂ ಸಧ್ಯ ದವರ ಪ್ರಯಾಣವೇ ಜಾಸ್ತೀನೇ? ಯುದ್ಧದ ಕಾಲದಾಗಂತೂ ಗಲಾಟೆ ಇರತಕ್ಕದ್ದು, ಇದ್ರೆ ಸರಿ; ಕಾನೂನಿಗೇನೂ ವಿರುದ್ಧವಲ್ಲ. ಆದ್ರೆ ಈಗ್ಲೂ ಇಷ್ಟು ಇರಬೇಕಂಬೋದು ಬಹಳ ಅನ್ಯಾಯ. ಯುದ್ಧದ ಕಾಲದಾಗೇ ಅನ್ಯಾಯವಲ್ಲಾಂದ್ರೆ – ಜನರು ಯುದ್ಧ ಮಾಡಬೇಕೂಂತ ಸೈನ್ಯಕ್ಕೆ ಸೇರಿಸಿ ಕೊಳ್ಳೋ ಊರುಗಳಿಗೆ ಹೋಗಬೇಕಾಗಿರ್ತದೆ. ಅದರಾಗೆ ಸೇರಾಕ್ಹೋಗೋ

ರಂದ್ರೆ ಊರಾಗೆಲ್ಲಾ ಮಾನಾತೊರ್ತನಿಂತ ಗತಿಗೇಡಿಗಳೂ, ಮಾವಂದಿರ ಸಂಗಡ ಗುದ್ದಾಡಿದ ಅಳಿಯಂದಿರೂ, ಓದು ಸಾಕಾದ ವಿದ್ಯಾರ್ಥಿಗಳೂ, ಲಗ್ನಮಾಡಲಿಲ್ಲಾಂತ ತಂದೆ ಸಂಗಡ ಜಗಳಾಡಿ ಬೆದರಿಸಲು ಹೊರಟ ಮಗ ಭೂಪರೂ ಇನ್ನೂ ಅನೇಕಾನೇಕ ವಿಧದವರೆಲ್ಲಾ ಅಂದ್ರೆ ಯಾವ ಬಸ್ ಎಷ್ಟು ಬಸ್ಸುಗಳು ಹಿಡಿಸ್ಬೇಕು ಇವರ್ನೆಲ್ಲಾ! ಹೋಗುವಾಗಂತೂ ಅಷ್ಟು. ಬರುವಾಗಾದ್ರೂ ಕಾಲಿ ಇರಬೇಕಲ್ಲಾಂದ್ರೆ ಇವರೆಲ್ಲರೂ ಕರೇವಂದ್ರೂ ಸೇರಕ್ಕೋಗ್ಯಾರಂತಲೇ? ಛೇ! ತೊರತ ವಂದೇನೋ ತಿನ್ನಾಕೆ ಸಿಕ್ತಾತಂತೆ ಸೇರ್ರ್ಯಾರು; ಅಳಿಯಂದಿರೂ ಮಗಭೂಪರುಗಳೆಲ್ಲಾ ಹಿಂದಕ್ಕೆ ಬಂದ್ರೆ ಮರ್ಯಾದೆ ಬರೋ ಪ್ರಸಂಗಿದ್ರೆ, ಅವರಿಷ್ಟ ಪಾಲಿಸ್ತೇವಂತಾ ಅವರೋಳ್ಗ್ಯಾರಿ ರಾದ್ರೂ ಬಂದ್ರೆ ಸೈನ್ಯಕ್ಕೆ ಸಲಾಮ್ ಕೊಟ್ಟು ವಾಪಸ್ ಬಂದ್ಬಿಡ್ತಾರೆ. ಕೆಲ ವರು ಹೆದರಿ ಎದೆಹೊಡೆದುಕೊಂಡೂ ಬರೋರಿರ್ತಾರೆ. ಅಂದ್ಮೇಲೆ ಬರೋ ಬಸ್‌ಗಳಾದ್ರೂ ಹ್ಯಾಂಗೆ ಕಾಲಿ ಇರ್ತಾವೇ? ಸರಿ. ಆಗಿನ ಕಾಲದಾಗೆ ಕಾಲಿ ಇರೋಲ್ಲ; ಇರದಿದ್ರೂ ಪರವಿಲ್ಲಾಂತ ಕಾನೂನು ಜಾರಿ ಮಾಡಿ ಬಿಟ್ಟಿರ್ತಿ, ಆಯ್ತು.

ಆದ್ರೆ ಈಗ್ಲೂ ಹಾಗೇ ಅಂದ್ರೆ ಪರಮ ಅನ್ಯಾಯವಲ್ವೇ? ಆಗ್ದಿ ಅನ್ಯಾಯ. ಮತ್ತೆ ಈಗ ಇಷ್ಟು ದುಬಾರಿ ಬಾಡಿಗೆ ಇಟ್ರೂ ಇಷ್ಟು ಬಸ್ ಗಳಿದ್ರೂ ಇಷ್ಟು ಜನರು ಇರೋ ಬಸ್‌ಗಳೆಲ್ಲಾ ಸಾಲದಂಗೆ ಓಡಾಡ್ತಾರಲ್ಲಾ! ಇವರಿಗೆ ಇಷ್ಟು ಕೆಲಸ ಏನಿರ್ತದೆ ಅಂಬೋದು ಪ್ರಶ್ನೆ. ಇಷ್ಟು ಜನರಿಗೆಲ್ಲಾ ಇಷ್ಟಿಷ್ಟು ಕೆಲ್ಸ ಇರೋದಂದ್ರೇ ಸಂತೋಷ. ನಮ್ಮ ದೇಶದಾಗೆ ಇಷ್ಟಾಕಂದು ಉದ್ಯೋಗ ಮಾಡೋ ಜನರಿದ್ದಾರಂದ್ರೆ ಹೆಮ್ಮೆ ಪಡೋ ಮಾತೇ 'ಅಲ್ವೇ? ಆದ್ರೆ ಇಷ್ಟು ಓಡಾಡಿದರೂ ನಮ್ಮ ದೇಶದಾಗಿನ ನಿರುದ್ಯೋಗಿಗಳ ಸಂಖ್ಯೆ, ಭಿಕ್ಷುಕರ ಸಂಖ್ಯೆ ಒಟ್ಟಿನ ಮೇಲೆ ಕಷ್ಟ ಪರಿಸ್ಥಿತಿ ಶೇಕಡಾ ಒಂದರಷ್ಟಾದ್ರೂ ಕಡಿಮೆ ಆಗಿಲ್ಲವಲ್ಲಾ! ಇದೇ ದೊಡ್ಡ ಸಮಸ್ಯೆ. ಇವರೆಲ್ಲಾ ಮಾಡೋ ಉದ್ಯೋಗಾದ್ರೂ ಏನು ಅಂತ? ಬ್ಲಾಕ್ ಮಾರ್ಕೆಟ್, ಕೋರ್ಟು ಇಂಥವೇ ಇನ್ನೊಂದಿಷ್ಟು....ಒಂದಾದ್ರೂ ಉಧ್ಧಾರ ಮಾಡೋ ಉದ್ಯೋಗಲ್ಲ. ಇಂಥ ವರ್ಗೂ ಬಸ್‌ನವರಿಗೂ ಏನೇನೋ ಸಂಬಂಧಗಳಾಗ್ಬಿಟ್ಟಿರ್ತಾವೆ. ಇವರಿಗೆಲ್ಲಾ ಜಾಗ ಕಾಯಂ.

ಇಂಥವರಿಗೆಲ್ಲಾ ಬಸ್‌ಗಳು ಕಾಯಂ ಆಗಿಬಿಟ್ರೆ ನಮ್ಮಂತಹ ಸದು ದ್ಯೋಗಿಗಳ ಗತಿ ಹೇಗೆ? ನಾವು ಬಸ್ ಹೊರಡೋ ವೇಳೆಗಿಂತ ಮೂರುಗಂಟೆ

ಮುಂಚೆ ಹೋದ್ರೂ ಜಾಗ ಇಲ್ಲಾಂತ ಬರೋದೇಗತಿ. ಬಹುಶಃ ಹಾಗಾಗಲ್ಲಾನ್ನಿ. ಅಧಿಕಾರಿಗಳ್ನ ಬ್ರೇಕ್ ಮಾಡಿಕೊಂಡು ಎಲ್ಲಾ ಜನ ಹಾಕ್ತಾರಂತಲೇ ನಮ್ಮಂಥವರ ಬಾಳ್ ಚಂದ. ಇಲ್ಲದಿದ್ರೆ ನಾನೆಲ್ಲಿ ಹೋಗ್ತಿದ್ದೆ ಹೆಂಡ್ತೀ ಮನೆಗೆ....ದಿನವೂ ಬರಿ ಮನಿಗೂ ಬಸ್ ನೀಲ್ದಾಣಕ್ಕೂ ಮತ್ತಿಲ್ಲಿಂದ ಮನೆಗೂ ಓಡಾಡೋದೇ ಆಗ್ತಿತ್ತು. ಅಂತೂ ಒಂದು ಹಳೇ ಅಂಗಿ ಹಾಕ್ಕೊಂಡು ಆ ಜನರ ತಂಡದ ಬಸ್‌ನಲ್ಲಿ ತರುಕಿಕೊಂಡು ಮಡದಿಯೂರಿಗೆ ಹೋಗುವ ಹಾದಿಯಲ್ಲಿಳಿದೆ. ನನ್ನನ್ನೇ ನಾನು ಒಂದು ಸಾರಿ ನೋಡಿಕೊಂಡೆ. ನಾನು ನಾನೇ ಹೌದೋ ಅಲ್ಲೊ ಅಂತಾ. ಬೆವರಿನ ಸಮುದ್ರದಲ್ಲಿ ಅದ್ದಿ ತೆಗೆದಂತಾಗಿದ್ದೆ. ನಾನಿಳಿದ ಹಾದಿಯಿಂದ ಒಂದು ಫರ್ಲಾಂಗ್ ದೂರದಲ್ಲಿ ಒಂದು ಕಟ್ಟೆ ಇದೆ. ಕಟ್ಟೆಯೆಂದರೆ ಮನೆಯ ಮುಂದಿನ ಕೂಡುವ ಕಟ್ಟೆಯಲ್ಲ. ಕೆರೆ, ಕುಂಟೆ, ಕಟ್ಟೆಯೆನ್ನುತ್ತಾರಲ್ಲಾ ಆ ಕಟ್ಟೆ. ಬೇಸಿಗೆಯಲ್ಲಿ ಹೊಲದಲ್ಲಿ ಕೆಲಸ ಮಾಡುವಾಗ ಬಾಯಾರಿದರೆ ಕುಡಿಯಲಿಕ್ಕೆ ನೀರು ಇರ್ಲಿ ಅಂತ ಇಂತಾವ್ನ ಮಾಡಿಕೊಂಡಿರ್ತಾರೆ. ಬಸ್ಸಿನಾಗೆ ಬರುವಾಗ ಹಾಕ್ಕೊಂಡು ಬಂದ ಹಳೇ ಬಟ್ಟೆಗಳನ್ನೆಲ್ಲಾ ಬಿಚ್ಚಿ ಅಲ್ಲೇ ಇದ್ದ ಬನ್ನಿಮರದ ಮೇಲೆಸೆದು,' ಕಟ್ಟೆಯಲ್ಲಿ ಕೈಕಾಲು ಮುಖ ತೊಳೆದುಕೊಂಡು, ಟೌಲಿನಿಂವ ಮೈಯನ್ನೆಲ್ಲಾ ಚನ್ನಾಗಿ ಒರೆಸಿಕೊಂಡು. ಚೆನ್ನಾಗಿ ಇಸ್ತ್ರಿ ಮಾಡಿಸಿದ್ದ ಬಟ್ಟೆಗೆಳ್ನ ಹಾಕ್ಕೊಂಡು ನಡದೇ ಹೊರಟೆ. ಊರೇನೋ ರಹದಾರಿಗೆ ಬಹಳ ದೂರವಿಲ್ಲ – ಆರು ಮುಕ್ಕಾಲೇ ಫರ್ಲಾಂಗ್ – ನಮ್ಮೂರಲ್ಲಿದ್ದಾಗ ದಿನಾಲೂ ತಿರುಗಾಟಕ್ಕೆ' ಹೋಗೋ ಅಷ್ಟು ದೂರ ಹೋದ್ರೆ ಸಾಕು. ಊರು ಬಂದೇ ಬಿಡ್ತದೆ. ರಹದಾರಿಗೆ ಹತ್ತಿಕೊಂಡಿರುವ ಹೊಲಗಳೆಲ್ಲಾ ಆ ಹಳ್ಳಿಯವೇ.

ಹೊಲಗಳಲ್ಲಿ ಜೋಳದ ಪೈರು ಆಳಿಸ ಮಟ್ಟಕ್ಕೆ ಮಾರಿ ನಿಂತಿತ್ತು ನೋಡುತ್ತಾ ನಡೆಯಲು ಬಹು ಆನಂದ. ಹಳ್ಳಿಯ ನಿಸರ್ಗ ಸೌಂದರ್ಯವನ್ನು ಕಣ್ಣಿನಿಂದ ಸವಿಯುತ್ತಾ ಆನಂದಪಡುತ್ತಾ ಸಾವಧಾನವಾಗಿ ಹೆಜ್ಜೆ ಎಣಿಸುವವನಂತೆ ಹೊರಟೆ. ಹೋಗುತ್ತಲೇ ಬಲಗಡೆಯ ಹೊಲದ ಕಡೆ ನೋಡಿದೆ. ಈ ಹೊಲದಲ್ಲಿ ದಾರಿಗೆ ಸಮೀಪದಲ್ಲಿಯೇ ದೊಡ್ಡ ಮರವಿದ್ದುದರಿಂದ ಅದರ ಕೆಳಗಡೆಗೇ ಹಾಕಿದ್ದ ಮಂಚಿಗೆಯು ಚೆನ್ನಾಗಿ ಕಾಣುತ್ತಿತ್ತು. ಇನ್ನುಳಿದ ಹೊಲಗಳವು ಅಲ್ಲಿಗೆ ದೂರವಾಗುವುದಾದ್ದರಿಂದ ಸರಿಯಾಗಿ ಕಾಣುತ್ತಿರಲಿಲ್ಲ. ಅಂತೂ ಆ ಹೊಲವು ಬಹು ದೊಡ್ಡದಾದ್ದರಿಂದಲೂ ಆ ಮರದ

ಕೆಳಗೇ ಮಂಚಿಗೆಗೆ ಅನುಕೂಲವಿದ್ದುದರಿಂದಲೂ ಆ ಮಂಚಿಗೆಯ ಸಮೀಪ ದಲ್ಲಿ ಯಾವ ಮಂಚಿಗೆಯೂ ಇರಲಿಲ್ಲ.

ಆ ಮಂಚಿಗೆಯ ಮೇಲೆ ಒಬ್ಬ ರೈತರ ಹುಡಿಗಿಯು ಜೋಳದ ಬೆಳಸಿ ಗಳನ್ನು ಕಾಯಲು ಕವಣೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ನಿಂತದ್ದೂ ಕಾಣುತ್ತಿತ್ತು. ಓಹೋ ಗುಬ್ಬಿಗಳನ್ನು ಹಾರಿಸುತ್ತಾಳೆ. ನೋಡಿ. ಆ ಗುಬ್ಬಿಗಳ ಹಿಂಡಿನಲ್ಲಿರುವ ಗುಬ್ಬಿಗಳೆಲ್ಲಾ ಕಲ್ಲು 'ಬೆರ್' ಎಂದು ಬಂದೊಡನೆ 'ಪುರ್' ಎಂದು ಹಾರಿ ಹೋಗುತ್ತವೆ; ಮತ್ತೂ ಬಂದು ಕೂಡುತ್ತವೆ. ಅವಳಿಗೆ ಕೈ ನೋಯುವುದಿಲ್ಲವೇ! ಹೊಲದಲ್ಲೆಲ್ಲೂ ಗುಬ್ಬಿಗಳನ್ನು ಕೂಡಿ ಸುವುದೇ ಇಲ್ಲ. ಸುತ್ತಲೂ ನೋಡುತ್ತಲೇ ಇರುತ್ತಾಳೆ; ಕಲ್ಲು ಬೀಸುತ್ತಲೇ ಇರುತ್ತಾಳೆ. ಆಯ್ಯೋ! ಒಂದು ಕಲ್ಲು ನನ್ನ ತಲೆಯ ಮೇಲಿಂದ ತೀರಾ ಹತ್ತಿರದಲ್ಲಿ ಹೋಗಿ ಅತ್ತಕಡೆಗೆ ಬಿತ್ತು. ನನ್ನ ಮೈನಡುಗಿತು. ಆದರೆ ಅದನ್ನು ಬೀಸಿದವರಾರೆಂದು ನನಗೆ ಗೊತ್ತಾಗಿತ್ತಾದ್ದರಿಂದ, ಆ ಹುಡುಗಿ ಯನ್ನು ಸ್ವಲ್ಪ ಚೇಷ್ಟೆ ಮಾಡಿಬರಬೇಕೆಂಬ ತುಂಟು ಬುದ್ಧಿ ಮೂಡಿತು. ಹೊಲವನ್ನು ನುಗ್ಗಿದೆ. ಅವಳು ನನ್ನನ್ನು ನೋಡಿಯೂ ಬೇಕು ಬೇಕೆಂದೇ ಕವಣೆ ಬೀಸಿದ್ದಿರಬಹುದೆಂದು ಎನಿಸಿತು. ಏಕೆಂದರೆ ಕನ್ನಡಿಗರು ಅದರಲ್ಲೂ ಹಳ್ಳಿಯ ರೈತರ ಸ್ವಾಭಾವಿಕವಾಗಿಯೇ ಹಾಸ್ಯಪ್ರಿಯರು. ಯಾವಾಗಲೂ ಹಾಸ್ಯವನ್ನು ಸೂರೆ ಮಾಡುತ್ತಲೇ ಇರುತ್ತಾರೆ. ಇಲ್ಲದಿದ್ದರೆ ಅವರಿಗೆ ಸಮಾ ಧಾನವೇ ಆಗಲ್ಲ. ಆದ್ದರಿಂದಲೇ ನಾನು ಹಾಗೆ ಊಹಿಸಿ ತಮಾಷೆ ಮಾಡಿ ಬರಲು ಹೊರಟೆ.

ನಾನು ಹೋಗಹೋಗುತ್ತಲೇ, "ಕೈನೀಟದಾವೆ ಅಂತ ಸಿಕ್ಕ ಸಿಕ್ಕವರ ಮೇಲೆ ಕಲ್ಲು ಬೀಸಿದರೆ ಹೇಗೆ? ಗುರಿ ಏನಾದ್ರೂ ತಪ್ಪಿದ್ರೆ ಗತಿ?" ಎಂದೆ. ಅವಳು ತುಂಟ ನಗೆ ನಗುತ್ತಾ, "ಗುರಿ ತಪ್ಲಿ ಅಂತಾನೇ ಹಾಗೆ ಬೀಸಿದ್ದು. ಇಲ್ದಿದ್ರೆ ತಲೆ ಒಡೆದು ಹೋಗ್ತಿತ್ತು. ಇವತ್ತು ನಿನ್ನ ಪುಣ್ಯ ಚೆಲೋದೈತೆ, ಉಳಕೊಂಡೀ ಇಲ್ದಿದ್ರೇ ತಲೆಬಡಕೊಂಡು ನಿಜವಾಗ್ಲೂ ಏನುಗತಿ ಆಗ್ತಿದ್ದ್ಯೋ ಏನೋ." ಎಂದಳು.

ನನಗೆ ಕೋಪಾಶ್ಚರ್ಯವಮಾನಗಳೆಲ್ಲಾ ಉಂಟಾದುವು. ಎಷ್ಟು ಸರಳ ವಾಗಿ ನನ್ನನ್ನೇ ಹೊಡೆಯಬೇಕೆಂದು ಹೊಡೆದೆನೆನ್ನುವಳಲ್ಲಾ ಎಂದುಕೊಂಡು, "ಏನು ಚೇಷ್ಟೆ ಮಾಡ್ತಿಯಾ ಹುಡುಗಿ? ನನ್ನ ಯಾಕೆ ಹೊಡೀತಿದ್ದೆ?"

ಎಂದೆ. ಅವಳು, "ಯಾಕೋ ಸಾಬಾ? ಬಾಯಿ ಹಗುರಾಯ್ತಲ್ಲಾ, ಒದಿ ಯೇನರ ಬೇಕಾಗ್ಯಾವೇನು? ದನಾ ಇದ್ದಂಗದೀ ಬುದ್ಧಿಲ್ಲೇನು? 'ಹುಡುಗಿ' ಅಂತೀಯಾ....ಅವ್ವ ತವ್ವ ಅಂತ ಮಾತಾಡಾಕೆ ಬರೋದಿಲ್ಲೇನು ನಿನಿಗೆ.... ಮೊಗಲಾಯಿ ದರ್ಬಾರ ನಡಸೋಕೆ ಬರ್ತೀಯಾ? ನಿನ್ನ ದಾರ್‍ಯಾಗೆ ಸೋಡ್ದೆ – ದನಾ ಹೋದಂಗೆ ಹೋಗ್ತಿದ್ದೆ ನೀನು. ನಾನು ದನಾನೆ ಅಂತ ತಿಳ ಕೊಂಡು ನಮ್ಮ ಹೊಲಾ ನುಗ್ಗೀತಂತ ಕವಣಿ ಬೀಸುವಾಗ್ಲೇ ನೀನು ಇತ್ತಾದೆ ಸೋಡ್ದೆ – ನನಗೆ ಇವ್ನು ಮನಸ್ಯಾ ಅದಾನಂತ ಗೊತ್ತಾದಕೂಡ್ಲೇ ಬೀಸಿದ ಕವಣೀನೇ ನಿಲ್ಲಸಿಕ್ಯಾಗ್ದೆ ಸ್ವಲ್ಪ ಜೋಲಿ ತಪ್ಪಿಸಿಬಿಟ್ಟೆ. ಅದಕ್ಕೇ ನಿನಿಗೆ ಬೀಳೋ ಪೆಟ್ಟು ತಪ್ಪಿತೂ ಅಂದ್ರೇ ನನ್ನ ಮ್ಯಾಲೇ ಸಿಟ್ಟುಮಾಡಿ ಬಾಯಿಗೆ ಬಂದಾಂಗೆ ಅಂತೀಯಾ? ಸುಮ್ನೆ ನಮ್ಮ ಹೊಲಾ ಬಿಟ್ಟು ಹೊರಡ್ತೀಯೋ ಇಲ್ಲೋ? ಇಲ್ದಿದ್ರೆ ನೋಡೂ ಮಗ್ಗಲಿನ ಹೊಲದ ಜಾಲಣ್ಣನ್ನ ಕರದ್ರೆ ನಿನ್ನ ಗತಿ ಮುಗಿಸೇಬಿಡ್ತಾನೆ." ಹೀಗೆಂದದ್ದನ್ನು ಕೇಳಿ ನಮ್ಮ ಕನ್ನಡದ ವೀರ ಮಹಿಳೆಯರು ಸಧ್ಯ ಹಳ್ಳಿಗಳಲ್ಲಾದರೂ ಇದ್ದಾರಲ್ಲಾಂತ ಸಂತೋಷಪಟ್ಟೆ. ಅವಳು ನನ್ನನು ಸಾಬಿ ಅಂತ ತಿಳಿಕೊಂಡಿದ್ರಿಂದ್ಲೇ, ವಿಜಾತೀಯನ ಸಂಗಡ 'ಹುಡುಗಿ' ಅನ್ನಿಸಿಕೊಂಡದ್ದು ಅಪಮಾನವೆಂದು ಭಾವಿಸಿ ಅಷ್ಟಾಕಂದು ಸಿಟ್ಮಾಡಿದ್ದು. ಇಲ್ದಿದ್ರೇ ತಮಾಷೆಯಾಗಿಯೇ ಮಾತನಾಡಿ ಕಳಿಸ್ತಿದ್ಳು. ಜೆಳಸೀನಾ ಕೇಳಿದ್ರೆ ತಿನ್ನಲಿಕ್ಕೆ ಕೊಡ್ತಿದ್ಳು; ನೀರು ಕೊಡತಿದ್ಳು. ಕುಡೀಲಿಕ್ಕೆ ಆದ್ರೆ ಸಾಬನ ಸಂಗಡ ಸಲಿಗೆಯೇನೂ ಅಂತ ಅಷ್ಟು ಕೋಪದಿಂದ ಮಾತಾಡಿದಳು ಪಾಪ. ಅದರಲ್ಲೂ ಪೆಚ್ಚಾಗೋ ಹಾಗೆ ಸಾಬನ್ನ ದನಕ್ಕೇ ಹೋಲಿಸಿಬಿಟ್ಳು. ಅಲ್ಲಾ, ಎಷ್ಟು ಜಾಣತನದಿಂದ ಆಡಿದಳು ಆ ಮಾತನ್ನು – ಸಾಬನ್ನ ದನಾಮಾಡಿ!

ಆದರೆ ಅವಳು ನನಗೆ 'ಸಾಬ' ಅಂತ ಏಕೆ ಅಂದಳೋ ತಿಳೀಲಿಲ್ಲ. ಯೋಚಿಸ್ದಿ ಬಗೆ ಹರೀಲಿಲ್ಲ. ಬಹಳ ಹೊತ್ತು ನನ್ನನ್ನೇ ನಾನೊಮ್ಮೆ ನೋಡಿ ಕೊಂಡೆ. ತಿಳಿಯಿತು, ಪೂರಾ ತಿಳಿಯಿತು; ನಾನು ಧರಿಸಿದ್ದು ಪೈಜಾಮ ವನ್ನು – ಅದಕ್ಕೇ ಆ ಹಳ್ಳೀ ಹುಡುಗಿ ಹಾಗೆ ಅಂದದ್ದು. ಅವಳ ಸಂಶಯ ಪರಿಹಾರ ಮಾಡಿ ನೋಡಬೇಕು ಆಮೇಲೇನು ಮಾಡ್ತಾಳೆನ್ನಿಸಿತು. ತಮಾಷೆ ಗಾಗಿಯೇ ನುಡಿದೆ ಅವಳನ್ನು ಇನ್ನಿಷ್ಟು ರೇಗಿಸಲು, "ನಾನು ಸಾಬಲ್ಲೇ! ಏ ಹುಡುಗೀ ನಾನೂ ನಿಮ್ಮ ಜಾತಿಯವನೇ....ಲಿಂಗಾಯ್ತರೋನೆ! ಇಕಾ

ನೋಡೂ. ನನ್ನ ಕಿವಿಯಲ್ಲಿ ತೂತಿವೆ, ಲಿಂಗದ ಚೌಕವಿದೆ ಕೊರಳಲ್ಲಿ." ಎಂದೆ ಮತ್ತು ಸ್ವಲ್ಪ ಹತ್ತಿರ ಹೋಗಿ ತೋರಿಸಿದೆ ಕೂಡಾ. ಅದೃಷ್ಟಕ್ಕೆ ಸರಿಯಾಗಿ ಅಂದು ನಾನು ಮಾವನ ಮನೆಗೆ ಹೊರಟ ಸುಳಿವು ಹತ್ತಿದ್ದರಿಂದ ನಮ್ಮಪ್ಪ ನೆನಪುಮಾಡಿ ಮೊದಲು ಚೌಕಾಹಾಕಿಸಿದ್ದರು, ಅದೂ ಒಳ್ಳೆಯದೇ ಆಯಿತು. ನನ್ನ ತಾಯಿಗೆ ನಿಂತಲ್ಲಿಂದಲೇ ಕೋಟಿ ಕೋಟಿ ವಂದನೆಗಳನ್ನು ಸಲ್ಲಿಸಿದೆ. ಅದಕ್ಕೇ ಮನೆಯೋರು "ಎಲ್ಲಿಗೋದ್ರೂ ಚೌಕಾ ಬಿಟ್ಟು ಹೋಗಬೇಡಾ" ಅನ್ನೋದು. ನನ್ನ ಕಿವಿತೂತುಗಳೋ ಯಾವ ಆಭರಣಗಳನ್ನೂ ಎಂದೂ ಕಾಣದೆ ಹುಗಿದುಕೊಳ್ಳಲು ಬಂದಿದ್ದವಾಗಲೇ. ಆದರೆ ನನ್ನ ಲಗ್ನದಲ್ಲಿ, ಹರಳಿನ ಕಡಪುಗಳನ್ನಿಡಲು ನಮ್ಮ ಮನೆಯ ತ್ರಿಜೋರಿಯಲ್ಲಿ ಜಾಗವಿರಲಿಲ್ಲ ವಂತೆ; ಅದಕ್ಕಾಗಿಯೇ ನನ್ನ ಕಿವಿತೂತುಗಳನ್ನು ದೊಡ್ಡವು ಮಾಡಿ ಅವುಗಳನ್ನಿಟ್ಟಿದ್ದರು. ಆ ಹುಡುಗಿಯು ಎಲ್ಲಾ ಮಂಚಿಗೆಯು ಮೇಲಿಂದಲೇ ನೋಡಿ ನಕ್ಕು, "ಅಯ್ಯೋ ಮರಾಯ! ಲಿಂಗಾಯ್ತರವನಾಗಿ ಸಾಬ್ರಂಗೆ ಯಾಸಾ ಹಾಕ್ಕೊಂಬಂದೀಯಲ್ಲಾ...." ಎಂದು ಮತ್ತೆ ಬೊಕ್ಕೆಂದು ನಕ್ಕು ಬಿಟ್ಟಳು. ನಾನು 'ಏ ಹುಡುಗಿ' ಎಂದದ್ದನ್ನು ಈ ಸಾರೆ ಗಮನಿಸಲೇ ಇಲ್ಲ.

ನಾನು ಮತ್ತೆ ಕೆಣಕಿದೆ–"ಏ ಹುಡುಗೀ, ಕೆಳಗೆ ಬಂದು ಒಂದೀಸು ಕುಡಿಯಾಕೆ ನೀರಿದ್ರೆ ಕೊಡಬಾರ್ದೆ" ಎಂದು. ಅವಳು, "ಏ, ಯಜಮಾನಾ, ಹಂಗೆಲ್ಲಾ 'ಏ, ಹುಡುಗೀ' ಅನ್ನಬೇಡನೋಡು. ಅಲ್ಲೇ ಗುಂಡಿ ಇತ್ತಲ್ಲಾ ಕುಡಿದು ಬರಾಕು? ಇನ್ನೊಂದ್ಸಲಾ ಹಂಗೆಲ್ಲಾ 'ಹುಡುಗೀ' ಅಂದ್ರೆ ಅಲ್ಗೇ ಹೋಗಬೇಕಾದೀತು ನೋಡು. ನಾನು ಬೇಕಂತ್ಲೇ ನಿನ್ನ ಮೇಲೆ ಕಲ್ಲು ಬೀಸಿದ್ದೇ ತಪ್ಪು ನೋಡು. ಬೇಸರಾಗಿತ್ತು....ಸುಮ್ನೇ ಹಾಸ್ಯಕ್ಕಂತ ಬೀಸಿದ್ರೇ ನೀನು ಹೊಲಾದ್ದಕೇ ನುಗ್ಗಿ ಬಂದ್ಬಿಟ್ಟೆಲ್ಲಾ!" ಎಂದಂದು ನಗುತ್ತಾ ಬೆದರಿಸುತ್ತಾ ಮಂಚಿಗೆಯಿಂದಿಳಿದು ನೀರು ಕೊಡಲು ನೀರಿನ ತತ್ರಾಣಿಯಂ ಪುಡುಕಾಡಿದಳು. ನಾನು ಬೆಪ್ಪಾಗಿ, "ಆ್ಞ! ಬೇಕೆಂದೇ ಬೀಸ್ದೇನು? ಹಂಗಾದ್ರೆ ದನಾಮಾಡಿ ಬೀಸಿದೆ ಅಂದೆಲ್ಲಾಗ?" ಎಂದದಕ್ಕವಳು, "ನಿನ್ನ ಸಾಬನ್ನ ಮಾಡಿ ಗೇಲಿ ಮಾಡಿ ಕಳಿಸೋಕೆ ಹಂಗಂದೆ. ನೀನು ಸಾಬೇ ಆಗಿದ್ರೆ ಇಷ್ಟೊತ್ತಿಗೆ ನಿನ್ನಾ ನಿಮ್ಮ ಸೀಮೆಗೆ ಓಡಿಸಿಬಿಡ್ತಿದ್ದೆ. ನಮ್ಮ ಮಗ್ಗುಲ ಹೊಲದ ಜಾಲಣ್ಣನ್ನ ಕರದು" ಎಂದ್ಲು. ನಾನು ನಗುತ್ತಾ, "ಸರಿಬಿಡು, ಅದಾಯ್ತಲ್ಲಾ? ಅಲ್ಲಾ, ನಾನೇನೋ ನೀನು ಹೇಳಿದಾಂಗೆ ಆ ಗುಂಡಿ ನೀರ್ನ ಕುಡಿದೇ ಬಂದಿದ್ದೆ. ಆದರೆ ಇಷ್ಟು ದೂರ ಬರೋತಡ, ನಿನ್ನ ನೋಡೋ

ತಡ ಮತ್ತೆ ಬಾಯಾರಿ ಬಿಡ್ತು ನೋಡು. ಏನು ನೀರೋ ಏನೋ ಅವು? ಅಲ್ಲಾ, ನನಿಗೆ 'ಯಜಮಾನಾ' ಅಂದೆಲ್ಲಾ ನಾನು ನಿನಿಗೆ ಅಷ್ಟು ದೊಡ್ಡೋನಾಗಿ ಕಾಣ್ತೀನೇನು ಹೇಳು ಹಂಗಾರ?" ಎಂದೆ. ಅವ್ಳು, "ನೀನೇನು ಸಣ್ಣಾನೇ? ನನಗಿಂತ ಐದಾರ್ ವರ್ಷಕ್ಕಾದ್ರೂ ದೊಡ್ಡಾತ್ನೀ ಆದಿ ಅಂತ ಹಂಗಂದೆ. ಅಲ್ಲಾ ಇವು ಕೂಡ ಅದೇ ಗುಂಡಿ ನೀರೇ. ಇವತ್ತು ಊರಾಗಿಂದ ತಂದ ನೀರೆಲ್ಲಾ ಆಗಿಹೊದ್ವು, ಊರಾಗ್ಹೋಗಿ ಕುಡಿವಂತೇಳು." ನಾನು, "ಏಯ್ ಇಲ್ಲ....ನೀನು ಹಂಚಿದ ನೀರ್ನ ನಾನು ಕುಡಿದ್ರೇ ಸಾಯೋತನಕ ನೀರಡಿಕೇನೇ ಆಗಾಕಿಲ್ಲ....ಅದಕ್ಕೇ ಹಂಚಬಾರದೇ ಒಂದೀಸು.... ಕಲ್ಲು ಬಿದ್ದು ಸಾಯ್ದೇ ಇದ್ರೂ ನೀರಡಿಸಿ ಸತ್ತೇನು!" ಎಂದೆ. ಅವಳು, "ಅಯ್ಯಯ್ಯಾ! ನೀನೂ ಭಾಳಾ ತಮಾಷಾನದಿಯೇಳ....ಯಾವೂರು ನಿಂದು? ಇಲ್ಲಿಗ್ಯಾಕ್ಬಂದಿ ಹೇಳ್ಯಾರ ಹೇಳಷ್ಟು ಕೇಳ್ಯಾರ ಕೇಳ್ತೀನಿ" ಎಂದ್ಲು. ನೀರು ಹಂಚಿದಳು. ನಾನು ಕುಡಿದೇಬಿಟ್ಟೆ ಬೊಗಸೆಯೊಡ್ಡಿ ಕುಳಿತು ಅವಳ ಬೊಗಸೆಗಂಗಳ ಮುಖಮಂಡಲವನ್ನು ಕಣ್ಣೀರಿಸಿ ನೋಡುತ್ತಾ.

"ಹೇಳಿದ್ರೆ ಕೇಳ್ದೇನು ಮಾಡಿ? ಮೊದಲು ನೀನು ಯಾರು ಹೇಳು ಆಮ್ಯಾಲೆ ನಾನು ಹೇಳ್ತೇನೆ. ಉಹ್ಞಾ, ಹೇಳೇ ಹುಡ್ಗಿ ನೀನ್ಯಾರ ಮಗಳು?" ಎಂದುದಕ್ಕೆ ಅವಳು, "ನನ್ನ ಸುದ್ದಿ ನಿನಿಗ್ಯಾಕೆ ಬೇಕು? ಇಕಾ ನೀನು ಹಂಗೆಲ್ಲಾ ನಿನ್ನ ಹೆಂಡ್ತಿ ಕೂಟ ಮಾತಾಡಿದಂಗೆ ಮಾತಾಡ್ಬ್ಯಾಡ ನೋಡು! ನನಿಗಾಗ್ಲೇ ಲಗ್ನ ಆಗಿಬಿಟ್ಟೇತೆ; ಇವತ್ನಾಳಿನ್ಯಾಗೆ ನಾನು ನನ್ನ ಗಂಡನ ಮನಿಗೆ ಹೋಗಾಳಿದೀನಿ. ಮೈಮ್ಯಾಗ ಎಚ್ಚರ ಇಟ್ಟುಕೊಂಡು ಮಾತಾಡು, ಇಲ್ದಿದ್ರೇ ನಿನ್ನ ಮೈಯಾಗ್ಳ ಎಲುಬ್ಗುಳೂ ನುಗ್ಗಾದಾವು!" ಎಂದು ನಾನು ಒಮ್ಮೆಲೇ "ಲಗ್ನಾಗ್ಯಾತೇನಲೇ ನಿಂದು! ಹಂಗಾದ್ರೆ ಬಹುವಚನದಿಂದ್ಲೇ ಮಾತಾಡ್ತೇನೆ. ಏನ್ರೀ....ಆತೋ? ನಿಮ್ಮ ಗಂಡಂದಿರ ಹೆಸರನ್ನು ಸ್ವಲ್ಪ' ಹೇಳುತ್ತೀರಾ?....ಕೇಳೋ ಇಷ್ಟ ಬಹಳ ಉಂಟಾಗಿದೆ." ಎಂದೆ. ಅವಳು, "ಹೋಗೋ ಮಾರಾಯ! ನೀನೆಲ್ಲಿಂದ ಕಲೆಬಿದ್ದೆ ನನಗೆ! ಅಲ್ಲಾ ನಿನಗೇನಾದ್ರೂ ತಿಕ್ಕೊ ಮುಕ್ಕೊ? ನೀನೂ ಎಂಗಾರ ಯಾಕೆ ಮಾತಾಡ್ಸು.... ಆದ್ರೆ ಒಬ್ಬೊಬ್ಬರಿಗೆ ಗಂಡ್ರು ಎಷ್ಟು ಮಂದಿರತಾರಂತ ತಿಳಿಕೊಂಡಿ? ನೀವು ಇಂಗ್ಲೀಷ್ ಓದಿಕೊಂಡೀರಂತ ಬಾಯಿಗೆ ಬಂದಾಂಗೆ ಮಾತಾಡಿದ್ರೆ ಸುಮ್ನೆ ಇರ್ತಾರಂತ ತಿಳಕೊಂಡಿಯೇನು? ಗಂಡರ ಹೆಸರನ್ನು ಹೇಳಾಕಂತೆ!

ಇಲ್ನೋಡು ನಮ್ಮ ಕಡೆಗೆ ಒಬ್ಬೊಬ್ಬ ಹೆಂಗ್ಸಿಗೆ ಒಬ್ಬೊಬ್ನೇ ಗಂಡ ತಿಳೀತೋ?" ಎಂದು ಸ್ವಲ್ಪ ಸಿಟ್ಟು ಬೆರೆತ ಬೇಸರದ ಧ್ವನಿಯಲ್ಲಿ ನುಡಿದಳು.

ನಾನು ಆಡಿದ ಮಾತುಗಳು ನನಗೆ ಗೊತ್ತಾದವು. ನಾನು 'ನಿನ್ನ ಗಂಡನ ಹೆಸರು ಹೇಳೂ' ಅಂದ್ರೆ ಆಗಿಹೋಗಿತ್ತು. ಆದ್ರೆ ಬಹುವಚನದ ಗೋಜಿಗೆ ಹೋದದ್ದರಿಂದ ಅವಳಿಗೆ ವಿಪರೀತರ್ಥವಾಗಿಬಿಟ್ಟು ಸಿಟ್ಟು ಬಂದಿತ್ತು. ಪಾಪ ಆ ಹಳ್ಳಿಯ ಹುಡುಗಿಗೆ ನನ್ನ ವ್ಯಾಕರಣ ಪಾಂಡಿತ್ಯ ಹೇಗೆ ಗೊತ್ತಾಗಬೇಕು? ನಾನು ಎಲ್ಲಾ ಮುಚ್ಚಿಹಾಕಲು ಆಗ, "ಹೋಗ್ಲಿ ಬಿಡಿ ಮಿಸೆಸ್.... ಹೇಳ್ರಿ ನಿಮ್ಮ ಗಂಡನ ಹೆಸರು" ಎಂದೆ. ಅದಕ್ಕೂ ಅವಳೆಂದಳು: "ಏ ಪ್ಯಾಟೆ ಮನಸ್ಯಾ. ಹಳ್ಳಿ ಹುಡುಗೇರೂ ಅಂದ್ರೆ ಏನಂತಾ ತಿಳಿಕೊಂಡಿದೀರೋ ಏನೋ. ನೀವು ಹಂಗೆಲ್ಲಾ ಮಿಸ್‌ಪಸ್ ಅಂದ್ರೆ ನಮಿಗೇನೂ ತಿಳಿಯೋಲ್ಲಾ – ಬೇಸಿ ಮಾತಾಡೋಂಗಿದ್ರೆ ಮಾತಾಡು ಇಲ್ದಿದ್ರೆ ಹೊಲಾ ಬಿಟ್ಟು ನಡೀ ಹೊರಗೆ." ನನಗೆ ರೋಸಿ ಹೋಗಿ, "ಮಹಾರಾಯತೀ ನಿನ್ನ ಗಂಡನ ಹೆಸರನ್ನು ಹೇಳುವಿಯಾ? ನಾನು ಕೇಳುತ್ತೇನೆ" ಎಂದೆ. ಆಗ ಅವಳೆನ್ನುತ್ತಾಳೆ "ಹೆಂಗಸು ಕೇಳ್ದಾಂಗೆ ಗಂಡ್ನ ಹೆಸರು ಕೇಳಾಕೆ ನಿನಿಗೆ ನಾಚಿಕಾಗೋದಿಲ್ವೇನು?" ಇದೇ ನನ್ನ ಪ್ರಶ್ನೆಗೆ ಕೊಟ್ಟ ನೇರವಾದ ಉತ್ತರ. ನಸುಗೋಪದಿಂದ ನಾನೆಂದೆ "ನಿನಿಗೇ ಈಗ ನೆನಪು ಬಂತೇ. ನಾನು ನಿನ್ನ ಗಂಡನ ಹೆಸರು ಕೇಳಿದ್ದು! ಮೊದಲೇ ಇಷ್ಟು ಹೇಳಬಾರದಾಗಿತ್ತೇ? ಹಂಗನ್ಬ್ಯಾಡ ಹಿಂಗನ್ಬ್ಯಾಡ ಅದೂ ಇದೂ ಅಂತ ಸಿಟ್ಟುಮಾಡಿ ಇಷ್ಟೊತ್ತು ಗಿಂಜು ಮಾಡಿಬಿಟ್ಟೆ ಸುಮ್ನೆ. ಇಷ್ಟೊತ್ತಿಗೆ ನನ್ನ ಹೆಂಡ್ತಿ ಮನೆ ಸೇರ್ತಿದ್ದೆ ನೋಡು." ಎಂದವನೇ ಹೊರಡಲನುವಾದೆ. ಆಗವಳು ಸ್ವಲ್ಪ ಗಾಬರಿಯಿಂದಲೇ ಕೇಳಿದಳು. "ಅ್ಞಾ! ನಿನಗೆ ನಮ್ಮೂರಗೇ ಲಗ್ನಾಗೈತ್ಯಾ? ನಿಂದ್ಯಾವೂರು, ಯಾರ್ಮನ್ಯಾಗಾಗೇತಿ, ನಿನ್ನ ಹೆಂಡ್ತಿ ಹೆಸರೇನು" ಅವಳ ಪ್ರಶ್ನೆಗಳ ಸುರಿಮಳೆಗೆ ಮರುಳಾಗಿ, "ಅವಳ ಹೆಸರು ಬೇಬಿ....ನೀನು ಹೇಳು ಹಾಗಾದ್ರೆ ನಿನ್ನ ಗಂಡನ ಹೆಸರ." ಎಂದೆ. ಒಮ್ಮೆಲೇ ಅವಳು, "ಹ್ಞಾ!!! ನೀವೇ!!! ನೀವೇ ಅವರು?! ತೆತ್ತೂರವರು....ಓದಾಕೆ ಹೋಮೋರು?! ಬಂದೇ ಬಿಟ್ಟರು...." ಎನ್ನುತ್ತಾ ಓಡಿಹೋಗಿ ಮರದ ಬುಡದಾಚೆ ಅವಿತುಕೊಂಡು ನಿಂತಳು. ನನಗೆ ದಿಗ್ಭ್ರಮೆ. ನಾನೂ ಅವಳಂತೆಯೇ, "ಹ್ಞಾ! ಹ್ಞಾ!! ಯಾರು?! ನಾನಾರೆಂದು ನಿನಗೆ ಹೇಗೆ ಗೊತ್ತು! ನೀನಾರು, ನಿನ್ನ ಹೆಸರೇನು?! ಎಂದು ಕೇಳಿದೆ. ಅವಳು ಅಲ್ಲಿಂದಲೇ, "ನಾನೇ ಶೃಂಗಪ್ಪನ

ಮಗಳು ಜೀವಕ್ಕ....ನೀವೇ...." ನಾನು; "ಹೌದು ಹೌದು ನಾನೇ." ಎನ್ನುತ್ತಾ ಮುಂದುವರಿದೆ. ಅವಳು ಅಲ್ಲಿಂದ ಮತ್ತೆ ಜೋಳದ ಬೆಳಿಗೆ ನುಗ್ಗಿದಳು. ನಾನೂ ಹಿಂಬಾಲಿಸಿ ಹೋಗಿ ಅವಳನ್ನು ರಟ್ಟೆ ಹಿಡಿದು ತರುಬಿ, ಮೆತ್ತಗೆ ಭುಜದ ಮೇಲೆ ಕೈಯಿಟ್ಟೆ. ಅವಳು ಮಾತನಾಡಲಿಲ್ಲ; ಕದಲಲಿಲ್ಲ ಕೂಡಾ. ಅವಳಿಗೆ ಹೇಗಾಗಿತ್ತೋ ಏನೋ ಪಾಪ!....ನನಗೇ ಹೇಗೇಗೋ ಆಗಿತ್ತೆಂದ ಮೇಲೆ ಅವಳಿಗೇಕೆ ಜೇಡ? ಅವಳನ್ನು ಮತ್ತೆ ತೋಳುಹಿಡಿದು ಎಳೆದುಕೊಂಡು ಬಂದು, ಮಂಚಿಗೆಯ ಮೇಲಿದ್ದ ಚಾಪಿಯನ್ನೆಳೆದು, ಅದರಡಿಗೆ ಹಾಸಿ. ಅವಳನ್ನು ಒತ್ತಾಯದಿಂದ ಎಳೆದು ಕೂಡಿಸಿ. ಅವಳ ಪಕ್ಕದಲ್ಲೇ ನಾನೂ ಕುಳಿತೆ. ಹಾಗೇ ಅವಳನ್ನು ಸೂಕ್ಷ್ಮವಾಗಿ ನೋಡತೊಡಗಿದೆ. ಅವಳು ತಗ್ಗಿಸಿದ ತಲೆಯನ್ನು ಎತ್ತಲೇ ಇಲ್ಲ. ನಾನೂ ಹಾಗೇ ಬಿಟ್ಟೇನಿಯೇ? ಅವಳೀಗ, ನನ್ನ ವರ್ತನೆಗೆ ತನ್ನ ಒಪ್ಪಿಗೆಯಿಲ್ಲದಿದ್ದರೂ ನಿರ್ವಾಹವಿಲ್ಲದೇ ಸುಮ್ಮನಿದ್ದಳು. ಎಷ್ಟಾದರೂ ನನ್ನ ಹೆಂಡತಿಯಲ್ವೆ?

ಈ ಸಂದರ್ಭಕ್ಕೆ ಕಾರಣವೇನೆಂದರೆ ಲಗ್ನಕ್ಕೆ ಮೊದಲು ನಾನವಳನ್ನು ಸರಿಯಾಗಿ ನೋಡಿರಲೇ ಇಲ್ಲ; ಅವಳೂ ನನ್ನನ್ನು ನೋಡಿರಲಿಲ್ಲ. ಹಾಗಾಗಿತ್ತು ನಮ್ಮ ಲಗ್ನ. ಅವಳಿಗೇನೋ ಅದು ಮದುವೆಯೇ ಆದರೂ ನನಗೆ ಮಾತ್ರ ಒತ್ತಾಯದ ಲಗ್ನ. ಏನೇ ಆದರೂ ಪಾಲಿಗೆ ಬಂದದ್ದು ಪಂಚಾಮೃತವೆಂದು ತಿಳಿದುಕೊಂಡು, ಒತ್ತಾಯದಿಂದ ಮದುವೆಮಾಡಿದ್ದ ಮನೆಯವರಿಗೂ ಟೆಕ್ಕು ಹಚ್ಚಿ, (ಅವರಿಗೆ ಗೊತ್ತಾದರೆ ಹೇಗೆ! ನಾನಾದದ್ದು ಅವರ ಒತ್ತಾಯದ ಮದುವೆಯಲ್ಲವೇ?) ಹೆಂಡತಿಯನ್ನು ಚನ್ನಾಗಿಯಾದರೂ ನೋಡಿ ಬರೋಣವೆಂದು ಹೊರಟಿದ್ದೆ. ಲಗ್ನದಲ್ಲಿಯೇನೋ ಅವಳನ್ನು ಕೆಲವು ಸಾರಿ ನೋಡಿದ್ದೆನಾದರೂ ಬಿಗಿಯಿಂದಿದ್ದೆನಾದ್ದರಿಂದ ಸರಿಯಾಗಿ ನೋಡಿರಲೇ ಇಲ್ಲ. ಅದರಲ್ಲೂ ವಧುಗಳು ಮುಖವನ್ನೇ ತೋರಿಸುತ್ತಿರುವುದಿಲ್ಲ ನಮ್ಮ ಲಗ್ನಗಳಲ್ಲಿ. ಆದರೆ ಕೆಲವು ಕಾರ್ಯಗಳಲ್ಲಿ ಅಲ್ಪಸಲ್ಪವೇಳೆ ಅವಳ ಮುಖವನ್ನು ಕಾಣಬಹುದು. ಆ ರೀತಿ ನಾನು ಕಂಡಿದ್ದಾದರೂ ಅವಳು ಆಭರಣಗಳ ಸಮುದ್ರದಲ್ಲಿ ಮುಳುಗಿದ್ದಾಗ ಮತ್ತು ಹೆಚ್ಚು ಬೆಲೆಯ ಉತ್ತಮ ಸೀರೆಗಳನ್ನುಟ್ಟಾಗ. ಆದರೆ ಈ ರೀತಿ ಸರಳ ಸುಂದರಿಯಾಗಿದ್ದಾಗ ನಾನು ಕಂಡಿರಲೇ ಇಲ್ಲ; ಕಾಣುತ್ತಲೂ ಇರಲಿಲ್ಲ. ಇಷ್ಟರ ಮಟ್ಟಿಗೆ ಸಲಿಗೆಯಿಂದ ಅವಳೊಂದಿಗೆ ಮುಂದೆಂದೂ ಮಾತನಾಡುತ್ತಿರಲಿಲ್ಲ.—ಈ ಸಂದರ್ಭವೊದಗದಿದ್ದರೆ.

ಆದರೆ ಈ ಸಂದರ್ಭದಿಂದ ಅವಳಿಗೆ ಅತೀವ ನಾಚಿಕೆ, ಸಂಕೋಚ, ಭಯ ಮತ್ತು ತನ್ನ ಗಂಡನೊಡನೆ ಎಷ್ಟು ಕಠೋರವಾಗಿ, ಕೀಳಾಗಿ ವರ್ತಿಸಿದೆನಲ್ಲಾ ಎಂದು ಅಸಹ್ಯ, ತಿರಸ್ಕಾರಗಳುಂಟಾಗಿದ್ದುವು. ಅವಳು ಅಳುತ್ತಾ ನನ್ನ ಕಾಲುಗಳನ್ನು ಹಿಡಿದುಕೊಂಡು ಮೌನವಾಗಿ ಕ್ಷಮೆಬೇಡಿದಳು. ನಾನು ಎಲ್ಲವನ್ನೂ ಗ್ರಹಿಸಿ, ಅವಳನ್ನು ಸಂತೈಸಲೋಸುಗ ಅವಳ ಕೆಳಮುಖವನ್ನು ಎರಡೂ ಕೈಗಳಿಂದ ಹಿಡಿದೆತ್ತಿ, ನನ್ನ ಕಡೆಗೆ ತಿರುಗಿಸಿಕೊಂಡು, ಅವಳ ತುಂಬುಗಲ್ಲಗಳನ್ನೂ, ಕೆಂದುಟಿಗಳನ್ನೂ ಮುದ್ದಿಸಿ, ಅವಳನ್ನು ಬಿಗಿಯಾಗಿ ಅಪ್ಪಿಕೊಂಡೆ.

ಸಾಯಂಕಾಲ ಅವಳ ಅಣ್ಣ ಹೊಲಕ್ಕೆ ಅನುದಿನವೂ ಬರುವಂತೆ ಬಂದ. ನನ್ನನ್ನು ಅಲ್ಲಿಯೇ ಕಂಡ ಅವನು ಅಚ್ಚರಿಯಿಂದ, "ಓಹೊ! ದೇಶಿಯವರು ಯಾವಾಗ ಬಂದದ್ದು! ಇದೇನು ಮನೆಗೆ ಬರೋದ್ನ ಬಿಟ್ಟು? ಹ್ಞಾ....ತಿಳಿಯಿತು....ತಿಳಿಯಿತು ಮಡದಿಯಿದ್ದಲ್ಲೇ ಮನೆಯೆಂಬಂತೆ ನೀವಾದರೂ ಮನೆಗೇ ಬಂದಿದ್ದೀರಿ ಪಾಪ....ನಿಮ್ಮದೇನೂ ತಪ್ಪಿಲ್ಲ. ಅಲ್ಲಾ, ನಮ್ಮ ಹೊಲ ಇದೇ ಅಂತ ನಿನಿಗ್ಹೇಗೆ ಗೊತ್ತಾಯ್ತು? ಮದುವೆಯೇ ಅವಸರದಲ್ಲಿ ನಡೆದು ಹೋಯ್ತು....ನಿನಿಗೆ ಹೊಲ ಗದ್ದೆ ತೋಟಗಳನ್ನು ತೋರಿಸಬೇಕೆಂದರೆ, ನೀನು ಇನ್ನೊಂದು ಸಾರೆ ಬಂದಾಗ ಆಗಲಿ ಎಂದೆ....ಅಲ್ಲಾ....ನೀನು ದಾರಿಯಲ್ಲಿ ಹೋಗೋದ್ನ ನೋಡಿ ಇವಳೇನಾದ್ರೂ ಕರೆದಳಂಗೋ ಅಲ್ವೇ? ಛೆಛೇ....ಏನು ನಾಚಿಕೆಯಿಲ್ಲದ ಹೆಂಗಸಪ್ಪಾ ಇವಳು! ಇನ್ನೂ ಏನೂ ಇಲ್ದೆ ಇಷ್ಟು ಸಲಿಗೆಯಿಂದ ಮಾತಾಡ್ತಾ ಕುಳಿತು ಬಿಡೋದೇ! ನಾನು ಲಗ್ನ ಆಗಿ ಆಗ್ದೇ ಮೂರು ವರ್ಷ ಆತು. ಒಂದಿನಾನಾದ್ರೂ ಸರಿಯಾಗಿ ಮಾತಾಡಿಲ್ಲ ನೋಡು ಅವಳು ನನ್ನೊಡನೆ." ಎಂದೆನೇನೋ ಅಂದ. ಅವನು ನನಗಿಂತ ಐದಾರು ವರ್ಷ ದೊಡ್ಡವ. ನಾನಾಗ, "ಇರ್ಲಿ ಮಾವೂ, (– ಅವನ ಹೆಸರೇ ಮಾವು ಅಂತ ಮಾಮರದ ಹೆಸರು. 'ಮಾಮಣ್ಣಾ' ಎಂದು ಕರೀತಾಳೆ.) ಆ ಕತೆ ಬೇರೆ ರಾತ್ರಿ ಕಡೆಗೆ ಅವಳೇ ಅದನ್ನೆಲ್ಲಾ ಹೇಳ್ತಾಳೆ. ನಾನಾಗ್ಲೇ ಮೂರು ಗಂಟೆ ಬಸ್‌ಗೆ ಬಂದೆ. ಎಲ್ಲಾ ಕ್ಷೇಮತಾನೆ?" ಎಂದೆ. ಅವನು "ಔಹೋ, ಹೌದೂ, ಆಗಿನಿಂದ್ಲೂ ಮನೆಗೆ ಬರದೆ ಇಲ್ಲೇ ಹರಟೆ ಹೊಡೀತಾ ಕುಳಿತು ಬಿಟ್ಟಿದ್ದೀರಾ? ಹಳ್ಳೀ ಹೆಣ್ಣಾಗೀ. ಜೀವಕ್ಕಾಗೆ ಸ್ವಲ್ಪಾದ್ರೂ ತಿಳೀಬಾರ್ದೆ? ಎಷ್ಟು ಚಕ್ಕಂದವಾಗಿ ಮಾತಾಡ್ತಾ ಕುಳಿತು ಬಿಟ್ಟಿದ್ದಾಳಲ್ಲಾ! ಸಾಮಾನ್ಯವಾಗಿ ಇವಳು ಯಾರ್ಸಂಗ್ಡಾನೂ ಮಾತಾ

ಡೋದೇ ಇಲ್ಲ. ಅದರಾಗ....ಹೊಸದಾಗಿ....ನಿಮ್ಮ ಸಂಗಡಾನೇ ಇಷ್ಟು ಮಾತಾಡ್ತಾಳಂದ್ರೇ ನನಗಂತೂ ಬಹಳ ಆಶ್ಚರ್ಯವಾಗಿದೆ" ಎಂದ. ಜೇವಿ: "ಉ್ಹೂ! ಎಲ್ಲಾರ ಸಂಗ್ಡನೂ ಹಿಂಗೇ ಮಾತಾಡಾಕ್ಹೋಗ್ಬೇಕೇನೋಹಂಗೆ!" ಎಂದು ತನ್ನಷ್ಟಕ್ಕೆಂಬಂತೆ ನುಡಿದಳೂ. ಮಾವು: ಛೇ....ಛೇ.... ಎಂದಿಗೂ ಜೇಡ. ನಿನ್ನ ಗಂಡನ ಸಂಗ್ಡ ಒಂದೇ ಹಂಗ್ಮಾಡವ್ವಾ....ನಿನ್ಯಾರು ಬ್ಯಾಡಾ ಅಂದ್ರೂ? ಅಲ್ಲಾ....ಎಂದೂ ನೀನಿಷ್ಟು ಮಾತಾಡಿದ್ನ ನೋಡಿದ್ದಿಲ್ಲ....ಅದಕ್ಕೇ ಹಾಗಂದೆ ಅಷ್ಟೇ. ಅಲ್ಲಯ್ಯಾ, ಮೂರು ಗಂಟ್ಯಾಗೆ ಏಟಾಕಂದು ಕಲಿಸಿ ಬಿಟ್ಟೇಯಲ್ಲೋ?!" ನಾನು, "ಹೌದಯ್ಯಾ, ಏನಂತಾ ತಿಳಕೊಂಡೀ? ನಮ್ಮ ಕಡೆಗೆ ಮೂಕರಾಗಿದ್ರೇ ಬಗೆ ಹರಿಯೋದಿಲ್ಲ. ಚಟಪಿಟ ಇರಬೇಕು ಹಂಗೆ. ಪರಿಸ್ಥಿತಿ ಹೇಗೋ ಹಾಗೆ ಹೊಂದಿಕೊಂಡಿರಬೇಕು ತಾನೇ? ಅದಕ್ಕೇ ಎಲ್ಲಾ ಹೇಳಿಬಿಟ್ಟು, ನಾಚಬೇಡಾಂತ ಧೈರ್ಯ ಕೊಟ್ಟೇನಿ. ಅಲ್ಲೋ ಮಾವೂ ಇವಳಿಗೂ ನನಗೂ ಪರಿಚಯವಾದ ಕತೇನಾ ನೀನು ಕೇಳಬೇಕೋ....ಅತೀ ಸ್ವಾರಸ್ಯವಾಗಿದೆ. ಆಗ್ಲೇ ಹೇಳಿದೆನಲ್ಲಾ....ರಾತ್ರಿ ಕಡೆ ಅವಳೇ ಹೇಳ್ತಾಳಂತ. ಇರ್ಲಿ, ಇಲ್ನೋಡೂ. ನಿಮ್ಮ ಕಡೆ ಹುಡುಗೇರ್ಗೆ ಗಂಡನ ಹೆಸರು ಹೇಳೂಂದ್ರೇ ಜೇಗ್ನೆ ಹೇಳಾಕ್ಬರೋದಿಲ್ಲ. ಕೆಲವು ನಾಚಿಕೊಳ್ತಾವೆ, ಇಲ್ಲಾ ಕೆಲವು ಮರ್ತೇ ಬಿಟ್ಟಿರ್ತಾವೇನೋ! ಈಗ ಕೇಳೂ ನಿಮ್ಮ ತಂಗೀನಾ 'ಗಂಡನ ಹೆಸರೇನೂ' ಅಂತ ಹ್ಯಾಂಗೆ ಹೇಳ್ತಾಳಂಗೆ." ಎಂದೆ. ಜೇವಿ ನಸುಮುನಿಸೀನಿಂದ, "ಸಾಕು ಬಿಡ್ರೀ ನೀವು...." ಎಂದಳು. ತುಂಟನಗೆ ಯಿಂದ ಮಾವು: "ಎಲ್ಲೀ ಹೇಳಮ್ಮಾ ಹಾಗಾದ್ರೆ ನಿನ್ನ ಗಂಡನ ಹೆಸರ." ಎಂದ. ಜೇವಿ: "ನಿನಗೆ ಗೊತ್ತಿಲ್ವೇನಣ್ಣಾ ಇವರ ಹೆಸರು ದೇಶಿಯವರು ಅನ್ನೋದು?" ಎಂದು ಬಿಟ್ಟಳು; ನನ್ನ ಮಾತನ್ನು ನಿಜವಾಗಿಸಿದಳು. ಮುದದಿಂದ ಮಾವು: "ಎಲ್ಲಾ ಗೊತ್ತವ್ವಾ, ನಿನ್ನ ಬಾಯಲ್ಲೇ ಕೇಳ್ಬೇಕು ಅಂತ ಕೇಳ್ದೆ, ಅದಕ್ಕೆ ನೀನು ಹೇಳ್ದೆ ಅಷ್ಟೆ. ಎಲ್ಲೀ ದೇಶಿ, ನೀನು ಹೇಳಪ್ಪಾ ನನ್ನ ತಂಗಿ....ಅಲ್ಲಲ್ಲಾ....ನಿನ್ನ ಹೆಂಡತಿ ಹೆಸರ?" ನಾನು: "ನಿಮ್ಮ ತಂಗಿ ಹೆಸರನ್ನೇ ನಿನಗೆ ಕೇಳಂಗಾತೇನೋ ಜಿಪ್ಪೇ....ನಿನ್ನ ಹೆಂಡ್ತಿ ಹೆಸರೇಳೋ ಮೊದಲು......ಜೇಡ ಬಿಡು, ನನಿಗೆ ಗೊತ್ತೈತೆ. ಏನೋ ನಾನಾಗ್ಲೇ ನನ್ನ ಹೆಂಡ್ತಿ ಹೆಸರ್ನ ನೀನು ಬರೋಕಿಂತ ಮೊದಲೇ ಹೇಳ್ಬಿಟ್ಟೇನಿ, ಕೇಳು ಜೇಕಾದ್ರೆ ನಿಮ್ಮ ತಂಗೀನಾ. ಹೋಗ್ಲಿ....ಹೇಗಾದ್ರೂ ನೀನು ಹೇಳ್ಸೇ ತೀರ್ತಿ ಕೇಳು. ಇನ್ನೊಂದ್ಸಲಾ ಹೇಳು ಅನ್ಬೇಡಾ ಎಷ್ಟು ಸಲ ಹೇಳಿದರೂ ಅಷ್ಟೇ....ಇವಳ

ಹೆಸರು ಜೇವೀ....ಜೇವಿ....ಜೇವಿ ಆಯ್ತು....ತೃಪ್ತಿಯಾಯಿತೇ ?" ಎಂದೆ; ಅವನು, "ಏ, ಜೇವಕ್ಕಾ ಅನ್ನೋ...." ಎಂದುದಕ್ಕೆ ನಾನು "ಜಿಪ್ಪೇ, ಇವಳು ನಮ್ಮಕ್ಕಾ ಅಲ್ಲ; ಇವಳೂ ನನ್ನ ಹೆಂಡತಿ ಜೇವಿ." ಎಂದೆ! ಅಣಕಿಸುತ್ತಾ, ಇವಳು ತಲೆತಗ್ಗಿಸಿ ಬಿಟ್ಟಿದ್ದಳು.

'ಜೇವಿ, ಎಂಥಾ ಹೆಸರು! ಜೇವು ವಿಷ; ಇವಳ ಹೆಸರು ವಿಷೆ. ಕರ್ನಾಟಕ ಕವಿ ಚೂತವನ ಚೈತ ಲಕ್ಷ್ಮೀಶನೂ ತನ್ನ ಕಾವ್ಯದಲ್ಲಿಯ 'ಚಂದ್ರಹಾಸ'ದ ನಾಯಕಿಗೂ ಇದೇ ಹೆಸರು ಅಂದರೆ 'ವಿಷಯೆ' ಎಂದು ಇಟ್ಟಿದ್ದಾನೆ. ಇವಳ ಹೆಸರೂ ಅದೇ ವಿಷೆ. ಆದರೆ ಜೇವಿಯೇ ಇರಲಿ. ಎಷ್ಟಾದರೂ ಅವಳ ತಂದೆತಾಯಿಗಳು ಮೆಚ್ಚಿ ಇಡಿಸಿದ ಹೆಸರಿದು, ಏಕೆ, ಇವಳ ಹೆಸರು ಚೆನ್ನಾಗಿಲ್ವೇ? ನನಗಂತೂ ಚೆನ್ನಾಗಿಯೇ ಇದೆ—ಇವಳೇ ಚೆನ್ನಾಗಿದ್ದಲೆಂದಮೇಲೆ.

ಇವಳೇನೋ ಜೇವಿ. ಆದರೆ ಇವಳು ನನಗೆ ಮಾತ್ರ ತುಂಬಾ ಸಿಹಿ, ಸವಿ.

# ನನ್ನ ಗೋಳು

"ಸರ್ವ ದರ್ಶನತೀರ್ಥ" ಶ್ರೀ ನಾಗೇಶ ಶಾಸ್ತ್ರಿಗಳ ಭಾಷಣವಿದೆ ಎಂದುದರಿಂದಲೋ ಏನೋ ಎಂಟು ಜನರೂ ಸೇರದಿರುವ ಊರಲ್ಲಿ ಆ ಸಭೆಗೆ ಎಂಟು ನೂರುಜನ ಸೇರಿದ್ದು. ಅದೇ ಆ ಊರ ಸಭೆಗಳಿಗೆ–ಸೇರುವ–ಜನರ–ಮೊತ್ತದ–ಕಟ್ಟಳೆಯ ಕಟ್ಟೊಡೆದದ್ದು. ಆಹಾ! ಶಾಂತಿ ಮೂರ್ತಿಗಳಾದ ನಾಗೇಶ ಶಾಸ್ತ್ರಿಗಳು ನಗು ಮುಖದಿಂದಲೇ ಸಾಹಿತ್ಯದ ಬಗ್ಗೆ ಇದ್ದ ಹಲವು ಸಮಸ್ಯೆಗಳನ್ನು ಬಿಡಿಸಿ, ಸರಳವಾಗಿ ಚಿಕ್ಕ ಮಕ್ಕಳಿಗೆ ಮಾತು ಕಲಿಸುವಂತೆ ಹೇಳಿದರು. ಛೇ! ಅಂಥಾ ಭಾಷಣವನ್ನು ನಾನು ಕೇಳುತ್ತೇನೆಂದು ಎಣಿಸಿಯೇ ಇರಲಿಲ್ಲ. ನಮ್ಮೂರ ತರುಣ ಸಂಘದವರು, ನಮ್ಮೂರ ಮುದುಕರು ತಮ್ಮ ತಾರುಣ್ಯದಲ್ಲಿ ಮಾಡದಂಥ ಕಾರ್ಯವನ್ನು ಅಂದರೆ 'ಕನ್ನಡ ನಾಡ ಹಬ್ಬ'ವನ್ನು ಉತ್ಸಾಹದಿಂದ ನೆರವೇರಿಸಲು ಮುಂದೆ ಬಂದು, ಅದಕ್ಕಾಗಿ ಎಷ್ಟೋ ಅಪವಾದಗಳನ್ನು ಸಹಿಸಿಯೂ ನಮ್ಮೂರವರಿಗೆ ಕೆಲವು ಸಾಹಿತಿಗಳ ಭಾಷಣದ ಸವಿಯೌತಣವೇರ್ಪಡಿಸಿ, ಎಲ್ಲಾ ಕಾರ್ಯಕ್ರಮವನ್ನೂ ಯಶಸ್ವಿಯಾಗಿ ಜರುಗಿಸಿ, ನಮ್ಮಂಥವರ ಪ್ರೀತಿಗೆ ಪಾತ್ರರಾದರು. ಅವರನ್ನು ಇಂದೂ ಈಗ ಕಂಡರೂ ಮುಗುಳುನಗೆ ನಕ್ಕೇ ಮುಂದೆ ಹೋಗುತ್ತೇನೆ. ಅಷ್ಟೇ ಅವರಿಗೆ ಪ್ರೋತ್ಸಾಹವಾಗಬಾರದೇಕೆ?

ಎಲ್ಲಿಂದ ಎಲ್ಲಿಗೆ ಬಂದಿತು? ನಾನು ಕುಡಿದ ನೀರಿನ ವಿಷಯ ಬಿಟ್ಟು ಜಲಾಶ್ರಯದಿಂದ ನೀರನ್ನು ತುಂಬಿತಂದಂಥ ಹೂಜಿಯನ್ನೇ ಹೊಗಳ ಹತ್ತಿದೆನಲ್ಲಾ! ಹೂಜಿಯು ತಾರದಿದ್ದರೆ ನೀರು ಹೇಗೆ ಸಿಗುತ್ತಿತ್ತೆಂದು ಹಾಗೆ ಮಾಡಿದೆನೇನೋ. ಅಂತೂ ದಾರಿಗೊತ್ತಿಲ್ಲದೆ ಜಲಾಶ್ರಯಕ್ಕಾಗಿ ತಡಕಾಡುವ ನೀರಡಿಸಿದವನಿಗೆ ಕೇವಲ ಹಾದಿಯನ್ನೇ ತೋರಿಸದೆ ಒಮ್ಮೆಲೇ ನೀರನ್ನೇ ಕುಡಿಯಕೊಟ್ಟರೆ ಅವನಿಗೆಷ್ಟು ಸಂತೋಷವಾಗಬೇಡ? ಮಾತು ಮುಂದುವರಿಯಿತಲ್ಲಾ ಇದು! ಹೌದು ಹೌದು. ಒಲುಮೆಯನ್ನು ಹೊಗಳುವುದೇ ಮಾನವನ ವೈಶಿಷ್ಟ್ಯವಲ್ಲವೇ?

ಸರಿ. ನಾಗೇಶ ಶಾಸ್ತ್ರಿಗಳು, ಸಾಹಿತ್ಯದ ಬಗ್ಗೆ ಏನೂ ಗೊತ್ತಿಲ್ಲದ ನಮ್ಮೂರ ಬಹು ಸಂಖ್ಯಾತರಿಗೆ ಅವರ ಬಗ್ಗೆ ಒಳ್ಳೇ ಅಭಿಪ್ರಾಯವುಂಟಾಗಲು

ಸ್ವಾರಸ್ಯವಾಗಿ ಅದರ ಸ್ಥೂಲ ಪರಿಚಯ ಮಾಡಿಕೊಟ್ಟರು. ಆದರೆ ನನಗಾಗ ಅವರು ಹೇಳಿದ ಒಂದೇ ಒಂದು ಮಾತಿನ ಬಗ್ಗೆ ಮಹಾ ಸಮಸ್ಯೆಯುಂಟಾಯಿತು.

ಅವರು ಹೇಳಿದ್ದೇನೆಂದರೆ " ನಾವು ಈಗ ಮಾತನಾಡುವಾಗ ಹೋಗ್ತೀನಿ, ಬರ್ತೀನಿ ಅಂತೇವೆ. ಆದರೆ ಬರೆಯುವಾಗ ಮಾತ್ರ ಹೋಗುತ್ತೇನೆ ಬರುತ್ತೇನೆ ಎಂದೇ ಬರೆಯುತ್ತೇವೆ. ಹೀಗೆಯೇ ಯಾವುದೇ ವಿಷಯವನ್ನು ಒರಟಾಗಿ ಹೇಳದೆ ಸರಿಯಾದ ಮಾತಿನಲ್ಲಿ ಹೇಳುವುದೇ ಸಾಹಿತ್ಯ. ಒಟ್ಟಿನಲ್ಲಿ ಸವಿನುಡಿಯೇ ಸಾಹಿತ್ಯ. ಈಗ ಇದಕ್ಕೆ ಉದಾಹರಣೆ ಕೊಡಬೇಕೆಂದರೆ, ಹೆಂಡತಿಯು ಗಂಡನಿಗೆ.–ನಿಮ್ಮಲ್ಲಿ ಅನೇಕರು ಮದುವೆಯಾದವರಿರಬಹುದು– ಸಮಯವರಿತು, ಮೃದುವಾಗಿ, ಅಕ್ಕರೆಯಿಂದ ಅವನ ಆ ತಪ್ಪನ್ನು ತಿದ್ದುವುದಕ್ಕೋ ಅಥವಾ ಬೇರೇನಾದರೂ ಸದುಪದೇಶ ಮಾಡುವುದಕ್ಕೋ ಪ್ರಯತ್ನಿಸುವಾಗ ಅವಳ ವರ್ತನೆ ಹೇಗಿರುತ್ತೋ ಹಾಗೆಯೇ ಸಾಹಿತ್ಯವಾದರೂ ಇರುವುದು...."

ಸಾಕು. ಇಲ್ಲಿಯವರೆಗೇ ನಾನು ಮನಗೊಟ್ಟು ಕೇಳಿದ್ದು. ಮುಂದೆ ನಡೆದುದೆಲ್ಲಾ ಕನಸಿನಲ್ಲಿ ನಡೆದಂತಾಗಿ ನೆನಪಿಲ್ಲವೆಂದರೂ ಒಪ್ಪೆ. ಅಲ್ಲಾ! ನನ್ನ ಮನದಲ್ಲುಂಟಾದುದು ಸಮಸ್ಯೆಯೇ ಹೊರತು ಮತ್ತೆ ಮಹಾಕವಿ ನಾಗೇಶಶಾಸ್ತ್ರಿಗಳ ಭಾಷಣದ ಬಗ್ಗೆ ಉಂಟಾದ ಬೇಸರವಲ್ಲ. ಅವರು ಸಭಿಕರಿಗೆ ಎಷ್ಟೂ ಬೇಸರವಾಗದಂತೆ, ಮತ್ತೆ ಶ್ರೋತೃಗಳಿಗೆ ಬೇರೆ ಕಡೆಗೆ ಗಮನ ಹೋಗದಂತೆ ಸೆಳೆದು, ತಮ್ಮ ಅಭಿಪ್ರಾಯಗಳು ಅವರ ಮನದಲ್ಲಿ ಅಚ್ಚಳಿಯದೆ ಉಳಿಯುವ ರೀತಿಯಲ್ಲಿ ಭಾಷಣ ಮಾಡಬಲ್ಲರು. ಅ. ನ. ಕೃಷ್ಣರಾಯರು ಬರೆದಿರುವ 'ಕನ್ನಡಕುಲರಸಿಕರ'ಲ್ಲಿ ಅವರ ಜೀವನ ಚರಿತ್ರೆಯನ್ನು ಓದಬಹುದಾದರೂ, ಮೈಸೂರ ಆಸ್ಥಾನಕವಿಗಳು : ಸೊಂಡೂರಿಗೂ ಆಗಿದ್ದರು.

ಏನು! 'ಗಂಡನನ್ನು ಮೆಚ್ಚಿಸಿ. ಒಲಿಸಿಕೊಂಡು, ಅಕ್ಕರೆಯಿಂದ, ಅವನ ಮನ ಮುದಗೊಂಡಿರುವ ವೇಳೆಯರಿತು, ತನ್ನ ಅಭಿಪ್ರಾಯವನ್ನು ಅವನಿಗೆ ಸೂಚಿಸುತ್ತಾಳೆಂ'ದಲ್ಲವೇ ಅವರು ಹೇಳಿದ್ದು? ಶಿವಶಿವಾ! ಶಾಸ್ತ್ರಿಗಳಿಗೆಲ್ಲೋ ಅಂಥಾ ಹೆಂಡರಿರಬೇಕು. ಹ್ಞೂ.... ಅಲ್ಲದೆ ನನ್ನೊಬ್ಬನನ್ನು ಬಿಟ್ಟು ಇನ್ನುಳಿದ ಸಂಸಾರಿಗರೆಲ್ಲರಿಗೂ ಅದೇ ರೀತಿ ಇರಬಹುದು. ಅದೆಲ್ಲಾ ಇಲ್ಲದಿದ್ದರೂ ಒಂದು ಪಕ್ಷ ಈ ಬಗ್ಗೆ ಚುನಾವಣೆ ನಡೆಸಿದರೆ ಅವರ ಅಭಿಪ್ರಾಯವೇ ಬಹುಮತದಿಂದ ಗೆಲ್ಲಬಹುದು. ಆದರೆ ಇನ್ನುಳಿದವರು – ಸೋತವರ –

ಪಾಡೇನು? ಗೆದ್ದವರಂತೆಯೇ ಅಹುದೆಂದು, ಬಿದ್ದು ಚನ್ನಾಗಿ ಪೆಟ್ಟುತಗಲಿ ದವನು ಜನರು ನಗುವುದನ್ನು ಕಂಡು ತನ್ನ ಮರ್ಯಾದೆಗೋಸುಗ ಪೆಟ್ಟಾಗಿಲ್ಲ ವೆಂದು ನಟಿಸಲು ನಗುವಂತೆ ಇಂಥಾ ಬಲವಾದ ಪೆಟ್ಟನ್ನು ಸಹಿಸಬೇಕೆ?

ನಾನು ನೋಡಿದಂತೆ, ನನಗೆ ಗೊತ್ತಿದ್ದವರ ಪೈಕಿ ನನ್ನ ಸ್ಥಿತಿಯಲ್ಲಿದ್ದವ ರಾರೂ ಇಲ್ಲ. ಅಂದರೆ ನಾನು ಸೋಲಿನ ಪಕ್ಷದವನು; ಹೆಂಡತಿಯಿಂದ ಅಂಥ ಸುಖವನ್ನು ಪಡೆಯದವನು. ಶಿವಶಿವಾ! ನನ್ನ ಗೆಳೆಯರೆಲ್ಲರಿಗೂ ಹೆಂಡತಿಯಿಂದ ಸುಖ ದೊರೆಯುವಂತಹ ವರ ಕೊಟ್ಟು ನನಗೆ ಮಾತ್ರ ಇಂಥಾ ಕನ್ಯೆಯನ್ನೇಕೆ ಕೊಟ್ಟೆಯೋ? ಅಯ್ಯೋ! ಸವಿನುಡಿಯೊತ್ತಟ್ಟಗಿರಲಿ, ಸುಮ್ಮನೇ ಇದ್ದುಬಿಟ್ಟರೆ ಹೇಗಾದರೂ ಸಹಿಸಿಕೊಂಡೇನು. ಎಲ್ಲಾ ಬಿಟ್ಟು ಮನೆಗೆ ಕಾಲಿಟ್ಟೊಡನೆ, 'ಈಟೊತ್ತು ಎಲ್ಲಿಗೆ ಹೋಗಿದ್ದೆ? ಮನ್ಯಾಗ ಮುಸುರಿ ತಿಕ್ಕಲಿಕ್ಕೆ ನೀರಿಲ್ಲ....ಇನ್ನೂ ಅಕ್ಕಿ ಯಾವಾಗ ಇಡಬೇಕು?" ಎಂದರೇನು? ಅಳಬೇಕೋ ಉರ್ಲುಹಾಕ್ಕೊಂಡು ಸಾಯಬೇಕೋ? ಅಲ್ಲಾ, ನಾನೇನು ಹಳ್ಳಿ ಮಡ್ಡನಲ್ಲ. ಸಿಟ್ಟನ ಹಳ್ಳಿಯವನಿಗೆಲ್ಲಾದರೂ ಇಂಥಾ ಹೆಂಡತಿಯಿದ್ದರೆ ಕಡಿದು ಹಾಕಿ ಬೇರೆ ಲಗ್ನ ಮಾಡಿಕೊಳ್ಳುತ್ತಿದ್ದ. ಹೋಗಲಿ ಸಂಪನ್ನನಾಗಿ ದ್ದರೆ ಅವನು ಸುಧಾರಿಸಿಕೊಳ್ಳುತ್ತಿದ್ದ ಎನ್ನೋಣ. ಮತ್ತೇ ನಾನು ಸಿಟ್ಟೆ ನವ! ಮೇಲೆ ಇಂಟರ್ ಫೇಲ್ಡ್!! ಇವಳನ್ಯಾಕೆ ಕಟ್ಟಕೊಂಡಿರಬಹುದೆಂದು ನಿಜಸಂಗತಿ ಗೊತ್ತಿಲ್ಲದವರು ಅಚ್ಚರಿ ಪಡಬಹುದು. ಏಕೆಂದರೆ ವಿದ್ಯಾ ವಂತನು ಕನ್ಯೆಯನ್ನು ನೋಡಿದರೇ ಸಾಕು ಇಂಥವಳೇ ಎಂದು ತಿಳಿದುಕೊಳ್ಳು ವಷ್ಟು ಶಿಕ್ಷಣ ಪಡೆದಿರುತ್ತಾನೆಂಬುದು ಒಂದು ಬಡಸಿದ್ಧಾಂತ. ಅದರಲ್ಲೂ ಪರವೂರಲ್ಲಿ ಓದಿದವನೆಂದರೆ ಇದು ಧೃಡವಾಗಿ ನಂಬತಕ್ಕದ್ದು, ಅಂಥಾ ಪರವೂರಲ್ಲಿ ಓದಿದ ನಾನು ಇಂಥಾವಳೊಡನೆ ಬಾಳುವೆ ನಡೆಸುತ್ತಿರುವುದನ್ನು ಕಂಡರೆ ಯಾರಾದರೂ ಏಕೆ ಅಚ್ಚರಿಪಡದೆ ಬಿಟ್ಟಾರು ಪಾಪ! ಅದರಲ್ಲೂ ಇನ್ನೂ ಒಂದು ಸುದ್ದಿ ಹೇಳಿದರೆ ಹೆಚ್ಚಿನ ಅಚ್ಚರಿಯಿಂದ ಸತ್ತೇ ಬಿಟ್ಟಾರು! ಅದೇನೆಂದರೆ ಮೆಲ್ಲಗೆ ಕೇಳಿ....ಮತ್ತೆ ನೀವೂ ಅತ್ತೀರಿ!....ಮತ್ತೇ ಏನಂದ್ರೇ ನನಗೆ ಅವಳು ಅಂಥವಳೆಂದು ಮೊದಲೇ ಗೊತ್ತಿದ್ದೂ ಅವಳೊಡನೆ ಬಾಳುವೆ ಮಾಡುತ್ತಿರುವುದು. ಇನ್ನೊಂದು ಸುದ್ದಿ ಹೇಳಿದರೆ ಸಂಶಯ ನಿವಾರಣೆ ಯಾಗಬಹುದು – ಅವಳು ನನ್ನ ಅಕ್ಕನ ಮಗಳು. "ಅದಕ್ಕೇ ಲಗ್ನವಾಗಿ ದ್ದಾನೆ ಪದ್ದು, ಹಳಬರ ಹಾಗೆ....ಸಂಬಂಧ ಬಿಟ್ಟು ಹೋಗಬಾರದೆಂದೇ

ಅಂಥವಳೆಂದು ತಿಳಿದರೂ ಸಾಕಷ್ಟು ವಿದ್ಯಾವಂತನಾಗಿದ್ದರೂ ಲಗ್ನಮಾಡಿ ಕೊಂಡ ಈಗಿನ ಹುಡುಗರು ಯಾರು ಕೇಳುತ್ತಾರೆ ಹಿರಿಯರ ಮಾತನ್ನು— ಒಂದು ಪಕ್ಷ ಹಿರಿಯರೇ ಕಡ್ಡಾಯ ಮಾಡಿದ್ದರೂ ಕೂಡಾ?! ಅದೇನೋ ಅಂತಾರಲ್ಲಾ 'ವಿದ್ಯಾವಂತರೆಲ್ಲಾ ಬುದ್ಧಿವಂತರೆಂದು ನಂಬುವುದು ಹುಚ್ಚು ತನ' ಎಂದು; ಅದು ಅಕ್ಷರಶಃ ಸುಳ್ಳಲ್ಲ. ಅದಕ್ಕೆ ಇವನೇ ಕಚ್ಚಾ ಉದಾ ಹರಣೆಯಾಗಿದ್ದಾನೆ." ಎಂದು ಮಾತನಾಡಿಕೊಳ್ಳಬಹುದು. ಆದರೆ ಇನ್ನೊಂ ದನ್ನು ಕೇಳಿದರೆ ಅವರಿಗೆ ಹಾಗನ್ನಲು ಅಷ್ಟು ಧೈರ್ಯಬರಲಾರದು. ಅದೇ ನೆಂದರೆ ಅವಳು ಹುಟ್ಟಿದ ಕೂಡಲೇ ನನಗೆ ಅವಳನ್ನು ಕಾಯಂ ಮಾಡಿದ್ದರು. ನನಗೆ ನೆನಪಿದೆಯೇ? ಎಲ್ಲಿರಬೇಕು? ಅವಳಿಗಿಂತ ನಾನು ಮೂರೇ ವರ್ಷಕ್ಕೆ ಹಿರಿ ಯವ 'ಹುಟ್ಟಿದಾಕ್ಷಣವೇ ಎಂದರೆ ಯಾರಾದರೂ ನಕ್ಕಾರು!' ಎಂದರೇ ನಿಮ್ಮ ಸಂಶಯವೇನಾದರೂ ನಿಜವಾಗಬಲ್ಲುದೇ? ನಮ್ಮ ಮನೆಯಲ್ಲೇ ನಮ್ಮಕ್ಕನು ಚೊಚ್ಚಲಮಗು ಹಡೆದಾಕ್ಷಣವೇ, "ನಿನ್ನ ಮಗಳನ್ನು ನನ್ನ ಮಗನಿಗೆ ಕೊಡ ಬೇಕೆಂದು" ನಮ್ಮಪ್ಪನು ಹೇಳಿದ್ದಳಂತೆ, ಗೊತ್ತೇ? ಲಗ್ನವಾದುದು ನನಗೆ ಸರಿಯಾಗಿ ನೆನಪಿಲ್ಲ. ಒಂದು ಪಕ್ಷ ಲಗ್ನದದಿನ ನೆನಪಿದ್ದರೂ ಅದರ ಉದ್ದೇ ಶವೇನೂ ತಿಳಿಯದ ವಯಸ್ಸಿನಲ್ಲಿ ಲಗ್ನವಾದರೂ ಅದು ಲಗ್ನವೇ ಅಲ್ಲವೇ? ಇಬ್ಬರಲ್ಲಾರಾದರೂ ಸಾಯುವತನಕ ಕೂಡೇ ಬಾಳಬೇಕಲ್ಲವೇ?

ಈಗ ನಿಜವಾಗಲೂ ಬಹುಜನ ನನ್ನನ್ನು ಬಯ್ಯಲಾರರು. ಅಂಥವಳು ನನ್ನ ಹೆಂಡತಿಯಾಗಿರುವುದಕ್ಕೆ ಕೆಲವರೆನ್ನಬಹುದು; "ಅದು ಲಗ್ನವಲ್ಲ... ಆ ಪ್ರೇಮ ಲಗ್ನದಿಂದ ಬಾಳಿನಲ್ಲಿ ಸುಖದೊರೆಯಲಾರದು. ಅವಳನ್ನು ಬಿಟ್ಟು ಬೇರೆ ಲಗ್ನವಾಗಬಹುದಲ್ಲಾ ಒಳ್ಳೇ ಹುಡುಗಿಯನ್ನು ನೋಡಿ. ಸಮಸಾರ ರಹಿತ ಸಂಸಾರವೇತಕೇ?" ಎಂದು, ನ್ಯಾಯ; ಆದರೆ ಅವರಿಗೆ ನನ್ನ ಒಂದು ಪ್ರಶ್ನೆ: ಅವಳನ್ನು ಯಾರು ಮದುವೆಯಾಗಬೇಕು? "ಯಾರಾದರೂ ಆಗೇ ಆಗುತ್ತಾರೆ" ಎನ್ನುವುದೇನೂ ನನಗೆ ಸಮಂಜಸ ಉತ್ತರವಾಗಿ ಕಾಣುವುದಿಲ್ಲ. ಅವಳು ನನಗೆ ಬರಿಸೊಸೆಯೇ ಆಗಿದ್ದಿದ್ದರೆ, ಅವಳು ಉತ್ತಮ ಳಿದ್ದೂ ಅವಿದ್ಯಾವಂತಳೆಂಬ ಕಾರಣದಿಂದ ನಾನು ಅವಳನ್ನು ಬಿಟ್ಟು ಬೇರೆ ವಿದ್ಯಾವಂತೆಯನ್ನು ಲಗ್ನವಾಗಿದ್ದರೆ ಆಗ ಯಾವನಾದರೂ ಅವಿದ್ಯಾವಂತ ನಾದರೂ ಅವಳನ್ನು ಮದುವೆಯಾಗುತ್ತಿದ್ದ. ಈಗ ಅದೂ ಕಷ್ಟವೇ! ಗಂಡನು ತ್ಯಜಿಸಿದವಳನ್ನು ಅವಿದ್ಯಾವಂತನು ಮದುವೆಯಾಗುವನೇ? ಸಾಧ್ಯವಿಲ್ಲ! ತ್ರಿಕಾ

ಲಕ್ಕೂ ಸಾಧ್ಯವಿಲ್ಲ. ಮತ್ತೆ ಯಾವನಾದರೂ ಸುಧಾರಿತನಾದರೂ ಮದುವೆಯಾದಾನು– ಸೌಂದರ್ಯ ಪ್ರಿಯನಾಗಿದ್ದರೆ! ಆದರೆ ಅದು ಅವಳ 'ಸಭ್ಯಸ್ತಳಾಗಿದ್ದರೆ' ಯ ಮಾತು. "ಅವಳು ಮಹಾ ಸಿಡುಕಿನವಳು...ಇವಳಿಗೆ ಅಂಥಾ ಗಂಡ ಸುಧಾರಿಸುತ್ತಾನೆಯೇ! ಇವಳನ್ನು ಅವನು ಬಗ್ಗಿಸಿಯಾನೆ'! ಎಂದು ಊರಿಗೆ ಊರೇ ಮೊದಲಿನಿಂದಲೂ ಬೊಬ್ಬೆಕುಟ್ಟುತ್ತಿದ್ದಾಗ ಅವಳಿಗೆ–ಲಗ್ನವಾದ ಅವಳಿಗೆ ಯಾರು ವರ ಸಿಕ್ಕಾರು! ನಾನು ಅವಳಗೋಳು ನನಗೇಕೆಂದು, ಎಲ್ಲೋ ಹೋಗಿ, ಯಾವಳೋ ಒಬ್ಬ ಉತ್ತಮಳನ್ನು ಲಗ್ನವಾಗಿ ಸುಖ ಸಂಸಾರ ಮಾಡಿಕೊಂಡಿರಬಹುದಾಗಿತ್ತು. ಆದರೆ ನಾನು ನನ್ನ ಮುಪ್ಪಿನ ಮಾತಾಪಿತೃಗಳನ್ನು ನೋಯಿಸಲಾರೆ. ಅವರು ಬಹು ಅಕ್ಕರೆಯಿಂದ ನಾನು ಹುಟ್ಟಿದ ಕೂಡಲೇ ನಮ್ಮಕ್ಕನಿಗೆ ಹೇಳಿದ್ದರಂತೆ: ಅವಳಿಗೆ ಹೆಣ್ಣುಮಗುವಾದರೆ ನನಗೆ ಕೊಡಬೇಕೆಂದು. ಅದರಂತೆಯೇ, ನಾನು ಹುಟ್ಟಿದ ವರ್ಷವೇ ನಮ್ಮಕ್ಕನ ಲಗ್ನವಾಗಿ, ಮೂರೇ ವರ್ಷಕ್ಕೆ ಈ ನನ್ನ ಭಾರ್ಯೆಯನ್ನು ಹಡೆದು, ನನ್ನನ್ನು ಕಡೆಯ ಹಚ್ಚಿರುವಳು. ಕೇವಲ ತಂದೆ ತಾಯಿಗಳ ಮಾತಿನಿಂದಲ್ಲದೇ ನಾನೂ ಬಹು ಯೋಚಿಸಿ ಈ ವಿಷಯವಾಗಿ ಸಂಪೂರ್ಣ ನಿರ್ಧಾರ ಮಾಡಿಕೊಂಡೇ ಸಂಸಾರ ಮಾಡಲು ಮೊದಲು ಮಾಡಿದ್ದೇನೆ. ಇದನ್ನು ನೋಡಿ ಈಗ ಅನೇಕ ಜೇರೆ ಸಹಾನು–ಭೂತಿ ತೋರಿಸುವವರಂತೆ ನನ್ನ ತಂದೆ ತಾಯಿಗಳೂ ಕನಿಕರಪಡುತ್ತಾರೆ ನನ್ನ ಬಾಳಿಗೆ. ನನ್ನ ಹೆಂಡತಿಯ ಕಾಟದ ವ್ಯಸನಕ್ಕಿಂತ ಇದೇ ನನಗೆ ಹೆಚ್ಚಿನ ಸಂತೋಷದಾಯಕವಾಗಿದೆ.

ನಾನೂ ಸಂಪನ್ನನಾಗಿದ್ದರೆ ಒಳ್ಳೆಯದಿತ್ತೇನೋ! ಆದರೆ ನನ್ನ ಸ್ವಭಾವ ಮೊದಲೇ ಕೋಪದ್ದು. ಅದರಿಂದ ಮೊದಲಿಗೆ ಬಹಳ ಕಷ್ಟವಾಯಿತು. ನಾನೇನೋ ನಿರ್ಧಾರ ಮಾಡಿದ್ದು – ಅವಳನ್ನೂ ನನ್ನ ದಾರಿಗೆ ತಿದ್ದಿಕೊಂಡರಾಯಿತೆಂದು. ಅದಕ್ಕಾಗಿ ಇಂದಿಗೂ ಪ್ರಯತ್ನ ಪಡುತ್ತಿದ್ದೇನೆ. ಎಷ್ಟೆಷ್ಟೂ ಸಾಧಿಸಿಲ್ಲವಾದ್ದರಿಂದ ಆ ಪ್ರಯತ್ನವನ್ನು ಕೈಬಿಡಬೇಕೆಂದಿದ್ದೇನೆ. ಅಯ್ಯೋ ಹರಾ! ಅವಳು ಒಂದು ದಿನವಾದರೂ–ಇಷ್ಟು ವರ್ಷಕ್ಕೆ ಅಂದರೆ ಈ ಆರು ವರುಷಗಳಲ್ಲಿ – ಒಂದಾದರೂ ಸವಿನುಡಿ ನುಡಿದಿದ್ದರೆ "ನಾನೇ ಕಣೋ ಬ್ರಹ್ಮಾ" ಎಂದು ಎಲ್ಲಾ ಸ್ನೇಹಿತರ ಮುಂದೆ ಜಂಭ ಕೊಚ್ಚಿಕೊಳ್ಳುತ್ತಿದ್ದೆ. ನನಗೊಂದು ಅನುಮಾನ – "ಅವಳು ಈ ರೀತಿಯಾಗಿರಲು ಯಾರು ಕಾರಣವಾಗಿರಬಹುದು?" ಎಂದು. ಹುಟ್ಟುಗುಣವೇ ಹಾಗಿದ್ದರೆ ಯಾರೇನು

ಮಾಡುವರು ಪಾಪ! ಅವಳ ಹುಟ್ಟು ಗುಣವೇ ಹಾಗಿದ್ದರೆ ಹಿಂದಿನ ಜನ್ಮದಲ್ಲಿ ನಾನು ಎಂಥಾ ಪಾಪ ಮಾಡಿರಲಿಕ್ಕಿಲ್ಲ? ಎಷ್ಟು ಹೆಂಡರನ್ನು ಹುರಿಸಿ ತಿಂದಿರ ಬೇಕು! ಯಾರ ಹೆಂಡರನ್ನು ಅಗಲಿಸಿರಬೇಕು! ಈಗ ನನ್ನ ಎಲ್ಲಾ ಉಪಾಯಗಳೂ ಮುಗಿದು ಕೊನೆಯುಪಾಯವೊಂದೇ ಉಳಿದಿದೆ: ಅವಳು ಬೈದಾಗ ಆಳುವುದು.

ನಾನು ಕಾಲೇಜಿನಿಂದ ಮರಳಿ ಬಂದೆ. ಎಲ್ಲಾ ಕಾರ್ಯಗಳೂ ಸಾಂಗವಾಗಿ ನಡೆದು ಅವಳನ್ನು ನಮ್ಮ ಮನೆಗೆ ಸಂಸಾರ ಮಾಡಲಿಕ್ಕೆ ಕರೆತಂದುದಾಯಿತು. ನಾನು ಅವಳಿಗೆ ಮೊದಲೇ ಮಾವನಾಗಬೇಕಾಗಿದ್ದುದರಿಂದ ಈಗಲೂ 'ಮಾವ' ಎಂದೇ ಕರೆಯುತ್ತಾಳೆ. ಅದರಿಂದಂತೂ ನನ್ನ ಬೃಹದಿಚ್ಛೆ – ನಾನು ಅವಳಿಂದ ಬಹುವಚನದಿಂದ ಕರೆಸಿಕೊಳ್ಳುವುದು – ಲೋಪವಾಯಿತು. ಮೈಸೂರ ಲೇಖಕರ ಕತೆಗಳನ್ನೋದಿದ್ದ ನಾನು: 'ಏನಿಂದ್ರೇ ....ಹೋಗ್ರೀ ನೀವೂ....ನಿಮ್ದು ಯಾವಾಗಲೂ ತಮಾಷೇನೇ ಅಂದ್ರೇ.... ಯಾರಾದ್ರೂ ನೋಡಿಯಾರು ತಗೀರೀ....ಚಿಕ್ಕ ಮಕ್ಕಳ ಹಾಗೆ ಮಾಡ್ತೀರಿ ನೋಡೀಂದ್ರೇ....ಯಾವುದಾದ್ರೂ ಒಳ್ಳೇ ಚಿತ್ರ ಬಂದ್ರೇ ನೋಡೋಕೆ ಹೋಗೋಣ ಕಣ್ರೀ....ಈ ದಿನ ಒಳ್ಳೇ ಚಿತ್ರ ಬಂದಿದೆ ಯಂತಲ್ರೀ....ತಿಂಡಿ, ಕಾಫಿ ತರಲೇನೂಂದ್ರೇ....ಈ ದಿನ ಯಾಕೆ ಕಣ್ರೀ ಇಷ್ಟೇ ಊಟ ಮಾಡಿದ್ರಿ...." ಎಂದು ನನ್ನ ಹೆಂಡತಿಯಿಂದ ಅನ್ನಿಸಿಕೊಳ್ಳಬೇಕೆಂದು ಕನಸು ಕಾಣುತ್ತಿದ್ದೆ. ಆದರೆ ಅವಳು: "ತಿಂಡಿ ತರಲೇನ್ರೀ" ಎಂದು ಕೇಳುವುದಿರಲಿ; ಅವಳನ್ನು ಕಂಡರೇಸಾಕು ಮೈಯೆಲ್ಲಾ ತುರಿಸಿಕೊಳ್ಳುವಂತಾಯಿತಯ್ಯಾ ಎನ್ನ ಯುಕ್ತಿ. ಹೊಸತರಲ್ಲಿ, ಅವಳನ್ನು ದಾರಿಗೆ ತರಲು ಯತ್ನಿಸಿದರೆ ನನ್ನ ಪ್ರಯತ್ನ ಫಲಿಸೀತೆಂಬ ಧೃಡನಂಬುಗೆ ಇತ್ತು. ಅದಕ್ಕಾಗಿ ಅವಳನ್ನು ಚತುರೋಪಾಯಗಳಿಂದಲೂ ದಾರಿಗೆ ತರಲು ಹವಣಿಸಿದ್ದೆ.

ಅವಳನ್ನು ನಮ್ಮ ಮನೆಗೆ ಹೊಸತಾಗಿ ಕರೆತಂದಾಗ ನನ್ನ ತಾಯಿ ಅವಳಿಗೆ ಮನೆಯ ವಹಿವಾಟನ್ನು ಎಲ್ಲಾ ವಹಿಸಿಕೊಟ್ಟಳು. ನಮ್ಮ ಮನೆಯಲ್ಲಿ ಮೊದಲಿನಿಂದಲೂ ಕಾಫಿ, ಟೀ ಮೊದಲಾದ ರೂಢಿ ಇರಲಿಲ್ಲ. ಆದರೆ ಪರರ ಮನೆ ಸೇರಿದ ನಮ್ಮಕ್ಕ ಅದನ್ನು ರೂಢಿಸಿಕೊಂಡು ತೌರಿಗೆ ಬಂದಾಗ ಕುಡಿಯದಿರಲಿಕ್ಕಾದೀತೇ? ಅದರಲ್ಲೂ ನಮ್ಮ ತಂದೆಯವರು ತಾವು ಕುಡಿಯುದಿದ್ದರೂ ಕುಡಿಯುವವರನ್ನು ತಡೆಯುತ್ತಿರಲಿಲ್ಲ. ನಾನು ಪರವೂರಲ್ಲಿ

ಓದಿದವನಾದ ಮೇಲೆ ಕಾಫಿ ಕುಡಿಯುವ ಚಾಳಿ ಬಿಟ್ಟೀತೇ?! ನನ್ನವಳಂತೂ ನಮ್ಮಕ್ಕನ ಮಗಳಾದ ಮೇಲೆ ಕೇಳುವುದೇನು! ಎರಡು ಗಂಗಾಳದ ತುಂಬಾ ಚಾ ಕುಡಿಯುತ್ತಾಳೆ ಒಂದೇ ಸಾರಿಗೆ. ನಾನು ಅವಳು ಬಂದ ಮರುದಿನ, ಅಡುಗೆಮನೆಯಲ್ಲಿ ಅವಳೊಬ್ಬಳೇ ಇದ್ದಾಗ, "ಏನೇ ಕಾಫಿ ಮಾಡಿ ಕೊಡುವುದಿಲ್ಲವೇ? ಹೊತ್ತಾಯಿತಾಗಲೇ!" ಎಂದೆ. ಅವಳು, "ಯಾಕೆ? ನನಗೇ ಕಾಫಿ ಮಾಡಾಕೇ ಬರಾದಿಲ್ಲ. ಟೀಯೊಂದೇ ಬರೋದು. ನೀನು ಹಿಂಗಿರುವುದು ಸಾಲದೇ ಬರದ ಹೆಣದಂಗೆ. ಮತ್ತೆ ಅದನ್ನು ಕುಡುದು ಇನ್ನೂ ಕಟ್ಟಿಗೆಯಂಗಾಗಾಕಂತ ಮಾಡೀಯೇನು? ನಾನು ನಮ್ಮೂರಲ್ಲೇ ನಿನಿಗೆ ಕುಡಿಬೇಡಾಂತ ಹೇಳ್ತಿದ್ದೆ. ಏನೋ ಅವ್ವ ಬೈದಾಳೇಂತ ಬಿಟ್ಟೆ. ಈಗ ಹೇಳ್ತೀನಿ ಇನ್ನೆಂದೂ ಕುಡೀಬೇಡ ನೋಡು. ಹೇಳೀನಿ ನೋಡು ಮತ್ತೇನಾರಾ ಆದ್ರೇ ನಮಗೇ ಮೂಲ." ಎಂದಳು. ಅಂದಿನಿಂದ ಇಂದಿನ ವರೆಗೂ ನಾನು ಅವಳನ್ನು "ಕಾಫೀ ಮಾಡೇ" ಎಂದು ಕೇಳಿಲ್ಲ. ಬರಿ ಹೊಟೆಲ್ಲೇ ಗತಿ. ಬಂದ ಹೊಸತರಲ್ಲೇ ಗಂಡನ ಆರೋಗ್ಯದ ಮೇಲೆ ಎಂಥಾ ಜವಾಬ್ದಾರಿ! ಯಾರಿಗಾದರೂ ಉಂಟೇ ಮತ್ತೆ!

ನಾನು ಇಂಟರ್ ಫೇಲ್ ಆದಮೇಲೆ, ಅಭ್ಯಾಸವನ್ನು ಅಷ್ಟಕ್ಕೆ ಬಿಟ್ಟು, ಊರಲ್ಲಿ ಸುಮ್ಮನೇ ಏಕೆ ತಿರುಗಾಡಬೇಕೆಂದು ನಮ್ಮೂರ ಒಂದು ಎಲಿಮೆಂಟರಿ ಶಾಲೆಯಲ್ಲಿ ಅನ್‌ಟ್ರೇಂಡ್ ಟೀಚರ್ ಆಗಿ ಕೆಲಸಮಾಡುತ್ತಾ "ಮೇಸ್ಟ್ರೇ ಎನಿಸಿಕೊಳ್ಳುತ್ತಿದ್ದೆ. ಒಂದು ದಿನ ಮಧ್ಯಾಹ್ನ ತಡವಾದುದರಿಂದ ಅವಸರವಸರವಾಗಿ ಊಟಮಾಡಿ ಹಾಗೇ ಬಿಸಿಲಿನಲ್ಲಿ ಶಾಲೆಗೆ ಹೊರಟೆ. ಅವಳು ಅದನ್ನು ನೋಡಿ. "ಅಯ್ಯೋ ನಿನ್ನ ಅವಸರಕ್ಕೆ ಬೆಂಕಿಹಾಕಲಿ.... ಇಂಥಾ ಬೆಂಕಿಯಂಥಾ ಬಿಸಿಲ್ನಾಗೆ ಹಂಗೇ ಹೊಂಟ್ರೇ ತಲೆ ಸಿಡಿದರೇನು ಗತಿ. ಅಲ್ಲೇ ಕೊಡಿ ಐತಿ ತಗೊಂಡು ಹೋಗಬಾರದೇ! ಮತ್ತೆ ಹಣೇಬರಕ್ಕೆ ಮೇಸ್ಟ್ರು! ಇಂಥಾ ಮೇಸ್ಟ್ರು ಕೈಯಾಗ ಓದೋ ಹುಡುಗೂರು ಇನ್ನೆಂಥಾ ಶಾಣೆರಾದಾರು! ಅದ್ರಾಗೆ ಈಗಿರೋದು ಸಾಲ್ದೇ ಬಿಸಿಲಾಗೆ ತಿರುಗಾಡಿ ಇನ್ನೂ ಕರ‍್ರಗಾದ್ರೇ ಬೇಸೇನೋ........" ಎನ್ನಬೇಕೆ? ಅವಳಿಗಿಂತ ನಾನು ಕಪ್ಪು ಇದ್ದುದಕ್ಕೇ ಅವಳು ಈ ರೀತಿ ಹಂಗಿಸಿದ್ದು. ನನ್ನಲ್ಲಿ ಇದೊಂದು ಲೋಪ. ಅದನ್ನೇ ಆಗಲಿ ಅವಳು ಅಸಹ್ಯವಾಗಿ ಅನ್ನದೆ, ತಮಾಷೆಗಂದಿದ್ದರೆ. ನಾನು ಕೂಡ ತಮಾಷೆಯಾಗಿ ಉತ್ತರ ಕೊಡುತ್ತಿದ್ದೆ. ಈಗಲೂ ಹಾಗೆ ಕೊಡಲು ಹೊರಟಿದ್ದೆ....ಮತ್ತೆ ಈ ರುದ್ರಕಾಳಿಯು ಅವತಾ

ರದ ನೆನಪಾಗಿ ಅನಾಹುತವಾದೀತೆಂದುಕೊಂಡು, ತೆಪ್ಪಗೆ ಕೊಡೆ ತೆಗೆದುಕೊಂಡು ತಲೆಯೆತ್ತಿ ಅವಳನ್ನು ನೋಡಲಾರದೆ ಹೊರಟೆ. ಅವಳಿಂದ ಮಾತು ನನ್ನ ಹಿತದ್ದಿದ್ದರೂ ಅವಳು ಸುಮ್ಮನಿದ್ದಿದ್ದರೇ ಹೆಚ್ಚು ಹಿತವಾಗುತ್ತಿತ್ತೆ ನನಗೆ!

ಒಂದು ಸಲ ಅವಳ ಮೇಲಿನ ನನ್ನ ಪ್ರೇಮವನ್ನು ಅವಳಿಗೆ ತಿಳಿಸಲೋ ಎಂಬಂತೆ. "ಏನೇ, ಈ ದಿನ ಸಿನಿಮಾ ಬಹಳ ಒಳ್ಳೇದು ಬಂದಿದೆ, ಹೋಗೋಣವೇ?" ಎಂದೆ. ಸುಮ್ಮನಿದ್ದಿದ್ದರೇ ಮೇಲಾಗಿತ್ತೇನೋ! ಅದಕ್ಕೆ ಅವಳು: "ಅಯ್ಯೋ ನನ್ನ ಕೈಹಿಡಿದುಕೊಂಡು ಕರೆದುಕೊಂಡು ಹೋಗಬೇಕಂತಾ ಮಾಡಿಯೇನು? ಥೂ ಸಿನೀಮಾಂತೆ....ಅದರಾಗ ಬರೀ ಗಂಡು ಹೆಣ್ಣನ್ನು ಹಿಡಕೊಳ್ಳೋದೇ....ಥೂ ಮ್ಲೆ ಅದನ್ನು ನೋಡೋಕೆ ನಿನ್ನ ಜತೀಗೆ ಬರಬೇಕಲ್ಲೇ? ಸಾರ್ಥಕಾಯ್ತು ಇಂಗ್ಲೀಷ್ ಓದಿದ್ದು. ಸುಡುಗಾಡು ಅದನ್ನು ನೋಡಿದರೆ ಕಣ್ಣೇ ಹೋಗಿಬಿಡ್ತಾವಂತೆ. ನೀನೂ ನೋಡಬೇಡ ಮತ್ತೆ. ಸುಮ್ಮನೇ ಉಂಡು ನಿದ್ದೆ ಮಾಡಿದರೆ ಒಂದು ಹಬ್ಬ ಮಾಡಿದಂಗೆ. ಅಷ್ಟಕ್ಕೂ ನೀನೇನು ಮಹಾ ದುಡಿಯುತ್ತೀ....ಅದೇ ಮೂವತ್ತಾರು ರೂಪಾಯಿ ಅಲ್ವೇ? ಅಷ್ಟೂ ನಮ್ಮನಿಗೆ ತರಕಾರಿ....ತರಕಾರಿಗಾಗೋದಿಲ್ಲ. ಅದರಾಗೇ ಮತ್ತೆ ಇದೊಂದಾದರೆ ಬರಗಾಲದಾಗೇ ಅಧಿಕಮಾಸದಂಗೆ— ತೀರಿತು ಬಾಳುವೆ." ಎಂದು ಬಿಟ್ಳು. ಆಂದಿನಿಂದ ಇಂದಿನವರೆಗೂ ಅವಳನ್ನು ಸಿನಿಮಾಕ್ಕೆ ಕರೆದಿಲ್ಲ; ನಾನೂ ಹೋಗಿಲ್ಲ. ನಾನು ನೋಡುವುದಾದರೆ ಏನಾದರೂ ಕೆಲಸಕ್ಕೆಂದು ಪರಊರಿಗೆ ಹೋದಾಗಲೇ.

ಉಪಚಾರಕ್ಕೆ ಒಂದು ದಿನ, "ಏನೇ, ಆ ಸೀರಿಯನ್ನು ಬಯಸಿ ತರಿಸಿಕೊಂಡಿದ್ದೆ. ಒಂದು ದಿನಾದರೂ ಉಟ್ಟುಕೊಳ್ಳಲಿಲ್ವಲ್ಲೇ? ಅದು ನಿನಗೆ ಚನ್ನಾಗಿ ಒಪ್ಪುತ್ತೆ........" ಎನ್ನುತ್ತಿರುವಾಗಲೇ ಅವಳು: ನಿನಗ್ಯಾಕೆ ಹೆಂಗಸರ ಗೊಡವಿ? — ಆ ಸೀರೀ ಈ ಸೀರಿ ಅಂತ. ನಮಗ್ಗೊತ್ತಾಗೋದಿಲ್ವೇನು ನಮ್ಮ ಉಡುಪೂ ನಮ್ಮ ತೊಡಪೂ? ಹೆಂಗಸರಂಗೆ ಹೇಳ್ಲಿಕ್ಕೆ ಬರ್ತಾನೆ........ನಾಚಿಕೆ ಆಗೋದಿಲ್ವೇನೋ ಸ್ವಲ್ಪಾದ್ರೂ." ಎಂದಳು. ಹುಣುಸೇಹಣ್ಣು ತಿಂದ ಮಂಗನಂತಾಗಿ ಇನ್ನು ಅವಳ ಮುಖ ನೋಡಲೂ ನಾಚಿಕೆಯಾಗಿ, ಮನೆಬಿಟ್ಟು ಇಲ್ಲದ ಕೆಲಸ ಹುಡುಕಿಕೊಂಡು ಹೊರಹೊರಡುನಾಗ ಅವಳು ಮತ್ತೆ "ಎಲ್ಲಿಗೋಗ್ತಿ? ಗಿರಣಿಗೆ ಹೋಗಿ ಜೋಳನಾರ ಬೀಸಿಕೊಂಡು ಬರುಬಾ. ಆಗ್ಲೇ ಹೊರಟಿಲ್ಲಾ! ನಾಳೆ ಇನ್ನೂ ನೆಲ್ಲು

ಹಾಕಿಸಿಕೊಂಡು ಬರೋವದಾವೆ — ಹಸಮಾಡಿರ್ತೇನೆ ನಾಳೆ" ಎಂದು. ಗೃಹಕೃತ್ಯದಲ್ಲಿ ನಿರತನಾದೆ.

ನನಗೆ ಇನ್ನೊಂದು ಯೋಚನೆ ಹೊಳೆಯಿತು. ಸಾಮೋಪಾಯ ವಾಯ್ತು, ದಾನೋಪಾಯವಾಯ್ತು, ಸ್ವಲ್ಪ ಭೇದೋಪಾಯವನ್ನೂ ಪ್ರಯೋಗಿಸಿ ದಂಡೋಪಾಯದಿಂದಾದರೂ ದಾರಿಗೆ ತರಬೇಕೆಂದು.

ಅಂದು ಅನ್ನ ಮೆತ್ತಗಾಗಿತ್ತು. ಬೈದು ಹೆಚ್ಚಾಗಿ ಬೈಸಿಕೊಂಡೆ. ಆಮೇಲೆ "ಚಿಕ್ಕಂದಿನಲ್ಲಿ ನಿನ್ನನ್ನು ನನಗೆ ಮದುವೆಮಾಡಿರದಿದ್ದರೆ ಕೊಟ್ಟೊರೇಶಗೆ ಕಾಯಿ ಹೊಡೆಸುತ್ತಿದ್ದೆ. ನೋಡು ಜೋಡು ಜೋಡಾಗಿ. ಕೊನೆಗೆ ನಿನ್ನ ತಂಗಿಯನ್ನಾದರೂ ಮಾಡಿದ್ದಿದ್ದರೆ ಎಷ್ಟೋ ವಾಸಿ ಅವಳು ನೀನು ಕಡವ, ಒರಟು, ಗಂಡನೊಡನೆ ಹೇಗೆ ವರ್ತಿಸಬೇಕೆನ್ನೋದೇ ಗೊತ್ತಿಲ್ಲ. ನಿನ್ನ ತಂಗಿ ಎಷ್ಟು ಜಾಣೆ. ಅವಳ ಗುಣ ಎಳ್ಳಷ್ಟಾದರೂ ಇಲ್ಲ ನಿನ್ನಲ್ಲಿ." ಎಂದೇ ಬಿಟ್ಟೆ. ಅಷ್ಟುದಿನ ಸುಮ್ಮನಿದ್ದು ಅಂದು ನಾನು ಆ ರೀತಿ ಅಂದದ್ದಕ್ಕೆ ಅವಳು ದಂಗುಬಿದ್ದಾಳೆಂದು ಭಾವಿಸಿದ್ದೆ. ನಾನು ಮೊದಲೇ ಕೋಪಿಷ್ಠನಾದುದರಿಂದ ಮೊದಲೇ ನಿರ್ಧರಿಸಿದಂತೆ ಅನ್ನಲು ಪುಕ್ಕಾಗಲಿಲ್ಲ. ಅವಳು ನನ್ನ ಮಾತು ಮುಗಿದಕೂಡಲೇ ಸೆರಗನ್ನು ಟೊಂಕಕ್ಕೆ ಸಿಕ್ಕಿಸಿಕೊಂಡು ಗಡಗಡ ಬಂದು ನಾನು ಊಟಕ್ಕೆ ಕುಳಿತಿದ್ದರೂ ನನ್ನ ಮಗ್ಗಲಿಗೇ ಕುಕ್ಕುರುಗಾಲಿನಿಂದ ಕಳಿತಳು. ನನ್ನೆದೆ ಧಸಕ್ಕೆಂದಿತು. ನಾನೇನೋ ಧೈರ್ಯಸ್ಥ; ಧೈರ್ಯದಿಂದಲೇ ಹಾಗೆ ಅಂದಿದ್ದೆ. ಆದರೆ ಅವಳು ಹಾಗೆ ನನ್ನ ಹತ್ತಿರ ಕುಳಿತಕೂಡಲೇ ನನ್ನೆದೆ ಹಾಗಾಗಬಾರದಾಗಿತ್ತು, ಹೀಗೆ ನನ್ನದೆಯೇ ನನಗೆ ಮೋಸಮಾಡಬಾರದಾಗಿತ್ತು. ನಾನೇನೋ ಅವಳನ್ನು ಚನ್ನಾಗಿ ಒದೆಯಬಹುದು; ಒದೆಯಬಲ್ಲೆ. ಆದರೆ ಅವಳು ಒಂಬೇ ಒಂದು ಪೆಟ್ಟನ್ನಿಟ್ಟರೆ ಹೆಂಡತಿಯಿಂದ ಹೊಡೆಸಿಕೊಂಡ ಭಂಡ ಗಂಡ ನಾಗಲಾರೆನೇ ನಾನು? ಅಯ್ಯೋ, ಏಕಾದರೂ ಹಾಗೆಂದೆನಪ್ಪಾ, ಏಕಾದರೂ ಇವಳನ್ನು ತಡೆವಿ ಎನಿಸಿತ್ತು ಒಂದು ಕ್ಷಣ.

ಆದರೆ ಅವಳು ನನ್ನ ಮೇಲೆ ಕೈಯೆತ್ತಲಿಲ್ಲ. ಗಂಡನ ಮೇಲೆ ಕೈಯೆತ್ತಿದರೆ ಘೋರ ನರಕಕ್ಕೆ ಹೋಗುವಳಲ್ಲವೇ? ಆದ್ದರಿಂದ ಸಿಟ್ಟಿನಿಂದಲೇ ಕೈ ಚಾಚಿ ಚಾಚಿ ಸೆಟಸಿ ಸೆಟಸಿ ಮಾತಾಡಿದಳು. ಹಾಗೆ ಅವಳು ಮಾಡಿದಾಗ

ಅವಳ ಕೈ ನನ್ನ ಸೋಟಿಗೆ ಎರಡು ಮೂರು ಸಾರೆ ಬಡಿಯಿತು. ನಾನಾಗ ಉಣ್ಣುವುದನ್ನು ಬಿಟ್ಟು ಬಾಯಲ್ಲಿದ್ದುದನ್ನು ಜಗಿಯುತ್ತಾ ಅವಳನ್ನೇ ನೋಡುತ್ತಿದ್ದೆ. ಆಗ ಅವಳೆಂದಳು: "ಅಯ್ಯೋ ಕರೇ ಜೋಕುಮಾರಾ! ನಿನ್ನ ಕರೇ ಮುಖನೋಡಿ ನಾನೇನು ಮಳ್ಳಾಗಿದ್ದೇ ಅಂತ ತಿಳಕೊಂಡಿದ್ಯಾ? ನೀನೂ ಇಂಗ್ಲೀಷು ಓದಿರಬೌದು; ಅದ್ರಿಂದೇನು ಇಂಗ್ಲೀಸಿನೋರ ರಾಜ್ಯ ಪಡದಂಗಾತೇನು? ಓದದಂಗಿದ್ರೇ ಇನ್ನೂ ಹೊಲನಾರ ನೋಡಿಕೊಳ್ಳುತ್ತಿದ್ದೆಂಗೋ! ಎಲ್ಲಾ ಬಿಟ್ಟು ಅಷ್ಟು ಕರ್ಚುಮಾಡಿ ಅಷ್ಟು ಓದಿದೆಲ್ಲಾ ಏನು ಬಂದಂಗಾತು ಮಹಾ ಭಾಗ್ಯ! ಅದೇ ದುಡೀತೀಯಲ್ಲಾ ನಮ್ಮನೀ ಕರ್ಚಿಗೆ ವಾರಕ್ಕೂ ಸಾಲದ ಆ ಮೂವತ್ತಾರು ರೂಪಾಯ್ನು ಅಲ್ವೇ! ಪ್ಯಾಟಿಗೋಗಿ ಸುಮ್ನೆ ಅಂತಿಂಥಾ ಊಟಮಾಡಿ, ಲೋಲ ಹೊಡೆದು ಕಡ್ಡಿಯಂಗಾಗಿ ಬಂದೀರಿ–ನೋಡು, ಅದೇ ಲಾಭ. ಮತ್ತೆ ಮಾತಾಡ್ತಾನೆ–ನನ್ನಂಥಾವಳು ಸಿಕ್ಕಿರೋದು ಪುಣ್ಯ ಅನಕೊಳ್ವಲ್ಲಾ." ಎಂದು.

ನನಗಂತೂ ರೇಗಿ ಹೋಯ್ತು. ಅವಳು ದೂರವಾದರೂ ಕುಳಿತು ಅಷ್ಟು ಮಾತನಾಡಿದ್ದರೆ ನಾನು ನನ್ನ ಕೋಪವನ್ನು ನುಂಗಿ–ಕೊಳ್ತಿದ್ದೆ. ನನ್ನ ಮೇಲೆಯೇ ಕುಳಿತು ಸೋಟಿಗೆ ತಿವಿಯುತ್ತಾ ನುಡಿದರೆ ಯಾವ ಗಂಡ ಸುಮ್ಮನೇ ಕುಳಿತಾನಯ್ಯಾ? ಎಂಜಲಗೈಯಿಂದಲೇ ಜೋರಾಗಿ ಅವಳ ಎದೆಗೆ ಕೈಕೊಟ್ಟು ಹಿಂದೆ ನೂಕಿಬಿಟ್ಟೆ. ಅವಳು ಹಿಂದೆ ಕುಸಿಕುಳಿತು ಅಂಗಾತ ಬಿದ್ದುಬಿಟ್ಟಳು. ಅಲ್ಲಿಯೇ ಮಜ್ಜಿಗೆ ಕಡೆವ ಕಡೆಗೋಲು ಮಜ್ಜಿಗೆ ಕಂಬದಲ್ಲಿಯೇ ಇತ್ತು. ಅವಳ ಕೈಗೆ ಕಡೆಗೋಲು ಸಿಕ್ಕು ಅವಳು ಅದನ್ನು ಹಿಡಿದುಕೊಂಡು ಎದ್ದು ನಿಂತಳು. ನಾನು ತಕ್ಷಣವೇ ಎದ್ದು ಕಡಗೋಲನ್ನು ಕಸಿದುಕೊಳ್ಳದಿದ್ದರೆ ಅದು ನನ್ನ ತಲೆಗೆ ಮುದ್ದು ಕೊಡುತ್ತಿತ್ತೇನೋ! ಹಾಗೆ ಕಸಿದುಕೊಂಡು ಒಮ್ಮೆ ಜೋರಾಗಿ ಕಪಾಳಕ್ಕೆ ಹೊಡೆದೆ; ಮತ್ತೂ ರೋಷವೇರಿ ಇನ್ನೊಂದು ಕಪಾಳಕ್ಕೂ ಹೊಡೆದುಬಿಟ್ಟೆ. ಏಟುಗಳು ಬಿದ್ದಕೂಡಲೇ ಅವಳು ಗಟ್ಟಿಯಾಗಿ ಚೀರಿದಳು. ತಕ್ಷಣವೇ ಒಲೆಯಕಡೆ ನೋಡಿ, ಒಲೆಯಲ್ಲಿನ ಒಂದು ಕೊಳ್ಳಿ ತೆಗೆದುಕೊಂಡಳು. ಆದರೆ ಅದು ನಂದಿ ಇದ್ದಿಲಿಯಾಗಿತ್ತು. ಅದರಿಂದಲೇ ಅವಳು ಹೊಡೆಯುತ್ತಿದ್ದಳೇನೋ! ಆದರೆ ಅದು ಮೊಟಕಾಗಿತ್ತು. ಬೀಸಿಮಾತ್ರ ಹೊಡೆಯಲಿಲ್ಲ. ಆದರೆ ಆಕಡೆ ಸೌದೆಯೊಟ್ಟುವ ಮೂಲೆಯ ಮೇಲಣ ಗೂಡಿನಲ್ಲೇ ಮುದ್ದಿಮಾಡುವ ಮುದ್ದೆ

ಗೋಲಿತ್ತು. ಅದು ಅವಳ ಕೈಗೆ ಬರಬೇಕೆ? ಆಗನವಳು ನನ್ನಿಂದ ಸ್ವಲ್ಪ ದೂರವಾಗಿದ್ದಳು. ಅವಳ ಬಳಿ ಸರಿಯುವುದರೊಳಗೇ ಏಟು ಬಿದ್ದು ಬಿಡ ಬಹುದಿತ್ತು. ಸಮೀಪದಲ್ಲಿದ್ದಾಗ ಕಡಗೋಲು ಕಸಿದಂತೆ ಕಸಿದುಕೊಳ್ಳ ಲಾಗದಿರಲು ನಿರುಪಾಯನಾದೆ. ಹೆಂಡತಿಯಿಂದ ಹೊಡೆಸಿಕೊಳ್ಳುವಂಥಾ ಪ್ರಸಂಗ ಬಂತಲ್ಲಾ ಎಂದು ಅಳುವಂತಾಯಿತು. ತಕ್ಷಣವೇ ಹೊರಗೆ ಓಡಿ ಹೋಗುವ ಯೋಚನೆಯೂ ಮಿಂಚಿತು ಮನದಲ್ಲಿ. ಹೆಂಡತಿಯಿಂದ ಹೊಡೆಸಿ ಕೊಳ್ಳುವುದಕ್ಕಿಂತ ಓಡಿಹೋಗಿ ಅದನ್ನು ತಪ್ಪಿಸಿಕೊಳ್ಳುವುದೇ ಮೇಲು ಎಂದು ಕೊಂಡೆ. ಎಂಥಾ ಅವಮಾನ! " ಹೆಂಡತಿಗೆ ಹೆದರುವವ ಹೇಡಿ ಹೊಲೆಯ " ನೆಂದು ಹಾಡಿದ ಪುರಂದರ ದಾಸನು ನನ್ನ ಕಾಲಾನಂತರ ಹುಟ್ಟಿ ಹಾಡಬಾರ ದಿತ್ತೇ! ಇಲ್ಲದಿದ್ದರೆ ಅವನೇ ನನ್ನಂತಹ ಪ್ರಸಂಗಕ್ಕೆ ಸಿಕ್ಕಿಬಿದ್ದಿದ್ದರೆ ಎಂದೆಂದೂ ನಿಜವಾಗಿಯೂ ಹಾಗೆ ಹಾಡುತ್ತಿರಲಿಲ್ಲವೇನೋ!

ಅಂತೂ ನಾನು ಹೇಡಿಯಾಗಬಾರದೆಂದೋ ಏನೋ, ಅಷ್ಟರಲ್ಲೇ ಅವಳ ಚೀರುವಿಕೆಯನ್ನು ಕೇಳಿದ ನನ್ನ ತಾಯಿ ಆಮೇಲೆ ತಂದೆ ಒಳಗೆ ಧಾವಿಸಿ ಬಂದರು. ತಾಯಿ ಮೊದಲು ಓಡಿಹೋಗಿ ಅವಳ ಕೈಯಲ್ಲಿನ ಮುದ್ದೆ ಕೋಲನ್ನು ಕಸಿದುಕೊಂಡಳು. ತಂದೆಯು ಮನಸ್ಸಿನಲ್ಲಿಯೇ ನೊಂದು ಕೊಳ್ಳುತ್ತಾ, ಏನೂ ಮಾಡಲು ತೋಚದೆ ನಿರುಪಾಯನಾಗಿ ಸುಮ್ಮನೇ ಹೊರಗೆ ಹೋದ. ನನ್ನ ತಂದೆಗೆ ನನಗೆ ಸಮಾಧಾನ ಹೇಳಲೂ ಇಷ್ಟವಿಲ್ಲ; ಮುಖವಿಲ್ಲ. ಸೊಸೆಯನ್ನು ಬೈದ್ರೆ ಎದುರು ಪತ್ರಿ ಎಲ್ಲಿ ಏರುವುವೋ ಎಂಬ ಭಯ. ಅದರಿಂದಾಗಿ ಸುಮ್ಮನೇ ಹೊರಗೆ ಹೋಗಿಬಿಟ್ಟ. ತಾಯಿಗೆಲ್ಲಾ ಗೊತ್ತು ತನ್ನ ಸೊಸೆಯ ಸದ್ಗುಣ! ಸುಮ್ಮನೇ, ಅವಳನ್ನು ಬೈದ್ರೆ ಉಪಯೋಗ ವಿಲ್ಲವೆಂದು ನನಗೆ, " ಪೂರಾ ಉಂಡುಹೋಗು " ಎಂದಳು. ನನಗೆ ಅಷ್ಟಾ ದುದೇ ಸಾಕಾಗಿತ್ತು. ಉಳಿದುದಕ್ಕೆ ನೀರು ಹೊಯ್ದು ಹೊರಹೊರಟೆ. ನೀರು ಹೊಯ್ಯುವಾಗ ತಾಯಿ, " ಉಣ್ಣುವ ಎಡಿಗೆ ನೀರು ಹೊಯ್ಯಬಾರ್ದು " ಎಂದಳು. ನಾನು ಆಗ ಬರೀ ಎಡಿಗೇ ಏಕೆ ನನ್ನ ಬಾಳಿಗೂ ನೀರು ಹೊಯ್ದು ಬಿಡುವಂತಿದ್ದೆ.

ಮತ್ತೆ ಕೆಲದಿನಗಳಮೇಲೆ ಮೊದಲಿನ ಬಾಳುವೆ. ಅಂದಿನಿಂದ ನನ್ನ ಹೆಂಡತಿಯೂ, ನಾನು ಅವಳನ್ನು ಹೊಡೆದರೂ ತಿರುಗಿ ಹೊಡೆಯುವ ಗೋಜಿಗೇ ಹೋಗುವುದಿಲ್ಲ. ಬರೀ ಬಯ್ಯುವಳಷ್ಟೇ. ದೇವರೇ ಆದ ಗಂಡ

ನನ್ನು ಹೊಡೆದರೆ ಎಂಥಾ ಘೋರ ನರಕ ಪ್ರಾಪ್ತಿಯಾಗುವುದೆಂಬ ಅರಿವು ಅವಳಿಗೀಗ ಪೂರಾ ಬಂದಿದೆ. ಆದರೆ ಗಂಡನನ್ನು ಮನಸಿಗೆ ಬಂದಂತೆ ಬೈದರೆ ಯಾವ ಪಾಪವೂ ತಟ್ಟಲಾರದೆಂದು ತಿಳಿದಿದ್ದಾಳೋ ಅಥವಾ ಪುಣ್ಯ ಬರುವುದೆಂದು ತಿಳಿದಿದ್ದಾಳೋ ನನಗಂತೂ ತಿಳಿಯದು. ಅಂತೂ ಇದೇ ರೀತಿ ನಡೆದಿದೆ ನಮ್ಮ ಅನುದಿನದ ಚಲನ. ಮಾಡುವುದೇನು? 'ಪಾಲಿಗೆ ಬಂದದ್ದು ಪಂಚಾಮೃತ' ವೆಂದು ತಿಳಿದುಕೊಳ್ಳದಿರಲು ಸಾಧ್ಯವಾದೀತೇ? ಇಂಥಾ ಸ್ಥಿತಿಯು ನನಗೆ ನಮ್ಮ ಶ್ರೀ ನಾಗೇಶಶಾಸ್ತ್ರಿಗಳವರ "ಆ" ಮಾತು ಸಮಾಧಾನವನ್ನು ತಂದೀತೇ? ಹೊಟ್ಟೆಕಿಚ್ಚು ಉತ್ಪನ್ನವಾಯಿತಷ್ಟೇ ನನಗೆ. "ಇಪ್ಪತ್ತನೇ ಶತಮಾನದ ಮಹಾಕವಿಗಳೂ ಮೈಸೂರು ಮಹಾರಾಜರ ಆಸ್ಥಾನ ಕವಿಗಳು "ಕಲಾಪ್ರಪೂರ್ಣ" ಬಿರುದಾಂಕಿತರೂ ಸರ್ವದರ್ಶನತೀರ್ಥರೂ ಆದ ಶ್ರೀ ನಾಗೇಶಶಾಸ್ತ್ರಿಗಳವರು ಈ ರೀತಿ ಅಪ್ಪಣೆ ಕೊಡಿಸಿದ್ದಾರೆ. ಕಣೇ ನೀನೂ ಇನ್ನು ಮೇಲೆ ಹಾಗೆ–ಸಾಹಿತ್ಯಕ್ಕೆ ಮಾದರಿಯೋಪಾದಿಯಲ್ಲಿ–ಮಾತ ನಾಡೆ ನನ್ನ ಕಣ್ಮಣೀ" ಎಂದರೇನಾದರೂ ಸಾರ್ಥಕವಾಗಬಲ್ಲುದೇ? ಸಾರ್ಥಕ್ಯದ ಮಾತೇಕೆ? ಹಾಗೆಂದರೆ ಅವಳು ಅದಕ್ಕೆ ಬೈಗಳನ್ನು ತಾಳಿ ಕೊಳ್ಳುವ ತಾಳ್ಮೆಯಿದೆಯೇ ನನಗೆ? ಏನೋ! ನಾನು ಶಾಲೆ ಓದಿಸುವಾಗ ಚಿಕ್ಕ ಮಕ್ಕಳನ್ನು ಹೊಡೆಯುತ್ತಿರುತ್ತೇನೆ. ರಜಾದಿನಗಳಲ್ಲಿ ನನ್ನ ಕೈ ಚಪಲ ಬಹಳವಾಗುತ್ತಿರುವಾಗ ಹೇಗೆ ತೀರಿಸಿಕೊಳ್ಳಬೇಕೆಂಬ ಯೋಚನೆ ಯಲ್ಲಿರುವಾಗಲೇ ಇವಳು ಏನಾದರೂ ಅನ್ನುತ್ತಲೇ ಇರುತ್ತಾಳೆ; ನನ್ನ ಕೈಚಪಲವೂ ತೀರುತ್ತಲೇ ಇರುತ್ತದೆ. ಅವಳು ಹೇಗೆ ಅನ್ನುತ್ತಾಳೋ ಅರ್ಥಾತ್ ಬೈಯುತ್ತಾಳೋ ಹಾಗೇ ನಾನೂ ಹೊಡೆಯುತ್ತೇನೆ. ಇದೂ ರೂಢಿಯಾಗಿದೆ. ಅವಳಿಗೆ ಮೈಯುಂಡಿದೆ.

ಆದರೆ ನಾನು ಓದಿಸುವ ಹುಡುಗರನ್ನು ಕಂಡಾಗ ನನಗೂ ಅಂತಹ ಮಕ್ಕಳಾಗಬೇಕೆಂಬ ಬಯಕೆಯುಂಟಾಗುತ್ತದೆ. ಆದರೆ ಇನ್ನೂ ಮಕ್ಕ ಳಾಗಿಲ್ಲ. ಮುಂದೆ ಆದರೂ ಒಂದು ಭಯ; ಒಂದು ಭೀತಿ. ಕಾರಣ: ಮಕ್ಕಳು ಅವಳನ್ನೇ ಹೊತ್ತುಬಿಟ್ಟರೆ! ರೂಪದಿಂದ ಹೊತ್ತರೆ ಪರವಾಯಿಲ್ಲ; ರೂಪ ಬಿಟ್ಟು ಬೇರೆಲ್ಲಾದರಿಂದ ಹೊತ್ತರೆ! ಇದನ್ನು ನೆನೆಸಿಕೊಂಡು ಬಿಟ್ಟರೆ ಮಕ್ಕ ಳಾಗದಿರುವುದೇ ಮೇಲೆನಿಸುತ್ತದೆ. ಆದರೆ ಅಂದುಕೊಂಡಂತೆ ಆಗುವುದು ಸಾಧ್ಯವೇ? ಏನಾಗುವುದೋ ಮುಂದೆ ನೋಡಿದರಾಯಿತು. ಏನವಸರ?

# ಪುರುಷಾಭರಣ

ನಮ್ಮ ಹಿಂದೂ ಸಮಾಜದಲ್ಲಿ ಯಾವ ಜಾತಿಯ ಹೆಣ್ಣನ್ನು ನೋಡಿದರೂ 'ಇವಳ ಅವಸ್ಥೆ ಇಂತಹದು' ಎಂದು ಧಾರಾಳವಾಗಿ ಹೇಳಬಹುದು—ಅವಳ ಉಡುಗೆ ತೊಡುಗೆ ಮತ್ತು ಕೆಲವು ವಿಶಿಷ್ಟವಾದ ಆಭರಣಗಳಿಂದ. ಚಿಕ್ಕ ಹುಡುಗಿಯನ್ನು ನೋಡಿದರೂ ಸಾಮಾನ್ಯವಾಗಿ ಕಿವಿಯಲ್ಲಿ ಲೌಲಾಕು, ಮೂಗಿನಲ್ಲಿ ಮುಖಬೊಟ್ಟು, ಕೊರಳಲ್ಲಷ್ಟು ಸರ, ಕೈಗಳಲ್ಲಿ ತರತರಹದ ಬಳೆಗಳು—ಗಾಜಿನ ಮತ್ತು ಬಂಗಾರದವು ಕೂಡಾ, ಕಾಲುಗಳಲ್ಲಿ ಕಾಲುಕಡಗ, ಚೈನ, ಕಾಲುಂಗುರ, ತೋಡೇವು ಮತ್ತು ಪಿಲ್ಲಿಗಳನ್ನು ಕಾಣಬಹುದು. ಹೆಂಗಸರು ಸದಾ ಆಭರಣಭರಿತರಾಗಿರಬೇಕೆಂಬುದು ಒಂದು ವಿಧಿ ಇದ್ದಂತಿದೆ. ಇದು ಬಹುಶಃ ಪುರುಷನು, ಸೌಂದರ್ಯದೇವತೆಯಾದ ಸ್ತ್ರೀಯ ರೂಪಕ್ಕೆ ಚೌಕಟ್ಟಿನೋಪಾದಿಯಲ್ಲಿ ಈ ಆಭರಣಗಳನ್ನೆಲ್ಲಾ ಇಡಿಸಿದ ಮೇಲೆ ಇಮ್ಮಡಿಸುವ ಅವಳ ಸೌಂದರ್ಯವನ್ನು ಕಣ್ಣಾರೆ ಸವಿಯಲೋಸುಗ ಮಾಡಿದ ವಿಧಿ ಇರಬಹುದೆಂದೆನಿಸುತ್ತದೆ—ಸ್ವಲ್ಪ ಆಳವಾಗಿ ಯೋಚಿಸಿದರೆ. ಸ್ತ್ರೀಯ ಹಣೆಯಲ್ಲಿ ಕುಂಕುಮದ ಬೊಟ್ಟಿರದಿದ್ದರೆ ಮತ್ತೆ ಬಳೆ ಮೂಗುತಿತಾಳಿಗಳಿರದಿದ್ದರೆ ಅವಳು ವಿಧವೆಯೆಂದು ಕಂಡಕೂಡಲೇ ತಿಳಿದುಬಿಡಬಹುದು. ಕುಂಕುಮ ಬಳೆ ಮೂಗುತಿಗಳು ಸಾಮಾನ್ಯವಾಗಿ ವಿಧವೆಯರಲ್ಲದ ಎಲ್ಲರಿಗೂ ಇರುತ್ತವೆ. ಹಾಗೆ ಇವೆಲ್ಲಾ ಇದ್ದು ಕೊರಳಲ್ಲಿ ತಾಳಿಯಿರದಿದ್ದರೆ (ಯುವತಿಯಾಗಿದ್ದರೆ!) ಅವಳಿನ್ನೂ ಕನ್ಯೆ ಅರ್ಥಾತ್ ಲಗ್ನವಾಗದವಳೆಂದು ತಿಳಿದುಕೊಳ್ಳುವುದು ಅತೀ ಸುಲಭ. ಕೆಲವು ಜಾತಿಗಳಲ್ಲಿ ವೇಷದಿಂದಲೇ ವಿಧವೆಯೆಂದು ತಿಳಿಯಬಹುದು. ಒಟ್ಟಿನಲ್ಲಿ ಸ್ತ್ರೀಯ ಅವಸ್ಥೆಯ ಮೇಲಿಂದಲೇ ಇವುಗಳ ಬಳಕೆಯಾಗಬೇಕಾದ್ದರಿಂದ ಇವು ಸ್ತ್ರೀ ವೈಶಿಷ್ಟ್ಯೋಪಯೋಗಿಗಳು.—

ಆದರೆ ಪುರುಷನಿಗೆ ಈ ರೀತಿ ಆಭರಣಗಳ ಭಾರವನ್ನು ಹೊರುವ ಅವಶ್ಯಕತೆಯಿಲ್ಲ. ಎನೋ ಚಿಕ್ಕ ವಯಸ್ಸಿನಲ್ಲಿ ಹಿರಿಯರು ಕಿವಿ ಕಾಲುಗಳಲ್ಲಿ ಮಾತ್ರ ಏನೇನೋ ಹಾಕುತ್ತಾರೆ; ಆದರೆ ಸ್ವಲ್ಪ ದೊಡ್ಡವನಾದರೆ ಸಾಕು

ತೆಗೆದುಬಿಡುತ್ತಾರೆ. ಬಹುಶಃ ಇವನು ದುಡಿದುಹಾಕುವ ಪ್ರಾಣಿ ಎಂದು ಇವನಿಗೆ ಈ ವಿಧಿಯು ಅಂಟಿರಲಿಕ್ಕಿಲ್ಲ. ದುಡಿಯುವವ ಹೊರಗಡೆ ತಿರುಗಾಡಲೇ ಬೇಕಾದುದರಿಂದ ಕಳ್ಳ-ಕಾಕರ ಭಯವೊಂದು; ಮತ್ತೆ ವ್ಯಾಪಾರದ ಗೊಂದಲದಲ್ಲಿ ಭಾರವಾಗಿ ತೊಂದರೆ ಕೊಡುತ್ತಿರುತ್ತದೆಂದು ಇವಕ್ಕೆ ನಿಷೇಧವಿರಬಹುದು. ಊರಲ್ಲೇ ದುಡಿಯುವವರು ಕೆಲವು ಆಭರಣಗಳನ್ನು ಧರಿಸುತ್ತಾರೆ. ಆದರೆ ಅವು ಯಾವ ವೈಶಿಷ್ಟ್ಯತೆಯನ್ನೂ ಪಡೆದಿಲ್ಲ. ಕೊರಳಲ್ಲಿ ತೆಳುವಾದ ಒಂದೇ ಎಳೆಯ ಚೈನು, ಕಿವಿಗಳಲ್ಲಿ ಮುತ್ತಿನ ಅಂತುಂಟಿ ಇಲ್ಲವೇ ಹರಳಿನ ಕಡುಪು. ಕೈಯಲ್ಲಿ ಪೌನ್ಸ್ ಮತ್ತು ಬೆರಳುಗಳಲ್ಲಿ ಉಂಗುರಗಳು ಇಷ್ಟೆ ಇವರು ಧರಿಸುವ ಆಭರಣಗಳು. ಇಂಥಾ ಒಡವೆ ವಸ್ತ್ರಗಳ ಮೇಲಿಂದಲೂ ಹಣೆಗೆ ಹಚ್ಚುವ ವಿಭೂತಿಗಂಧಗಳಿಂದಲೂ– ಇವುಗಳನ್ನು ಜಾತಿಯ ಎಂಥವರೂ ಹಚ್ಚಬಹುದು, ಧರಿಸಬಹುದಾದ್ದರಿಂದ– ಇವನು ಮದುವೆಯಾದವನೇ–ಆಗದವನೇ, ವಿಧುರನೇ – ಮಡದಿಯುಳ್ಳವನೇ ಒಂದೂ ಗೊತ್ತಾಗುವುದಿಲ್ಲ. ಇವನು ನಿರಾಭರಣನಾಗಿಯೂ, ಇರಬಹುದು – ಜಾತಿಯ ವೈಶಿಷ್ಟ್ಯದ ಚೌಕ ಮೊದಲಾದುವನ್ನು ಬಿಟ್ಟು; ಆಭರಣಗಳನ್ನು ಹಾಕಿದರೂ ಹಾಕಿಕೊಳ್ಳಬಹುದು.

ಆದರೆ ಹೆಂಗಸರು ಮಾತ್ರ ಆಭರಣಗಳನ್ನು ಹಾಕಿಯೇ ತೀರಬೇಕು. ದುಡಿದು ದಣಿದ ಗಂಡಸರು ಆ ಸೌಂದರ್ಯ ದೇವತೆಗಳನ್ನು ದರ್ಶಿಸಿ ತಣಿಯಲೋಸುಗ ಸಮಾಜದ ವಿಧಿಯೋ ಏನೋ! ಇದರಿಂದ ಪುರುಷನು ಸ್ತ್ರೀಯ ಆರಾಧಕನೆಂದೂ ಧ್ವನಿತವಾಗುತ್ತದೆ; ಆದ್ದರಿಂದ ಹೆಂಗಸರಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಂತಾಯಿತು. ಆದರೆ ವಿಚಾರಿಸಿ ನೋಡಲು ಅವಳಿಗೆ ಅವಸ್ಥೆಗೊಂದೇ ಬೆಲೆ. ವಿಧವೆಗೆ ಇಷ್ಟಪಟ್ಟ ಆಭರಣಗಳನ್ನು (ಕೆಲವನ್ನು ಮಾತ್ರ) ಹಾಕಲು ಸ್ವಾತಂತ್ರ್ಯವಿಲ್ಲ. ಆದರೆ ವಿಧುರನು ಹೇಗೆ ಬೇಕಾದರೂ ಇರಬಹುದು. ಏನು ಬೇಕಾದರೂ ಮಾಡಬಹುದು, ಎಂಥ ಆಭರಣಗಳನ್ನಾದರೂ ಇಡಬಹುದು. ಇದರಿಂದಂತೂ ಪುರುಷನು ಸ್ತ್ರೀಯನ್ನು ಪಂಜರದ ಗಿಳಿಯನ್ನಾಗಿಟ್ಟದ್ದಾನೆನ್ನುವದು ಪ್ರತ್ಯಕ್ಷವಾಗಿ ಗೋಚರವಾಗುತ್ತದೆ. ಪಂಜರದ ಗಿಣಿಯ ಮೇಲೆ ಸಾಕಿದವನ ಪ್ರೀತಿ ಅಪಾರವಾಗಿದ್ದರೂ ಅದಕ್ಕೆ ವ್ಯಕ್ತಿಸ್ವಾತಂತ್ರ್ಯವಿಲ್ಲವೆನ್ನುವುದು ಸರ್ವರಿಗೂ ವಿದಿತವಾದ ವಿಷಯವಲ್ಲವೇ? ಈ ರೀತಿಯ ಕಟ್ಟಳೆಯಿಂದ ಆಭರಣರಹಿತಳಾಗಿರುವ ಬಾಲವಿಧವೆಯನ್ನು

ನೋಡಿದಾಗ ಸಿರದ ನರಗಳುಬ್ಬಿಹೋಗುತ್ತವೆ. ಅಂಥಾ ಬಾಲೆಗೆ– ಇಟ್ಟು ಕೊಂಡು ನಲಿಯುವ ಬಾಲೆಗೆ– ಆ ಭಾಗ್ಯವಿಲ್ಲದದನ್ನು ಕಂಡರೆ ಹೃದಯ ವಿದ್ಧವರಿಗೆ ಸಂಕಟವಾಗದಿದ್ದೀತೇ? ಪುರುಷನು ಮಾತ್ರ ಮೂರು ಬಾರಿ ವಿಧುರನಾದರೂ ಯಾವ ಕುಂದು ಕೊರತೆಯಿಲ್ಲದೆ ಮದುಮಗನಂತೆ ಮೆರೆಯ ಬಹುದು; ಆದರೆ ಸ್ತ್ರೀಯು ಒಂದೇ ಸಾರೆ ಅದು ಹೇಗಾದರೂ ಹೇಗಾಗಿದ್ದರೂ ವಿಧವೆಯೆಂದಾಯಿತು, ಅವಳು ಸಾಯುವವರೆಗೂ ಗೋಳಾಡಬೇಕು.

ಹೆಂಗಸಿನ ಅವಸ್ಥೆಯನ್ನು ತಿಳಿಸಲು ವಿಶಿಷ್ಟವಾದ ಆಭರಣಗಳು ಅವರಿಗೆ ಹೇಗಿದೆಯೋ ಹಾಗೆಯೇ ಗಂಡಸಿನ ಅವಸ್ಥೆಯನ್ನು ತಿಳಿಸಲೋಸುಗ ಇವನಿಗೂ ವಿಶಿಷ್ಟವಾದ ಆಭರಣಗಳು ಅತ್ಯಾವಶ್ಯಕ. ನೋಡಿದ ಕೂಡಲೇ, ಕೇಳದಲೇ– ಕೇಳಿದರೆ ಅಮಂಗಲವಾಗಬಹುದು, ಅಭಾಸವಾಗಬಹುದು, ತೊಂದರೆಯಾಗಬಹುದು, ದುಃಖವಾಗಬಹುದು—ಇವನು ಲಗ್ನವಾಗದವ, ಆದವ, ವಿಧುರ ಎಂಬುದು ಝಟ್‌ಪಟ್ ಹೊಳೆಯುವಂತೆ ಇವನಿಗೂ ಕೆಲವು ವಿಶಿಷ್ಟವಾದ ಆಭರಣಗಳನ್ನು ಧರಿಸಲು ಸಮಾಜವು ವಿಧಿಸಬೇಕು. ಕೆಲವು ಜಾತಿಗಳಲ್ಲಿ ಲಗ್ನವಾದ ಗಂಡಸು ಕಾಲಿಗೆ ಬೆಳ್ಳಿಯ ಬೇಡಿಯನ್ನೋ, ಕಾಲು ಬೆರಳಿಗೆ ಕಾಲುಂಗರವನ್ನೋ ಇಡುವ ರೂಢಿ ಇದೆ. ಆದರೆ ಅದು ಅದರ ಲ್ಲಿಯೇ ಕೆಲವು ಜಾತಿಗಳಲ್ಲಿ ತಿಂಗಳೆರಡು ತಿಂಗಳು ಮಾತ್ರವೆಂದು ನನಗೆ ತಿಳಿದುಬಂದಿದೆ. ಪ್ರಖ್ಯಾತ ಶ್ರೇಷ್ಠಕುಲವಾದ ವೀರಶೈವರಲ್ಲೂ ಲಗ್ನವಾಗು ವಾಗ ವೀಳೆಯದೆಲೆ, ಅರಸಿಣಕೊಂಬು ಮೊದಲಾದುವುಗಳನ್ನು ಬಲಗೈಗೆ ಕಂಕಣವೆಂದು ಕಟ್ಟುತ್ತಾರೆ. ಆದರೆ ಅದು ಮೂರೇ ದಿನವಿರಬೇಕೆಂಬ ವಿಧಿಯೂ ಇದೆ. ಆಮೇಲೆ ಅದನ್ನು ಲಗ್ನದ ಬಾಗಿಲಲ್ಲಿ ಹೂಳಿರುವ ಹಸುರು ಹಾಲುಗಂಬಕ್ಕೆ ಕೊಬ್ಬರಿ ಬಟ್ಟಲು ಸಹಿತ ಕಟ್ಟಬಿಡುತ್ತಾರೆ. ಆದರೆ ಈಗ ಸಮಾಜವು ವಿಧಿಸಬೇಕಾಗಿರುವುದು ಇಂತಹ ತಾತ್ಕಾಲಿಕ, ಅಸಮಂಜಸ ಸೂಚಕಗಳನ್ನು ಧರಿಸಿಕೊಳ್ಳಬೇಕೆಂದಲ್ಲ; ಸ್ಥಿರವಾಗಿ ನಿಲ್ಲತಕ್ಕವುಗಳನ್ನು, ಆಯಾ ಅವಸ್ಥಾಂತದವರೆಗೂ ಧರಿಸಿಕೊಳ್ಳಬೇಕೆಂದು ವಿಧಿಸಬೇಕೋ, ವಿಧಿ ಸಿಯೇ ತೀರಬೇಕು ಮತ್ತೆ. ಇಲ್ಲದಿದ್ದರೆ ಅಂತಹ ಸ್ವಚ್ಛಂದ ಮತ್ತು ಗುಟ್ಟಿನ ವೃತ್ತಿಯಿಂದ ಎಷ್ಟೋ ಮೋಸಗಳೂ ಅನಾಹುತಗಳೂ ಆಗುವುದು ನಿಜ. ಹೀಗಾದರೆ ಅವೆಲ್ಲಾ ತಪ್ಪೇ ತಪ್ಪುವುವು ಎಂಬುವುದಂತೂ ನಿಜಕ್ಕೂ ನಿಜ.

ದುಡಿವ ಗಂಡಸಿಗೆ ಯಾವ ವಿಧದಿಂದಲೂ ತೊಂದರೆಯಾಗದಂತಿದ್ದ ರಾಯಿತು—ಅವನ ಅವಸ್ಥೆ ಸೂಚಕಗಳಿಂದ. ಚಿಕ್ಕ ಪ್ರಮಾಣದವೂ ಸುಲಭ ಬಳಕೆಯವೂ ಆಗಿದ್ದರಂತೂ ತೊಂದರೆಯೇ ಇಲ್ಲವಲ್ಲಾ!

ಲಗ್ನವಾಗುವಾಗಲೇ, ವರನು ವಧುವಿಗೆ 'ತಾಳಿ' ಕಟ್ಟುವಾಗಲೇ, ವಧುವೂ ವರನಿಗೊಂದು 'ತಾಳ' ಕಟ್ಟಬೇಕು ('ತಾಳಿ' ಸ್ತ್ರೀಲಿಂಗ; ಅದರ ಪುಲ್ಲಿಂಗವೇ 'ತಾಳ'), ಆದರೆ ಈ 'ತಾಳ'ವು 'ತಾಳಿ'ಯಂತೆ ಮಣಿಗಳಿಂದೊಡ ಗೂಡಿರದಿದ್ದರೂ ಪೂರಾ ಬಂಗಾರದ ಎಳೆಯಿಂದಲೇ ಮಾಡಲ್ಪಟ್ಟು, ಮಧ್ಯ ದಲ್ಲಿ ಮಾತ್ರ 'ತಾಳಿ'ಯಂತೆ ಬಟ್ಟಲುಗಳೆರಡಿರಬೇಕು. ಈ 'ತಾಳ'ದ ಬಟ್ಟಲುಗಳು 'ತಾಳಿ'ಯವಂತೆ ತೀರಾ ತಗ್ಗಾಗಿರದೆ ಬೈಲಾಟದಲ್ಲುಪಯೋಗಿ ಸುವ ತಾಳಗಳೋಪಾದಿಯಲ್ಲಿದ್ದರೂ ಪರವಾಯಿಲ್ಲ. ಈ 'ತಾಳ' ವಿಲ್ಲದಿದ್ದರೆ ವಿಧುರನೆಂದಾದರೂ ತಿಳಿದುಕೊಳ್ಳಬಹುದಾಗುತ್ತದೆ ಇಲ್ಲವೇ ವರ ಅರ್ಥಾತ್ ಲಗ್ನವಾಗದವನೆಂದಾದರೂ ಅರಿತುಕೊಳ್ಳಬಹುದಾಗುತ್ತದೆ. ಆದ್ದರಿಂದ ಇವನಿಗೆ ಇನ್ನೊಂದೇ ಒಂದು ವಿಶಿಷ್ಟಕೆಲಸ ಹಚ್ಚಿದರೆ—ಇವೆರಡರ ಮೇಲಿಂ ದಲೇ ಎರಡೇ ಹಳಿಗಳ ಮೇಲೆ ನಡೆವ ಹೊಗೆಬಂಡಿಯಂತೆ ಇವನ ಅವಸ್ಥೆ ಗಳನ್ನು ಕಂಡುಹಿಡಿದ ಕೆಲಸವನ್ನು ನಡೆಸಿಬಿಡಬಹುದು. ಅದೇನಂದರೆ ಮುತ್ತೈದೆ ಹೆಂಗಸರು ಕೆಂಪು ಕುಂಕುಮ ಹಚ್ಚುವಂತೆ ಇವನು ಹಸುರು ಕುಂಕುಮವನ್ನು ತನ್ನ ಎರಡು ಹುಬ್ಬುಗಳ ಸಂದಿನಲ್ಲಿ ಹಚ್ಚಿಕೊಳ್ಳಬೇಕು. ಈ ಹಕ್ಕನ್ನು ವರ ಅರ್ಥಾತ್ ಮದುವೆಯಾಗದವನಿಗೆ ಮತ್ತು ಮದುವೆಯಾಗಿ ಹೆಂಡತಿಯುಳ್ಳ ಮುತ್ತೈದೆ ಗಂಡಸಿಗೆ ಮಾತ್ರ ಕೊಡಬೇಕು. ಹಾಗಾದರೆ ಹಸುರು ಕುಂಕುಮವಿದ್ದು 'ತಾಳ' ವಿಲ್ಲದವನು, ವರನೆಂತಲೂ, ಎರಡೂ ಇದ್ದವನ್ನು ಮುತ್ತೈದನೆಂತಲೂ ಮತ್ತು ಎರಡೂ ಇಲ್ಲದವನು ವಿಧುರನೆಂತಲೂ ಸುಲಭವಾಗಿ ತಿಳಿದುಕೊಳ್ಳಬಹುದು. ಇಷ್ಟಾದರೆ ಎಲ್ಲರಿಗೂ ಅನುಕೂಲತೆ ಯುಂಟಾಗಿ, ಅದರಲ್ಲಿ ಸಮಾನತೆ ಸಿಕ್ಕಂತಾಗಿ ಎಲ್ಲರಿಗೂ—ಮೊದಲು ಹೆಂಗಸ ರಿಗೆ—ಸಮಾಧಾನವಾಗಿ ನೆಮ್ಮದಿಯುಂಟಾಗುತ್ತದೆ. 'ಆ ಕಾಲ' ಬೇಗ ಬರ ಲೆಂದು ಹೆಂಗಸರೆಲ್ಲರೊಡನೆ ನಾನೂ ಬಯಸುತ್ತೇನೆ: 'ಆಕಾಲ ಬೇಗ ಬರಲಿ.'

# ಕೊಟ್ಟೂರ್ ಟ್ರೇನ್

ನಮ್ಮೂರ ಟ್ರೇನಿನಂಥಾ ವೇಗದ ಇನ್ನೊಂದು ಟ್ರೇನು ಜಗತ್ತಿನ ಯಾವ ಎಂಥಾ ಮೂಲೆ ಹುಡುಕಿದರೂ ಸಿಗಲಿಕ್ಕಿಲ್ಲ! ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ್ಗೆ ಬಳ್ಳಾರಿಯಲ್ಲಿ ಇಂಥಾ ವೇಗಕ್ಕೆ ರಾಯದುರ್ಗದ ಟ್ರೇನಿನ ಉದಾಹರಣೆ ಕೊಡುತ್ತಿದ್ದರು. ಆದರೆ ಅದು ಕೇವಲ ಕೂಪಮಂಡೂಕದಂತೆ–ತಮ್ಮದೊಂದನ್ನೇ ಕಂಡು ಅದೇ ಅದು ಎಂದು ಹೆಸರು ಕೊಟ್ಟು ವರ್ಣಿಸಿಕೊಂಡರೇನು ಬಂತು? ಅವರೇನಾದ್ರೂ ನಮ್ಮೂರ ಟ್ರೇನ್ ನೋಡಿದ್ದಾರೆಯೇ? ಎಂಥೆಂಥಾ ಎಕ್ಸ್‌ಪ್ರೆಸ್, ಪಂಜಾಬ್ ಮೇಲ್‌ಗಳಿಗೆ ನಮ್ಮ ಟ್ರೇನಿನ ವೇಗವಿಲ್ಲ!—ಅಂಥಾ ಟ್ರೇನ್ ಕೊಟ್ಟೂರ್ ಟ್ರೇನ್! ನಮ್ಮ ಜನರ ಮಾತಿನಲ್ಲಿ ಕೊಟ್ಟೂರ ಗಾಡಿ.

ಚಿಕ್ಕ ಪ್ರಮಾಣದ ಅತೀ ಕಡಿಮೆ ವೇಗದ ಒಡ್ಡರ ಬಂಡಿಯನ್ನು ನಮ್ಮೂರ ರೈಲಿಗೆ ಹೋಲಿಸ ಹೋಗುತ್ತಾರೆ ನಮ್ಮ ರೈತರು. ಆದರೆ ಪರ ಪ್ರದೇಶದವರು ಈ ಹೋಲಿಕೆಯನ್ನು, ಮದುವೆಯ ಮೆರವಣಿಗೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೆಟ್ರೋಮ್ಯಾಕ್ಸ್ ಲೈಟುಗಳನ್ನು ಹಚ್ಚಿದಾಗ ಹಗಲಿದ್ದಂತಿತ್ತೆಂದು ಸೂರ್ಯನಿಗೆ ಹೋಲಿಸುವಂತೆಯೇ ಇದೂ ಇರಬಹುದೆಂದು ಅರ್ಥ ಮಾಡಿಕೊಂಡರೆ ನಮ್ಮದೇನೂ ಅಭ್ಯಂತರವಿಲ್ಲ.

ನನ್ನ ಸ್ನೇಹಿತನೊಬ್ಬ ಕವಿ; ಆಧುನಿಕ ಕವಿ. ಕವನಗಳನ್ನು ಚೆನ್ನಾಗಿಯೇ ಬರೆಯುತ್ತಾನೆ. ನಾವೆಲ್ಲಾ ಅವನನ್ನು ತುಂಬಾ ಮೆಚ್ಚಿಕೊಂಡಿದ್ದೇವೆ ಮತ್ತು ಎಲ್ಲರೂ ಸೇರಿ ಅವನ ಕವನ ಸಂಗ್ರಹವೊಂದನ್ನು ಪ್ರಕಟಿಸಲು ಒಪ್ಪಿಕೊಂಡಿದ್ದೇವೆ. ಅವನು ಸ್ವತಂತ್ರ ಮನೋವೃತ್ತಿಯವನು. ಪರರೊಡ್ಡವದ ರೀತಿ ಹಿಡಿಯುವದೊತ್ತಟ್ಟಿಗಿರಲಿ—ಲಿಪಿಯನ್ನೇ ಹೊಸದಾಗಿ ಸ್ವಂತ ತಯಾರಿಸಬೇಕೆನ್ನುವವ. ಏನೋ ನಮ್ಮ ಬೋಧನೆಗೆ ಬೆಲೆಕೊಟ್ಟು, 'ಹೊಸ ಲಿಪಿ ಮಾಡಿದರೆ ಅದನ್ನು ಕಲಿತು ಓದುವವರಾರು? ಅದಕ್ಕೆಷ್ಟು ಕಾಲ ಬೇಕಾದೀತು? ಒಂದು ವೇಳೆ ಜನರ ಮನಸ್ಸು ತನ್ನ ಲಿಪಿಯಮೇಲೆ

ಪ್ರಸನ್ನವಾಗದಿದ್ದರೆ ತಾನು ಬರೆದದ್ದೆಲ್ಲಾ ವ್ಯರ್ಥವಾದೀತೆಂದು ಕೈಬಿಟ್ಟಿದ್ದಾನೆ. ಆದರೆ ಹೊಸ ಹೊಸ ಶಬ್ದಗಳನ್ನೇ ಆವಿಷ್ಕಾರ ಮಾಡಿ ತನ್ನ ಕವಿತೆಗಳಲ್ಲಿ ಸೇರಿಸಿದ್ದಾನೆ ಆ ಮಹಾತ್ಮ. ಅದರಲ್ಲೊಂದು ನಮ್ಮ ಟ್ರೇನಿಗೆ ಅರ್ಥಾತ್ ಗಾಡಿಗೆ ಸಂಬಂಧಿಸಿದ್ದು. ಪೂರ್ವ ಕವಿಗಳು ಅಂದರೆ ಟ್ರೇನಿಗಿಂತ ಮೊದಲು ಹುಟ್ಟಿದ್ದ ಕವಿಗಳು ತಮ್ಮ ಕಾವ್ಯಗಳಲ್ಲಿ ಮೆಲ್ಲಗೆ ಗತ್ತಿನಿಂದ ನಡೆವ ಸುಂದರ ಸ್ತ್ರೀಯರನ್ನು 'ಗಜಗಮನೆ', 'ಮಂದಗಮನೆ' ಎಂದು ಮುಂತಾಗಿ ವರ್ಣಿಸಿದ್ದಾರೆ. ಆದರೆ ನಮ್ಮ ಕವಿಯು ಮಂದವೆಂದರೆ ಎಂಥಾ ಮಂದ ಎಷ್ಟು ಮಂದ ಅಥವಾ ಅಳಕಗಮನಿಯರುಂಟೇ ಎಂಬ ಸಮಸ್ಯೆಯನ್ನೊಡ್ಡಿ, ಮತ್ತೆ ಪರಿಹಾರ ಪೂರ್ವಕವಾಗಿ– ಎಷ್ಟು ಸಾವಕಾಶ ಎಂಥಾ ಗತ್ತೆಂಬುದು ಉಪಮಾನದಿಂದ ತಕ್ಷಣವೇ ತಿಳಿವಂತಿರಬೇಕೆಂದು **'ಕೊಟ್ಟೂರಗಾಡಿಗಮನೆ'** ಎಂದು ವರ್ಣಿಸಿದ್ದಾನೆ. ಎಂಥಾ ಪ್ರತಿಭೆ! ಇವನಿಗೊಂದು ಉತ್ತಮ ಬಿರುದು ಕೊಡಬೇಕೆಂದೂ ಇದ್ದೇವೆ. ಇವನ ಈ ಉಪಮಾನ ವಿಶ್ವಸಾಹಿತ್ಯದಲ್ಲಿ ಗಣ್ಯವಾದರೆ ನಮ್ಮ ರೈಲಿನ ಕೀರ್ತಿ ವಿಶ್ವವ್ಯಾಪಿಯಾಗುತ್ತೆ! ಹೀಗುಂಟು ನಮ್ಮ ರೈಲಿನ ಉಜ್ವಲ ಭವಿಷ್ಯ! ಹೀಗಿರಲು ಇದಕ್ಕೆ ಸರಿಸಮಾನವುಂಟೇ!

ನಮ್ಮ ಇನ್ನೊಬ್ಬ ಸ್ನೇಹಿತನಿಗೆ ನಮ್ಮ ರೈಲಿನ ದಾರಿಯಲ್ಲೇ ಇರುವ ಗುಂಡಾ ಜಂಕ್‌ಷನ್ನಿನಲ್ಲಿ [ಇದೇ ನಮ್ಮ ರೈಲು ದಾರಿಯ ಮಹಾ ಜಂಕ್ಷನ್] ಅರ್ಜಂಟ್ ಕೆಲಸವಿತ್ತಂತೆ. ರೈಲು ನಮ್ಮೂರನ್ನು ಬಿಡುವುದು ಬೆಳಿಗ್ಗೆ 6-55 ಕ್ಕೆ. ಆದರೆ ರಾತ್ರಿ ನಮ್ಮ ಗೆಳೆಯರ ಗುಂಪಿನಲ್ಲಿ ಬಹಳ ವೇಳೆಗೇಳಿದ್ದನಾಗಿ ಅವನೆದ್ದದ್ದೇ ಏಳಕ್ಕೆ. ಅವನಿಗೆ ನಿರಾಶೆಯಾದರೂ ಅರ್ಜಂಟ್ ಕೆಲಸವಿದ್ದ ಪ್ರಯುಕ್ತ ರೈಲು ಹೋಯಿತೆಂದು ಸುಮ್ಮನಿರಲು ಸಮಾಧಾನವಾಗದೆ ಸಿಕ್ಕೀತೇನೋ ನೋಡೋಣವೆಂದು ಹೊರಟೇ ಬಿಟ್ಟನಂತೆ. ಸ್ಟೇಷನ್ನು ಊರಿಗೆ ಒಂದು ಮೈಲಿ ದೂರವಿದೆ. ಅವನು ಅಷ್ಟು ತಡವಾಗಿ ಬಂದು ನೋಡುತ್ತಾನೆ—ರೈಲು ದೂರದಲ್ಲಿ ಕಾಣುತ್ತಿದೆ. ಇಷ್ಟು ತಡವಾಗಿ ಬಂದರೂ ಇಷ್ಟು ದೂರ ಹೋಗುತ್ತಿರುವುದು ಕಾಣುತ್ತಿರುವುದಲ್ಲಾ! ಜಗತ್ತಿನಲ್ಲಿ ಎಷ್ಟು ಕಷ್ಟವಿದ್ದರೂ ಆಶಾಕಿರಣವೊಂದು ಮೂಡಿ ಆಶಾವಾದಿಯನ್ನಾಗಿಸುವಂತೆ ನಮ್ಮ ರೈಲು ಕೂಡಾ ಆಶಾವಾದವನ್ನು ಜನರಲ್ಲಿ ತುಂಬುವ ಶ್ರೇಷ್ಠ ಕಾರ್ಯಗೈಯುತ್ತಿದೆ. ಅಂತೆಯೇ ನಮ್ಮ ಸ್ನೇಹಿತನು ಅದನ್ನು ಕಂಡ ಕೂಡಲೇ ಏನನ್ನೂ ಲಕ್ಷಿಸದೆ ಒಂದೇ ಸಮನೆ ಓಡಿಬಿಟ್ಟನಂತೆ– ಪಾಪ ಎಷ್ಟಾದರೂ

ಅರ್ಜಂಟ್ ಕೆಲಸ ನೋಡಿ! ತನ್ನನ್ನೇ ನಂಬಿದ ಭಕ್ತರನ್ನು ದೇವನು ಕೈಬಿಡದಂತೆ ತನ್ನನ್ನೇ ನಂಬಿ ಓಡಿಬರುತ್ತಿರುವವನನ್ನು ಕಂಡು ಸಹಜವಾಗಿಯೇ ನಮ್ಮ ರೈಲಿಗೆ ಭಕ್ತ ಪ್ರೀತಿಯು ಹುಟ್ಟಿ (ಚಾಲಕನ ಕೈಚಳಕವನ್ನು ದುರ್ಲಕ್ಷಿಸಿ) ನಿಂತಿತೋ ಎಂಬಷ್ಟು ಕಡಿಮೆ ವೇಗದಿಂದ ಹೋಗಹತ್ತಿ ನಮ್ಮ ಮಿತ್ರನನ್ನು ಕೈಬಿಡದಂತೆ ಕರಕೊಂಡು ಹೋಯಿತಂತೆ. ಅವನೇ ಹೇಳುತ್ತಿರುತ್ತಾನೆ. ನಮ್ಮ ರೈಲೆಂದರೆ ರೈಲೇ ಕಾಣೋ—ಕೆಲಸಕ್ಕೆ ಆಗತಕ್ಕದ್ದು. ಆ ದಿನ ರೈಲು ಸಿಕ್ಕದಿದ್ದರೆ ನನ್ನ ಜೀವನದಲ್ಲೇ ಮಹತ್ತರನಾದ ತೊಂದರೆಯಾಗುತ್ತಿತ್ತು. ಆ ದಿನ ದೇವರೇ ನನ್ನನ್ನು ಕರಕೊಂಡು ಹೋದಂತಾಯಿತಪ್ಪಾ. ಆ ದಿನ ಹತ್ತು ಗಂಟೆಗೇ ತಪ್ಪದಂತೆ ದುಡ್ಡು ಕಟ್ಟದೇ ಇದ್ದಿದ್ದರೆ ನನ್ನ ಅಲ್ಲಿಯ ಜಮೀನೆಲ್ಲಾ ಕೈಬಿಡುತ್ತಿದ್ದುವು. ಅಂತೂ ಆ ದಿನ ನಮ್ಮ ರೈಲಿನಿಂದ ಬಹಳ ಷ್ಟೆಂದರೆ ಬಹಳ ಉಪಕಾರವಾಯಿತು—ಎಂದು ಆಗಿಂದಾಗ್ಗೆ ಅವನು ತಪ್ಪದೇ ನೆನೆಸುತ್ತಿರುತ್ತಾನೆ. ನಮ್ಮ ರೈಲನ್ನು ನೋಡಿದಿರಾ ನಮ್ಮ ರೈಲು ದೇವ ಸಮಾನ! ಅದ್ಭುತ ಪರೋಪಕಾರಿ!!

ಇದರ ಪರೋಪಕಾರವು ಇನ್ನೂ ಮುಂದುವರಿದಿದೆ. ನಮ್ಮೂರಿಗೆ ಹನ್ನೆರಡು ಮೈಲಲ್ಲಿ ಮೊದಲನೇ ರೇಲ್ವೇ ಸ್ಟೇಶನ್ ಮಾಲ್ವಿ ಇದೆ. ಅಲ್ಲಿಂದ ನಾಲ್ಕು ಮೈಲು ದೂರದಲ್ಲಿ ಎರಡನೇದು ಹಗರಿಬೊಮ್ಮನಹಳ್ಳಿ ಇದೆ. ಈಗ ರೈಲಿನಲ್ಲಾದರೆ ನಮ್ಮೂರಿಂದ ಹೊಸಪೇಟೆಗೆ ದಿನಕ್ಕೊಂದೇ ಸರ್ತಿ ಓಡಾಡಲು ಸಾಧ್ಯ. ಬೆಳಿಗ್ಗೆ ಹೋದ ರೈಲು ಮಲಗಲು ರಾತ್ರಿ ನಮ್ಮೂರಿಗೇ ಬರುತ್ತೆ—ಮಡಿಯಲು ಹೋದ ಸದ್ಗೃಹಸ್ಥರಂತೆ. ಆದಕಾರಣ ಹೊಸಪೇಟೆಗೆ ಹೊರಟವರಿಗೆ ಮಾಲ್ವಿಯಲ್ಲೂ ಸ್ವಲ್ಪ ಕೆಲಸವಿದ್ದರೆ ಹೇಗೆಂಬ ಸಮಸ್ಯೆ ಬಂದರೆ ಹೇಗೇ ಎಂದು ಕೇಳಬಹುದಾರಾದರೂ ಕೇಳಲಿ. ಮಾಲ್ವಿಯಲ್ಲಿ ರೈಲು ಬಹುವೇಳೆ ನಿಲ್ಲಲಾರದು. ಆ ಸ್ಟೇಶನ್‌ಗೂ ಊರಿಗೂ ದೂರ ಮತ್ತೆ. ಆದರೆ ಕೆಲಸವಿದ್ದರೆ ಮಾತ್ರ ಗಡಗಡ ಇಳಿದುಬಿಟ್ಟು ಉರಲ್ಲಿ ಹೋಗಿ, ಕಾಲು ಗಂಟೆಯಲ್ಲೇ ಎಲ್ಲಾ ಕೆಲಸ ಮುಗಿಸಿಕೊಂಡು, ಅಲ್ಲಿಂದ ಒಳಹಾದಿಯಿಂದ ಮೂರೇ ಮೈಲಿ ನಡೆದು ಹಗರಿಬೊಮ್ಮನಹಳ್ಳಿಗೆ ಬಂದರೆ ಆಗಿನ್ನೂ ಅಲ್ಲಿ ರೈಲು ನಿಂತೇ ಇರುತ್ತೆ ಆ ಸ್ಟೇಶನ್‌ನಲ್ಲಿ. ವ್ಯವಹಾರಕ್ಕೆ ಎಷ್ಟು ಉಪಕಾರವಾಯ್ತು! ಇಲ್ಲದಿದ್ದರೆ ಮಾಲ್ವಿ ವ್ಯವಹಾರಕ್ಕೆ ಚಕ್ರಕೊಟ್ಟು ಹೊಸಪೇಟೆಗೆ ಹೋಗಬೇಕಾಗಿತ್ತು ನೋಡಿ. ಈ ರೀತಿ ಎಲ್ಲಾ ವಿಧದಿಂದಲೂ ಉಪಕಾರ ಮಾಡುವವರು ಯಾರಿದ್ದಾರೆ? ಏನಿದೆ? ನಮ್ಮೂರ ರೈಲು ಮಾತ್ರ! ನಮ್ಮ **ಟ್ರೇನೊಂದೇ!!**

ನಮ್ಮ ರೈಲಲ್ಲಿ ಪ್ರಯಾಣ ಮಾಡುವುದಕ್ಕೊಂದು ಹರ್ಷ. ಅದಕ್ಕೆ ಜಾಸ್ತಿ ಡಬ್ಬಿಗಳೇ ಇಲ್ಲ; ಎರಡೇ ಎರಡಿದೆ, ಜಾಸ್ತಿ ಹಾಕಬಹುದಾಗಿತ್ತೆನ್ನಿ. ಅದಕ್ಕೆ ನಮ್ಮ ರೈಲಿಗೇ ಒಪ್ಪಿಗೆಯಿಲ್ಲ. ಅದರ ಅಭಿಪ್ರಾಯ ಜಾಸ್ತಿ ಡಬ್ಬಿಗಳಿದ್ದರೆ ಅಲ್ಲೊಬ್ಬರು ಇಲ್ಲೊಬ್ಬರು ಕುಳಿತುಕೊಂಡರೆ ಭಾಗ ತೆಗೆದುಕೊಂಡು ಬೇರೆ ಬೇರೆ ವಾಸಿಸುತ್ತಿರುವ ಅಣ್ಣ ತಮ್ಮಂದಿರಂತೆ ಪರಸ್ಪರ ಅಷ್ಟು ಪ್ರೀತಿಯಿರುವುದಿಲ್ಲವಾದ್ದರಿಂದ ಎಲ್ಲರೂ ಒಂದೋ ಎರಡೋ ಡಬ್ಬಿಗಳಲ್ಲಿ ಕುಳಿತರೆ ಒಬ್ಬರ ಮೈಒಬ್ಬರಿಗೆ ತಾಗಿ, ಪ್ರೀತಿಯು ಒಬ್ಬರ ಮೈಯಿಂದ ಇನ್ನೊಬ್ಬರಿಗೆ ಹರಿದು ಡಬ್ಬಿಯನ್ನೇ ತುಂಬಿಬಿಟ್ಟರೆ ಅದು ಜಗತ್ತನ್ನೇ ತುಂಬಲಾರದೆಂದು ಹೇಳುವುದು ಹೇಗೆ ಸಾಧ್ಯ! ಅಲ್ಲದೇ ಈ ರೀತಿ ಒಂದೇ ಕಡೆ ಸೇರುವುದರಿಂದ ಉಂಟಾಗುವ ಸ್ನೇಹ ಚರಿತ್ರಾರ್ಹವಾಗುವುದೂ ಉಂಟು. ಇಲ್ಲದಿದ್ದರೆ ಅತ್ಯಂತ ಆಪ್ತರೂ ಇಷ್ಟರೂ ಕೆಲವು ವೇಳೆ ಒಂದೇ ರೈಲಿನಲ್ಲಿ ಪ್ರಯಾಣ ಮಾಡಿದರೂ ಒಬ್ಬರಿಗೊಬ್ಬರು ಕಾಣುವುದು ಸಾಧ್ಯವಾಗುವುದಿಲ್ಲ. ಅದಕ್ಕೆ ಕಾರಣ ಬಹಳ ಡಬ್ಬಿಗಳೇ ಅಲ್ಲವೇ? ಆದರೆ ನಮ್ಮ ರೈಲಲ್ಲಿ ಸಾಹುಕಾರ ಸಿಂಗ್ರಪ್ಪನಿಂದ ಬಡವ ಭರಮಪ್ಪನವರೆಗೆ ಎಲ್ಲವಪ್ಪನೂ ಒಂದೇ ಕಡೆಗೆ ಕಲೆತೇ ತೀರಬೇಕು. ಮೊಮ್ಮಕ್ಕಳನ್ನು ನೋಡಲಿಕ್ಕೆ ಬರೋ ಮುದುಕವ್ವನಿಂದ ಅತ್ತುಕೊಳ್ತಾ ಗಂಡನ ಮನೆಗೆ ನಡಿಯೋ ನಾಗವ್ವನವರೆಗೂ ಎಲ್ಲಾ ಅವ್ವನೂ ಒಂದೇ ಕಡೆಗೆ ಕಲೆತೇತೀರಬೇಕು. ಅಂಥದರಲ್ಲೇ ಎಲ್ಲರಿಗೆ ಎಲ್ಲರೂ ಕಂಡು ಯಾರೊಡನೆ ಮಾತಾಡಲಿ ಯಾರೊಡನೆ ಬಿಡಲಿ ಎಂಬಂತಾಗಿ ಬಿಟ್ಟು, ಎಲ್ಲರೊಡನೆ ಎಲ್ಲರೂ ಮಾತಾಡುವುದರಿಂದ ವಿಶೇಷ ಗದ್ದಲವಾಗುತ್ತದೆ. ಮಾತಾಡುವವರಿಗಂತೂ ಇದೊಂದು ಹಬ್ಬ. ಸುಮ್ಮನಿರುವವರಿಗೂ ಅನುಕೂಲವಾಗಬೇಕಲ್ಲಾ ಈ ರೈಲು? ಇಲ್ಲದಿದ್ದರೆ ಪಕ್ಷಪಾತ ತೋರಿಸಿದಂತಾಗಲಿಕ್ಕಿಲ್ಲವೇ? ಗಮನವಿರಲಿ: ನಮ್ಮ ರೈಲೆಂದಿಗೂ ಪಕ್ಷಪಾತ ಮಾಡುವುದಿಲ್ಲ. ಮಾತಾಡುವವರ ಮಾತು ಮಾತಾಡುವವರಿಗೆ ಮಾತ್ರ ಕೇಳಿಸಬೇಕು—ಆ ರೀತಿ ಗಡಗಡ, ಸುಕ್ಕು ಸುಕ್ಕು ಸಪ್ಪಳ ಮಾಡುತ್ತಿರುತ್ತದೆ. ಎಂಥಾ ನಿಷ್ಪಕ್ಷಪಾತ! ಒಕ್ಕಟ್ಟಂಟುಮಾಡುವ ಬೃಹದಿಚ್ಛೆ! ಸ್ನೇಹವನ್ನು ಕೂಡಿಸಿ ಬೆಳಗಿಸುವ ಮಹದಾಕಾಂಕ್ಷೆ! ಪ್ರೀತಿಯನ್ನು ಜಗದ್ವ್ಯಾಪಿ ಮಾಡುವಂಥಾ ಉಚ್ಚಧ್ಯೇಯ!—ನಮ್ಮ ರೈಲಿನದು!!

ನಮ್ಮ ರೈಲು ಪ್ರಯಾಣಿಕರ ತಾಯಿ. ಅದಕ್ಕಾಗಿಯೇ ಅದರಲ್ಲಿ ಪ್ರಯಾಣಮಾಡಲಿಕ್ಕೆ ಹರ್ಷವಾಗುವುದು. ಅದರಲ್ಲಿ ಕುಳಿತುಬಿಟ್ಟರಂತೂ

ತಾಯ ಮಡಲಲ್ಲಿ ಮಲಗಿದಷ್ಟು ಆನಂದವಾಗುತ್ತದೆ. ಸುಳ್ಳುಮಾತಲ್ಲ—ಆಗ ರೈಲು ತಾಯಿಯ ವಾತ್ಸಲ್ಯವನ್ನನುಭವಿಸಿ ನುಡಿವ ಮಾತು. ತಾಯಿಯು ಮಗುವನ್ನು ಸಂತೈಸುವಾಗ ವಾತ್ಸಲ್ಯದಿಂದ ಮಡಲಲ್ಲಿ ಹಾಕಿಕೊಂಡು ಮಿಸು ಕಾಡಿಸುತ್ತಾ ಮಗುವನ್ನು ಕಲುಕಿಸುವಂತೆ ನಮ್ಮ ರೈಲು ಕೂಡಾ ಹೆಜ್ಜೆ ಹೆಜ್ಜೆಗೇಕೆ ಚಣಚಣಕ್ಕೆ ಕುಲುಕುಕೊಟ್ಟು ತನ್ನ ವಾತ್ಸಲ್ಯವನ್ನು ತೋರಿಸುತ್ತದೆ. ತಾಯಿಯು ಮಕ್ಕಳನ್ನು ತಟ್ಟುವಾಗ ಟಪ್‌ಟಪ್ ಶಬ್ಧವಾಗುತ್ತಿರುವಂತೆ ನಮ್ಮ ರೈಲು ಕುಲುಕು ಕೊಟ್ಟಾಗೊಮ್ಮೆ ತಟ್ಟುತ್ತಾ ಗಡ್‌ಗಡ್ ಎಂಬ ಶಬ್ಧ ಮಾಡುತ್ತದೆ. ಇದೆಲ್ಲಾ ಕಡೆತನಕ ತಾಳಬದ್ಧವಾಗಿಯೇ ನಡೆಯುತ್ತೆ. ನಾವು ತಾಯಮಡಲಲ್ಲಿ ಮಲಗಿದಾಗ ನಮ್ಮ ಕಿವಿಯು ತಾಯ ಎದೆಯಮೇಲೆ ಇದ್ದಾಗ ಅವಳ ಹೃದಯದ ಬಡಿತ ಡಕ್ಕುಡಕ್ಕು ಎನ್ನುವಂತೆ, ನಮ್ಮ ರೈಲು ತಾಯ ಮಡಲಲ್ಲಿ ಮಲಗಿದಾಗಲೂ ಅವಳ ಹೃದಯದ ಬಡಿತವೂ ಜುಕ್ಕು ಜುಕ್ಕು ಎಂದು ನಮ್ಮ ಹಡೆದ ತಾಯಿಯನ್ನೇ ಮರೆಸುತ್ತದೆ. ಎಂಥಾ ತಾಯಿ ನಮ್ಮ ರೈಲು! ಎಂಥಾ ವಾತ್ಸಲ್ಯ!

ಆರೋಗ್ಯವಂತನಾಗಲೀ ಕಾಯಿಲೆಯವನಾಗಲೀ ತಾಯಿಗೆ ಮಕ್ಕಳ ಮೇಲೆ ಸಮಾನ ಪ್ರೀತಿ. ನಾವು ಎಂಥಾ ಘನವಾದ ಯೋಚನೆಯಲ್ಲಿದ್ದರೂ ಏನಾದರೂ ಕಡಿಯಿತೆಂದರೆ ತಕ್ಷಣವೇ ನಮ್ಮ ಗಮನವು ಆ ಕಡೆಗೆ ಹೋಗು ವಂತೆ ಕಾಯಿಲೆ ಮಕ್ಕಳ ಇಲ್ಲವೇ ತೊಂದರೆಪಡುತ್ತಿರುವ ಮಕ್ಕಳ ಕಡೆಗೆ ತಾಯಿಯ ಗಮನ ಮೊದಲು ಹರಿಯುತ್ತದೆ. ಆದರೆ ಗಮನ ಮಾತ್ರ ಹೆಚ್ಚೇ ಹೊರತು ಪ್ರೀತಿಯು ಮಾತ್ರ ಸಮಾನವಾಗಿರುತ್ತೆ. ಗಮನಕ್ಕೇ ಪ್ರೀತಿ ಯೆಂದು ಗ್ರಹಿಸುವುದು ಇಲ್ಲಿ ತಪ್ಪಾಗುತ್ತೆ. ನಮ್ಮ ರೈಲು ತಾಯಿಯಾದರೋ ಎಂಥಾ ಗಲಾಟೆಯಿದ್ದರೂ ಕಾಯಿಲೆ ಮಕ್ಕಳು, ಬಸುರು ಹೆಂಗಸರು ಮುಂತಾ ದವರನ್ನು ಬೇರೆ ಮಕ್ಕಳಿಂದ ಜಾಗ ಬಿಡಿಸಿಕೊಂಡು ಆರಾಮಾಗಿ ಒರಗಿಸಿ, ತೊಟ್ಟಿಲಲ್ಲಿ ಹಾಕಿ ತೂಗುವಂತೆ ಕುಲುಕಿಸುತ್ತಾ ಗಡಕ್ಕಿನಿಂದ ತಟ್ಟುತ್ತಾ ಜುಕ್ಕು ಜುಕ್ಕು ಶಬ್ಧದಿಂದ ಮಾತ್ರ ಹೃದಯದ ಮಿಡಿತವನ್ನು ತೋರ್ಪಡಿ ಸುತ್ತಾ ನಡೆದುಬಿಟ್ಟಳೆಂದರೆ ಆಕೆಯ ಕರುಣೆಯ ಮಕ್ಕಳು ನಿದ್ದೆಮಾಡುತ್ತಿರ ಬೇಕು—ಆಕೆ ನಿಲ್ಲುವವರೆಗೆ. ಆರೋಗ್ಯವಂತ ಮಕ್ಕಳೇ ಇವರನ್ನು ಎಬ್ಬಿಸ ಬೇಕು. ಎಚ್ಚರವಾದಾಗ ಮೊದಲಿನ ದಣಿವು, ಆಯಾಸ, ತಲೆನೋವು ಮುಂತಾದ ಕಾಯಿಲೆಗಳು ಗುಣವಾಗಿ ಬಿಟ್ಟಿರುತ್ತಿದ್ದುದನ್ನು ನೋಡಿದರೆ ಆಶ್ಚರ್ಯವೇಕೆ ಅದ್ಭುತವೆನಿಸಬೇಕು—ನಮ್ಮ ರೈಲು—ತಾಯಿಯ ಮಹಾತ್ಮೆ

ತಿಳಿಯದವರಿಗೆ. ನನಗೆ ನನ್ನ ತಲೆಶೂಲೆಯನ್ನು ಇದೇ ರೀತಿ ಕಳೆದುಕೊಂಡ ಅನುಭವವಿದೆ. ಅವಳ ಮಹಾತ್ಮೆ ನಮಗೆ ಗೊತ್ತಿರುವುದರಿಂದ ನಮಗೆ ಆಶ್ಚರ್ಯವೂ ಇಲ್ಲ; ಅದ್ಭುತವೂ ಇಲ್ಲ. ವಾತ್ಸಲ್ಯವನ್ನೇ ಸರ್ವರೋಗ ಸಂಜೀವಿನಿಯನ್ನಾಗಿ ಮಾಡಿಕೊಂಡಿರುವ ಮಹಾತ್ಮಳೀಕೆ! ಶ್ರೇಷ್ಠವಾದ ಆಸ್ಪತ್ರೆ ನಮ್ಮ ರೈಲೆಂದು ಹೇಳಬಹುದು! ರೈಲು ತಾಯೇ ಡಾಕ್ಟರ್; ಅವಳ ವಾತ್ಸ ಲ್ಯವೇ ಇಂಜಕ್ಷನ್ !!

ನನ್ನ ತಲೆಶೂಲೆಯ ಅನುಭವವನ್ನು ಒಂದೇ ಮಾತಿನಲ್ಲಿ ಹೇಳಿದರೆ ಸಾಲದು; ಅದರ ಮಹತ್ವವು ತಿಳಿಯದು. ನಾನು ವರನಾಗಿ ಒಂದು ಕನ್ಯೆ ನೋಡಲು ನಾನಿನ್ನು ಏರುಂ ಜವ್ವನಿಗನಾಗಿದ್ದಾಗ ಒಂದು ಹಳ್ಳಿಗೆ ಹೋಗಿದ್ದೆ. ಆಗ ಬಸ್ಸುಜಾಗಗಳಿಗೆ ಬರಗಾಲ ಬಂದಿತ್ತು. ಜಾಗ ಸಿಕ್ಕುವುದು ಬಹಳ ಕಷ್ಟ ಅಂದಮೇಲೆ ಬಸ್ಸುಗಳೂ ಸಿಗುವುದು ಕಷ್ಟವಾಗಿತ್ತು. ನಮ್ಮ ರೈಲು ತಾಯಿ ಯಂತೆ ಈ ಬಸ್ – ಚಿಕ್ಕವ್ವಗಳು ಕರುಣಾ ಹೃದಯಿಗಳಲ್ಲ. ಬಹಳ ಜನ ಗಳನ್ನು ಹತ್ತಿಸಿಕೊಂಡರೆ ತಮ್ಮ ಮೈ ಮುಪ್ಪಾಗುತ್ತದೆಂಬ ಸ್ವಾರ್ಥ ಮನೋ ಭಾವದವರುಗರು. ಇವರಿಗೆ ಉದಾರ ಹೃದಯವೆಲ್ಲಿಂದ ಬರಬೇಕು – ದಾರಿ ಗೆಟ್ಟವರಿಗೆ?! ನಮ್ಮ ರೈಲ್—ತಾಯಿಯಂತೆ ಋಜುಮಾರ್ಗವೊಂದರಲ್ಲೇ ಅತ್ತಿತ್ತ ಒಂದು ಸೂಜಿ ಮೊನೆಯಷ್ಟಾದರೂ ಸರಿಯದಂತೆ – ಪತಿವ್ರತಾ ಮನೋಭಾವದಂತೆ – ನಡೆಯುತ್ತಿದ್ದರೆ ಔದಾರ್ಯ, ವಾತ್ಸಲ್ಯ, ನಿಸ್ವಾರ್ಥತೆ ಮುಂತಾದುವು ಗೊತ್ತಾಗುತ್ತಿದ್ದುವು. ಈ ದಾರಿಗೆಟ್ಟ ಚಿಕ್ಕವ್ವಗಳು ಎಲ್ಲಿ ಗೆ ಎಯ್ಯುತ್ತವೋ ಅಲ್ಲಿಗೆ ಹೋದರೇ ಜಾಗೆ; ಇಲ್ಲದಿದ್ದರಿಲ್ಲ. ನಮ್ಮ ಊರಿಗೆ ಬರುವುದೊಂದು ದಿಕ್ಕಾದರೆ ಅದರ ವಿರುದ್ಧ ದಿಕ್ಕಿನಲ್ಲಿ ಹೋಗುವ ಬಸ್ಸಿಗೆ ಜಾಗೆ ಸಿಗುವಂತೆ ಕಂಡಿತು; ಹತ್ತೇ ಬಿಟ್ಟೆವು. ಆಗಲೇ ತಲೆನೋವು ತಲೆ ದೋರಿ ಮುಂದೆ ಭಯಂಕರವಾಗಿ ಬೆಳೆಯುತ್ತೇನೆಂದು ಸೂಚನೆ ಕೊಡತೊಡ ಗಿತ್ತು. ಅಂತೂ ವಿರುದ್ಧ ದಿಕ್ಕಿಗೆ ಹೊರಟೆವು. ನಿಮಗೆ ಅಚ್ಚರಿಯಾಗ ಬಹುದು – ಉಪವಾಸವಿರಲಾರದೆ ನೀರುಳ್ಳಿ ತಿಂದಂತಾಯ್ತಲ್ಲಾ! ಎಂದು. ಆದರೆ ನಾವು ಹಾಗೆ ಹೀಗೆ ಸುತ್ತುಹಾಕಿ ಕಡೆಗೆ ನಮ್ಮ ರೈಲು – ತಾಯಿಯು ಆರೂವರೆ ಗಂಟೆಗೆ ಸಾಯಂಕಾಲ ದರ್ಶನ ಕೊಡುವ ಹಗರಿಬೊಮ್ಮನ ಹಳ್ಳಿಗೆ ಬಂದೆವು. ಇಷ್ಟು ಸುತ್ತಿದ್ದೇಕೆಂದು ನೀವು ಕೇಳಬಹುದು. ಎಷ್ಟು ಸುತ್ತಿದ ರೇನು? ಎಷ್ಟು ಕುತ್ತಿರಲೇನು? ರೈಲು – ತಾಯಿಯ ದರ್ಶನ ಭಾಗ್ಯ ದೊರ ಕುವುದಲ್ಲವೇ? ಬರಿದರ್ಶನವೇಕೆ – ಮಡಿಲಲ್ಲಿ ಮಲಗುವ ಭಾಗ್ಯ ದೊರಕು

ವುದಲ್ಲೆ? ಹಣವೇನೋ ಸೀದಾ ನಮ್ಮೂರಿಗೆ ಹೋದರಾಗುತ್ತಿದ್ದಕ್ಕಿಂತ ಬಹಳ ಹೆಚ್ಚೆ ಕರ್ಚಾಗಿದ್ದರೂ ರೊಕ್ಕಕ್ಕಿಂತ ಅವಳ ಮಡಲ ಭಾಗ್ಯವೇ ದೊಡ್ಡದು. ಚಿಕ್ಕವ್ವನ ಮಡಲಲ್ಲಿ ಎಂಥಾ ಕೆಟ್ಟವಾಸನೆ ಕುಡಿಯುತ್ತಿದ್ದೆನು! ಹೊಟ್ಟೆಯಲ್ಲಿ ವಿಷ (ಪೆಟ್ರೋಲ್) ಬೆರಸಿದಂತಾಗಿ ವಾಂತಿ ಬರುತ್ತಿತ್ತು. ಮೂಗು ಬಾಯಿ ಮುಚ್ಚಿಕೊಂಡರೂ ಕಣ್ಣು ತಿರುಗುತ್ತಿದ್ದವು. ಕಣ್ಣನ್ನು ಮುಚ್ಚಿಕೊಂಡೆ. ಅಫೀಮು ತಿಂದವರು ಜೋಲಿ ಹೊಡೆಯುತ್ತಾ ಮತ್ತಿನಲ್ಲಿರುವಂತೆ ಕಣ್ಣು ಮೂಗು ಬಾಯಿಗಳನ್ನು ಮುಚ್ಚಿಕೊಂಡು ಪ್ರಯಾಣ ಬೆಳೆಸಿದ್ದೆ. ಆಗ ಆಕೆ ಜೇರೆಯುವವರು ಕಾಡಿ ಅಳುವ ಕೂಸನ್ನು ಸುಮ್ಮನಿರಿಸಲು (ಹೊಟ್ಟೆಕಿಚ್ಚಿಗಾಗಿ ನಿರ್ವಾಹವಿಲ್ಲದೆ ಯತ್ನಿಸುವಂತೆ ನಮ್ಮ ಮೈಯನ್ನು ಮೆತ್ತಗಾಗುವಂತೆ ತಟ್ಟುತ್ತಿದ್ದಳು. ಅಂತೂ ಅದು ಮುಗಿಯುವುದಕ್ಕೂ ನನ್ನ ತಲೆನೋವು ಅರೇಬಿಯನ್ ನೈಟ್ಸ್‌ನಲ್ಲಿ ಕೊಡದಲ್ಲಿಯ ರಕ್ಕಸ ಕಡೆಗೆ ಬಂದಾಗ ಬೃಹದಾಕಾರ ತಾಳಿದಂತೆ ಭಯಂಕರವಾಗಿಬಿಟ್ಟಿತು. ಹನ್ನೆರಡು ಗಂಟೆಗೇ ಆ ಸ್ಟೇಶನ್ನಿಗೆ ಬಂದಿದ್ದೆವು. ಇನ್ನೂ ಆರೂವರೆ ಗಂಟೆ ಕಳೆಯಬೇಕು ಅವಳನ್ನು ಕಾಣಲು. ಹೇಗೆ ಮಾಡಲಿ?! ಕುಳಿತರೆ ಸಮಾಧಾನವಿಲ್ಲ; ನಿಂತರೆ ಸಮಾಧಾನವಿಲ್ಲ. ಮಲಗಿರಲಿಲ್ಲ; ಊರಲ್ಲಿ ತಿರುಗಿ ಪರಿಚಯದವರ ಪರಚಯದವರನ್ನು ಪರಿಚಯ ಮಾಡಿಕೊಳ್ಳಹೋದರಿಲ್ಲ. ಹಗರಿಯಲ್ಲಿ ಮುಖ ತೊಳೆದುಕೊಂಡರಿಲ್ಲ. ಇಂಥಾ ತಲೆಶೂಲೆ ಬರಲು ಕಾರಣವೇನು? ನಾನು ನೋಡಲು ಹೋಗಿದ್ದ ಆ ಹೆಣ್ಣಿನ ಪ್ರಭಾವವೇ! ಬಸ್‌ಪ್ರಯಾಣದ್ದೇ ಅಥವಾ ರೈಲು ತಾಯಿಯ ಮಹಾತ್ಮ್ಯೆ ತಿಳಿಯುವ ಯೋಗಾನುಯೋಗವೇ? ಯಾವುದೇ ಇದ್ದರೂ ನನ್ನ ಹಿಂಸೆ ಮಾತ್ರ ಬಹಳವಾಯಿತು. ಕಡೆಗೆ, ಹೊಟ್ಟೆಯಲ್ಲಿ ಪೆಟ್ರೋಲ್ ಬೆರೆಸಿದಂತಿದ್ದ ಆಹಾರವನ್ನು ಕಡೆಗೆ ಬರಿಸಿದರೆ ನನ್ನ ತಲೆಶೂಲೆ ಕಡಿಮೆಯಾಗಬಹುದೆಂದು ನಿರ್ಧರಿಸಿ, ಗಂಟಲಲ್ಲಿ ಬೆರಳಿಟ್ಟು ಒತ್ತಾಯದಿಂದ ವಾಂತಿ ಮಾಡಿಕೊಂಡೆ. ಹೊಟ್ಟೆ ಕಾಲಿಯಾದಮೇಲೆ ಇದ್ದಿದ್ದರಲ್ಲಿಯೇ ಸ್ವಲ್ಪ ಸಮಾಧಾನವಾಯಿತು. ತಲೆಶೂಲೆಯಂತೂ ಎಷ್ಟೂ ಕಡಿಮೆಯಾಗಲೊಲ್ಲದು! ತಲೆಗೆ ಟೌಲಿನಿಂದ ಬಿಗಿಯಾಗಿ ಪಟ್ಟುಹಾಕಿಕೊಂಡೆ. ಹೋಟೆಲುಗಳಲ್ಲಿ ಕಾಫಿಗಾಗಿ ಬೇಡಿಕಾಡಿದರೂ ಸಿಗಲಿಲ್ಲ. ಬರೀ ಕೇಟಿ-ಎಲ್‌ಟಿ-ಯಂಟಿ ಇದೆ ಎಂದರು. ನಾನು ನಿರಾಶನಾಗುವ ಮೊದಲೇ ನನ್ನ ಕಾಲೇಜು ಸಂಗಡಿಗನಾಗಿದ್ದವನೊಬ್ಬ ಭೇಟಿಯಾದ. ಅವನು ತನ್ನ ಪರಿಚಯದ ಹೋಟೇಲಲ್ಲಿ ಕಾಫಿಯನ್ನು ಹೇಳಿ ಮಾಡಿಸಿದ. ಕುಡಿದ ಮೇಲೆ

ಸ್ವಲ್ಪ ಕಡಿಮೆಯಾಯಿತು. ಅವನಿಗೆ ಖುಷಿಯಿಂದ ಹೇಳುವ ಎಷ್ಟು ಮಾತು ಗಳಿದ್ದವು! ಹೆಣ್ಣು ನೋಡಲಿಕ್ಕೆ ಹೋಗಿದ್ದೆನೆಂದು ಮಾತ್ರ ಹೇಳಿಬಿಟ್ಟೆ. ನನ್ನ ರಸಿಕತನದ ಪರಿಚಯವಿದ್ದ ಅವನು ಚೇಷ್ಟೆಗೆ ಮೊದಲು ಮಾಡುತ್ತಿದ್ದ ನೇನೋ—ನನ್ನ ಸ್ಥಿತಿನೋಡಿ ಸುಮ್ಮನಾದ. ನನಗೇ ದುಃಖವಾಯಿತು. ಅಷ್ಟು ದಿನದ ಮೇಲೆ ಕಲೆತ ನಾವು ಹಾಗೇ ಅಗಲಬೇಕಾಯಿತಲ್ಲಾ! ಅವರೂರಿಗೆ ಕರೆದ. ನನಗಂತೂ ನಮ್ಮೂರಿಗಿಂತಲೂ ನಮ್ಮೂರ ರೈಲಿನಲ್ಲಿ. ಯಾವಾಗ ಕುಳಿತೇನೋ ಎಂದೆನಿಸುತ್ತಿದ್ದುದರಿಂದ ನಾನು ಉಪಾಯದಿಂದ ಅವನಿಗೆ ಸಮಾಧಾನ ಹೇಳಿ ಪಾರಾದೆ. ಹಾಗೂ ಹೀಗೂ ಅಂದು ಎಂದಿ ಗಿಂತಲೂ ಸ್ವಲ್ಪ ತಡವಾಗಿಯೇ ಬಂದಿತು ರೈಲು. ಅಂದು ಯಾರಿಗಾದರೂ ಉಪಕಾರ ಮಾಡುವುದಿದ್ದೀತೆಂದುಕೊಂಡೆ. ಜನರೆನ್ನುತ್ತಿದ್ದರು: ತಾಂಡಾದ ಹತ್ತಿರ ಬಂದಾಗ ರೈಲು ನಿಂತಿದೆಯೋ ಎಂಬಷ್ಟು ಸಾವಕಾಶವಾಗಿ ಹೋಗು ತ್ತಿರುತ್ತದೆಂದು. ಅದಕ್ಕೆ ಕಾರಣ ಸರಾಯಿ ಮಾರಾಟವಂತೆ. ಲಂಬಾಣಿ ಗಳು ಸರಾಯದ ಭಟ್ಟಿ ಇಳಿಸಿ ದಿನವೂ ತಾಜಾ ಮಾಲನ್ನು ತಂದು ರೈಲಿನಲ್ಲಿ ರುವವರಿಗೆ ಮಾರುತ್ತಿದ್ದರಂತೆ. ಇವರ ವ್ಯವಹಾರವನ್ನು ಕೆಡಿಸಲಾರದೆ ರೈಲು ಕೂಡಾ ಅತ್ಯಂತ ಸಾವಕಾಶವಾಗಿ ಬರುತ್ತಿದ್ದಿತಾದೀತು. ಏನಾಶ್ಚರ್ಯ! ಏನು ಪ್ರಮಾದ! ಅದು ಹೀಗೆ ಮೆಲ್ಲಗೆ ಬರುವುದರಿಂದ ಸರಾಯದ ಭಟ್ಟಿ ಇಳಿಸಿದವರಿಗೆ ಜೀವನವಾಯಿತು. ಕೊಂಡವರಿಗೆ ಉಸುರು ಬಂದಂತಾಯಿತು. ಉಭಯತರಿಗೂ ಆನಂದವಾಯಿತಲ್ಲವೇ! ಅಲ್ಲದೇ ಚಟವಿರುವವರಿಗೆ ಆ ಚಟದ ಪೂರೈಕೆಯಾಗದಿದ್ದರೆ ಉಸುರೇ ನಿಂತಂತಾಗುವ–ಕೆಲವು ವೇಳೆ ನಿಲ್ಲುವ ಸಂಭವವಿದೆ. ಏಕೆಂದರೆ ಚಟವು ದ್ವಿತೀಯ ಪ್ರಕೃತಿ. (Habbit is the Second Nature). ಇದರಿಂದ ಉಭಯತರ ಪ್ರಾಣಗಳು ಸುರಕ್ಷಿತವಾದವು. ಎಂದಮೇಲೆ ನಮ್ಮ ರೈಲು ಜೀವದಾನದಂಥಾ ಶ್ರೇಷ್ಠ, ಪುಣ್ಯ ಕೆಲಸವನ್ನು ಮಾಡುತ್ತದೆ. ಬಯಸಿದ್ದನ್ನು ಈಡೇರಿಸುವ ಕಾಮಧೇನು. ಕಲ್ಪವೃಕ್ಷಗಳಂತೆ ಇದು ಸರಾಯಿ ಬಯಸಿದವರಿಗೆ ರೈಲಲ್ಲಿ ಕುಳಿತಿರುವಾ ಗಲೇ ಅದನ್ನು ಒದಗಿಸುವುದಲ್ಲಾ! ಇದಕ್ಕೇನೆನ್ನಬೇಕೋ ಎಂಥಾ ಹೆಸರಿಡ ಬೇಕೋ ನನಗಂತೂ ತಿಳಿಯದು. ಯಾವ ಭಾಷೆಯಲ್ಲೂ ಇದಕ್ಕಿಡಲು ತಕ್ಕಂಥಾ ಹೆಸರಿಲ್ಲ! ಕೊಡಲು ತಕ್ಕಂತಾ ಬಿರುದಿಲ್ಲ!!

ತಲೆಶೂಲೆಯುವನಾದ ನಾನು ಅದು ತಡವಾಗಿ ಬಂದ ಕೂಡಲೇ ಬಹಳ ಹೊತ್ತು ತಾಯಿಂದ ದೂರವಿದ್ದ ಮಗು ತಾಯಿಯನ್ನು ಕಂಡಕೂಡಲೇ

ಯಾವುದನ್ನೂ ಲಕ್ಷಿಸದೆ ಹಾತೊರೆದು ಮುನ್ನುಗ್ಗುವಂತೆ, ನಾನು ಟಿಕೆಟ್ ಕೂಡಾ ತೆಗೆದುಕೊಳ್ಳದೇ ಹಾತೊರೆದು ಮುನ್ನುಗ್ಗಿ ಅವಳ ಮಡಲಲ್ಲಿ ಮಲಗಿ ಅವಳನ್ನು ಗಟ್ಟಿಯಾಗಿ ಅಪ್ಪಿಕೊಂಡೆ. ನನ್ನ ಜೊತೆಗಿದ್ದವರೇ ನನಗೊಂದು ಟಿಕೆಟ್ ತಂದರು. ಅದರಲ್ಲಿ ಏಳಾಣೆ ಎಂದು ಬರೆದಿತ್ತು. ತಲೆನೋವು ಮತ್ತೆ ಅಧಿಕವಾಗಿತ್ತು. ನಾನು ಅಷ್ಟು ಅವಸರದಿಂದ ಹಾತೊರೆದು ಬಂದು ಅಪ್ಪಿಕೊಂಡದ್ದಕ್ಕೆ ಅವಳಿಗೆ ಹಾದಂತಾಗಿ ಬಹಳ ನೋವಾಗಿರಬೇಕು. ಸ್ವಲ್ಪ ಹೊತ್ತೇಕೆ ಬಹಳ ಹೊತ್ತು ಉಸುರುಗಟ್ಟಿದಂತಾಗಿತ್ತು. ಮರ್ಮಕ್ಕೆ ಪೆಟ್ಟು ತಾಗಿತ್ತೇನೋ ಜೀವ ಹೋಗಿ ಎಷ್ಟೋ ಹೊತ್ತಿನಮೇಲೆ ಬಂದಂತಾಯಿತು. ಹೊರಗೆ ಮಾತಾಡುತ್ತಿದ್ದರು: ಇಲ್ಲಿನ್ನೂ ಭಾಳಾಹೊತ್ತು ನಿಲ್ತದೆ ಬಾ-ಹೊಟೇಲಿಗಾದರೂ ಹೋಗಿ ಬರೋಣ- ಇನ್ನೂ ಇಂಜಿನ್ ನೀರು ಕುಡಿಯ ಬೇಕು ಎಂದು. ಅವರಿಗೇನು ಗೊತ್ತು ಪಾಪ- ನನ್ನಿಂದ ಆಕೆಯ ಮರ್ಮಕ್ಕೆ ಪೆಟ್ಟು ತಾಗಿದೆಯೆಂಬುದು. ಆಕೆಗೆ ಉಸುರು ತಿರುಗಿದ ಮೇಲೆ ನನ್ನ ಒರಟು ತನಕ್ಕೆ ಕೋಪಗೊಳ್ಳುವುದೊತ್ತಿಟ್ಟಿಗಿರಲಿ: ಮತ್ತೆ ನಾನು ಬಂದಕೂಡಲೇ ತಲೆನೋವಿನ ನನ್ನನ್ನು ಸಂತೈಸಲಾಗದೇ ತನ್ನುಸುರು ತಿರುಗಿಸಿಕೊಳ್ಳುವುದ ರಲ್ಲೇ ಎಷ್ಟೋ ವೇಳೆ ಗಳೆಯಿತಲ್ಲಾ ಎಂದು ನನ್ನ ಕುಲುಕಾಡಿಸಿ ಸಂತಾಪ ಪಟ್ಟು ಕೂಗಿಕೊಂಡಳು. ಅವಳಾ ಕೂಗು ಬಹುದೂರದವರೆಗೂ ಬಹುಜನ ರಿಗೂ ಕೇಳಿಸಿತು. ಆಗ ಹೊಟೇಲಿಗೆ ಹೋದವರು ಓಡುತ್ತಾ ಬಂದು ಹಿಂದಿ ನವರನ್ನು ಕೂಗಿದರು: ಬಾರಯ್ಯಾ ಆಗಲೇ ವ್ಹಿಜಿಲ್ ಆತು ಅಂತ. ಅವಳ ಸಂತಾಪದ ಕೂಗು ಅವರಿಗೆ ವ್ಹಿಜಿಲ್! ಹೀಗೇ ಪ್ರಪಂಚ!! ಎಂದು ನನಗೆ ಆ ತಲೆನೋವಿನ ಸಂಕಟದಲ್ಲೂ ನಗೆ ಬಂತು. ಸಂತಾಪದ ಕೂಗಿನ ನಂತರ ಅಷ್ಟುವೇಳೆ ತೋರಿಸದೇ ಇದ್ದ ಪ್ರೀತಿಯನ್ನೆಲ್ಲಾ ಒಮ್ಮೆಲೇ ತೋರಿಸಿ ಬಿಡಬೋಏಂಬಂತೆ ನನ್ನನ್ನು ಗವಕ್ಕನೆ ಕವಚಿಕೊಂಡು ಒಮ್ಮೆಲೇ ಕುಲುಕಾಡಿಸಿ ಬಿಟ್ಟಳು. ಅವಳನ್ನು ಸರಿಯಾಗಿ ತಿಳಕೊಂಡ-ನನ್ನ ಮೇಲಿನ ಅತೀ ವಾತ್ಸಲ್ಯ ದಿಂದ ಅವಳು ತನ್ನ ಬೇರೆಮಕ್ಕಳನ್ನು ದುರ್ಲಕ್ಷಿಸಿಬಿಟ್ಟಳು. ಆ ಭರದಲ್ಲಿ-ಅವಳು ನನ್ನನ್ನು ಕುಲುಕಾಡಿಸುವ ಭರದಲ್ಲಿ- ಬೇರೆಯವರನ್ನು ನೂಕಿದಂತಾಗಿ ಅವರೆಲ್ಲಾ ಬೀಳುವಂತಾಗಿದ್ದರು ಮತ್ತೆ ಅವಳ ಸೆರಗನ್ನು ಬಿಮ್ಮನೇ ಹಿಡಿದು ಹಿಡಿದುಕೊಂಡು ಸರಿಯಾಗಿ ನಿಂತರು. ಆದರೆ ಅವಳು ನನ್ನ ಮೇಲಿನ ವಾತ್ಸಲ್ಯದಿಂದ ಹೀಗೆ ಮಾಡೇ ತೀರುವಳೆಂದು ಮೊದಲೇ ನಮ್ಮದನ್ನು ತಿಳಿದ ಕೆಲವರು ಮೊದಲೇ ಭದ್ರವಾಗಿ ಅವಳ ಪಾದವನ್ನು ಹಿಡಿದುಕೊಂಡಿದ್ದರು.

ಆ ಜೀವಗಳ್ಳರು ಉಳಿದವರನ್ನು ನೋಡಿ ನಕ್ಕರು. ನಾನು ಅವರನ್ನು ನೋಡಿ ನಕ್ಕು ಹೆಮ್ಮೆಯಿಂದ ನೋಡಿದೆನು; ಮತ್ತು ಮಡಲಲ್ಲಿ ಸರಿಯಾಗಿ ಮಲಗಿದೆ. ಅವಳು ಕೊಡುತ್ತಿದ್ದ ಜೂಕು, ತಟ್ಟುತ್ತಿದ್ದ ಗಡ್‌ಗಡ್‌ಗಳಿಂದಾಗಿ ನಿದ್ರೆ ಬಂದೇ ಬಿಟ್ಟಿತು. ಮಧ್ಯೆ ಮಧ್ಯೆ ಯಾವಾಗಲಾದರೂ ಎಚ್ಚರವಾದರೆ ಅವಳ ಹೃದಯದ ಜುಕ್ಕು ಜುಕ್ಕು ಕೇಳುತ್ತಿರುತ್ತಿತ್ತು. ನನಗೆ ನಿದ್ರೆ ಬಂದಿದೆಯೆಂದೂ ಅವಳು ತನ್ನ ಕರ್ತವ್ಯವನ್ನು ಬಿಟ್ಟದ್ದಿಲ್ಲ. ಜೂಕು, ತಟ್ಟುವುದು, ಎದೆಮಿಡಿತ ನಮ್ಮೂರು ಮುಟ್ಟುವವರೆಗೂ ನಡದೇ ಇದ್ದುವು. ನನ್ನ ಜೊತೆಯವರು ಎಬ್ಬಿಸಿದಾಗ ನನಗೆ ತಲೆ ನೋವಿರಲಿಲ್ಲ. ಆದರೆ ಜನ ನಾನು ಮುಂದು ತಾನು ಮುಂದೆಂದು ಎಲ್ಲರೂ ಇಳಿಯುವುದನ್ನು ನೋಡಿ ನನಗೆ ಇವರೆಷ್ಟು ಕೃತಘ್ನರೆನಿಸಿತು! ಒಂದು ನಿಲುವಿಗೆ ಮುಟ್ಟಿದ ಕೂಡಲೇ ಅಲ್ಲಿಗೆ ತಂದವರನ್ನೇ ತಿರಸ್ಕರಿಸಿ ಬಿಡುವುದೇ? ಛೇ! ವಿಚಿತ್ರಮಯ ಪ್ರಪಂಚವೆಂದು ಕೊಂಡು ಹಾಗೇ ಕುಳಿತೆ. ಇವರೆಲ್ಲಾ ಇಳಿವವರೆಗೂ. ಕಡೆಗೆ ಆಕೆಯ ನಿದ್ದೆಗೆ ಅಡ್ಡಿಯಾಗಬಾರದೆಂದು ಸಾವಕಾಶವಾಗಿ ಇಳಿದು ಹೋಗಬೇಕೆಂದರೆ ಸಾಧ್ಯವಾಗಲೊಲ್ಲದು, ಮನಬರಲೊಲ್ಲದು. ಕಡೆಗೂ ಇನ್ನೆಂದಾದರೂ ಕಂಡೇ ಕಾಣುವೆನೆಂದುಕೊಂಡು ದುಃಖದಿಂದಲೇ ತಿರತಿರುಗಿ ನೋಡುತ್ತಾ ನಡೆದಿದ್ದೆ. ಗೇಟಿನ ಬಳಿ ಇನ್ನೂ ಜನಸಮೂಹವಿತ್ತು. ಇನ್ನು ಅದೇ ಅವಳ ವಾತ್ಸಲ್ಯವನ್ನು ಪೂರ್ಣವಾಗಿ ಅನುಭವಿಸಿದ್ದೆನಾದ ಕಾರಣ ನನಗೆಲ್ಲಿ ನೋಡಿದರೂ ಅವಳ ವಾತ್ಸಲ್ಯವೇ ಕಾಣುತ್ತಿತ್ತು. ನನಗಾವುದರ ಲಕ್ಷ್ಯವೂ ಇರಲಿಲ್ಲ. ಆಗ ನನ್ನ ಬಳಿಯಿದ್ದವರು ನನಗೇನೋ ಬಡಿಸಿರಬೇಕು – ಅವರೇ ಅಂದರು: ಅಯ್ಯೋ ಕಣ್ಣಿಗೆ ತಾಕಿತೇನ್ರಿ?—ಈ ಹಾಳು ಕೊಡೆ ಎಂದರು. ನನಗಾಗ ಎಚ್ಚರವಾಗಿ ನೋಡುತ್ತೇನೆ – ನನ್ನ ಕೈಗಳು ನನ್ನ ಕಣ್ಣುಗಳ ಮೇಲೆ ಇವೆ. ಆತ: ಎರಡೂ ಕಣ್ಣುಗಳಿಗೆ ತಾಕಿ ಬಿಟ್ಟಿತಲ್ಲರೀ! ಎಂದು ಪಶ್ಚಾತ್ತಾಪ ಪಡುತ್ತಿದ್ದ. ನನಗೇನೂ ಲಕ್ಷ್ಯವಿಲ್ಲ. ನಾನು: ಇಲ್ಲಿಲ್ಲವೆಂದಿಷ್ಟೇ ಹೇಳಿದೆ. ಏಕೆಂದರೆ ನನಗೆ ಬೇರಾವುದರ ಕಡೆಗೂ ಲಕ್ಷ್ಯವಿರಲಿಲ್ಲ ತಾನೇ? ಆಗ ನನ್ನ ಕಣ್ಣುಗಳಿಗೆ ಬಡಿದದ್ದು ಕೊಡೆಯೆನಿಸಲಿಲ್ಲ; ಅವಳ ವಾತ್ಸಲ್ಯ. ನನ್ನ ಕಣ್ಣುಗಳಲ್ಲಿ ನೀರು ಬರುತ್ತಿದ್ದುದು—ನಾನು ಅವಳನ್ನಗಲಿ ಹೋಗುತ್ತೇನಲ್ಲಾ ಎಂಬ ದುಃಖದಿಂದಿರ ಬಹುದೆನಿಸಿತು. ಅಷ್ಟೇ ಹೊರತು ಮತ್ತೇನೂ ಎನಿಸಲಿಲ್ಲ. ಸ್ಟೇಶನ್‌ಮಾಸ್ಟರ್ ಟಿಕೆಟ್ ಕೇಳ್ದ ಬಕ್ಕಣದಲ್ಲಿ ನೋಡಿದೆ. ಸಿಕ್ಕಿತು.

ಅದರಲ್ಲಿ ಎಳಾಣೆಯೆಂದು ಬರೆದಿತ್ತು. ಅದನ್ನು ಅವನಿಗೇ ಕೊಟ್ಟು ಹೊರಗೆ ಬಂದೆ. ಆದರೆ ಈ ಟಿಕೆಟ್‌ನ ವ್ಯವಸ್ಥೆ ನನಗೆ ಸರಿ ಕಾಣಲಿಲ್ಲ.

ಸರಕಾರಕ್ಕೆ ಬುದ್ಧಿಯಿಲ್ಲ. ತಾಯಿ ಮಕ್ಕಳನ್ನು ಕಲೆಸುವುದಕ್ಕೆ ಇಷ್ಟಿಷ್ಟು ಹೊತ್ತಿಗೆ– ಇಷ್ಟಿಷ್ಟು ಮೈಲಿಗೆ ಇಷ್ಟಿಷ್ಟು ರೊಕ್ಕವೆಂದು ವಸೂಲು ಮಾಡ ಬಹುದೇ! ಇಂಥಾ ದುರ್ಬುದ್ಧಿಯು ಸರಕಾರಕ್ಕೆ ಹೇಗೆ ಹುಟ್ಟಿರಬಹುದು! ಇಂಥ ಅವರ್ಣನೀಯವಾದ ರೈಲಮ್ಮನ ವಾತ್ಸಲ್ಯಕ್ಕೆ ಮೈಲಿಗಿಷ್ಟು ದಂಬಡಿ ಯೆಂದು ಬೆಲೆ ಕಟ್ಟಬಹುದೇ? ಅಮೌಲ್ಯವಾದವುಗಳಾವುವೆಂಬುದಾದರೂ ಗಮನಕ್ಕೆ ಬರಬೇಡವೇ? ರೈಲು ತಾಯಿಾ, ರೊಕ್ಕ ಕೊಡಲು ಯೋಗ್ಯತೆ ಯಿಲ್ಲದ ನಿನ್ನ ಅನಾಥ– ಭಿಕ್ಷುಕ ಮಕ್ಕಳು ನಿನ್ನಾಶ್ರಯದಲ್ಲೇ ನಿನ್ನಿತರ ಧನಿಕ ಮಕ್ಕಳಾದ, ನಿನ್ನ ಪ್ರೇರಣೆಯಂತೆ ಅವರು ಕೊಟ್ಟ ಹಣವನ್ನು ತಗೆದುಕೊಂಡು ಜೀವನ ನಡೆಸುವುದನ್ನು ನೋಡಿದ ಸರಕಾರದಾಳುಗಳು ಟಿಕೆಟ್ ಇಲ್ಲವೆಂದು ನಿರ್ದಯರಾಗಿ ನಿನ್ನಿಂದಗಲಿಸುವುದನ್ನು ನೋಡಿಯೂ ನೀನು ಎಲ್ಲಿನವರೆಗೆ ಸಹಿಸಬಲ್ಲೆ? ಅಯ್ಯೋ ರೈಲಮ್ಮಾ ಟ್ರೇನು ತಾಯಿಾ, ನಿನ್ನ ಸಂಕಟವಾದರೂ ಅದೆಷ್ಟಮ್ಮಾ! ನಿನ್ನಂಥವಳಿಗೂ ಈ ಸ್ಥಿತಿಯೇ? ಅಹುದಮ್ಮಾ ಮರೆತಿದ್ದೆ. ಒಳ್ಳೆಯವರಿಗೆ ಕಷ್ಟಗಳು ಬರುವುದು ಬಹಳ. ಸುಧಾರಿಸಿಕೊಳ್ಳಮ್ಮಾ ಸುಧಾ ರಿಸಿಕೋ. ಮುಂದಾದರೂ ಸರಕಾರಕ್ಕೆ ನಿನ್ನ ವಾತ್ಸಲ್ಯದರಿವಾಗಿ ನಿನ್ನ ಸಂಕಟ ದೂರಾದೀತು. ಮುಂದೆ ನಾನೇ ಮಂತ್ರಿಯಾದಾಗಲಂತೂ ನಿನ್ನ ಬಯಕೆ ಈಡೇರಿತೆಂದೇ ತಿಳಿ. ಅಲ್ಲಿಯವರೆಗೆ ಮಾತ್ರ ನೀನು ನಿನ್ನ ಸಂಕಟದ ಕಲ್ಲಿದ್ದಲಾಗ್ನಿಯನ್ನು ನುಂಗಿ ನೀರು ಕುಡಿಯುತ್ತಿರು. ನಿನ್ನ ಬಿಸಿಯುಸಿರನ್ನು ಬುಸ್ ಬುಸ್ಸೆಂದು ಎಲ್ಲರಿಗೂ ಕಾಣುವಂತೆ ಬಿಡುತ್ತಲೇ ಇರು. ಇದನ್ನು ದಿನವೂ ನೋಡುತ್ತಿರುವ ನಿನ್ನ ಮಕ್ಕಳಿಗೆ ಒಂದಿಲ್ಲೊಂದು ದಿನವಾದರೂ ನಿನ್ನ ಬಗ್ಗೆ ನಿಜವಾದ ತಿಳಿವಳಿಕೆಯುಂಟಾಗಿ, ನಿನ್ನ ಸಂಕಟದ ಅರಿವಾಗಿ, ಕಾಣಕಾಣುತ್ತಿರುವಾಗಲೇ ಕ್ರಾಂತಿಯಾದೀತು! ನಿನ್ನ ದೊಡ್ಡ ಮನಸ್ಸಿನಿಂದ ಸಮಯ ಬರುವವರೆಗೆ ಸಮಾಧಾನ ತಂದುಕೋ.

ಅಲ್ಲವಮ್ಮಾ! ನಿನಗೆ ರಾಕ್ಷಸಿಯೆಂದು ಕರೆವವರನ್ನು ಕಂಡಾಗ ನನಗೆ ನಿನ್ನೊಡಲ ಕಲ್ಲಿದ್ದಲ ಕೆಂಡದಂತಹ ಸಿಟ್ಟು ಬರುತ್ತದೆ. ಜನರೆನ್ನುತ್ತಾರೆ: ಒಂಟಿಗಣ್ಣಿನ ರಾಕ್ಷಸದಂತೆ ಬರುತ್ತಿರುತ್ತದೆ ಜುಕ್ಕು ಜುಕ್ಕು ಎನ್ನುತ್ತಾ ಎಂದು. ಅವರ ಮೌಢ್ಯದ ಮಟ್ಟವೆಷ್ಟಮ್ಮಾ? ನೀನೇ ಹೇಳು. ನಿನ್ನ ಮಡಲಾಶ್ರಯ

ಹೊಂದಲು ಅಲ್ಲಲ್ಲಿ ಕಾದಿರುವ ಮಕ್ಕಳಿಗೆ 'ಬಂದೇ ನನ್ನ ಮುದ್ದಿನ ಮಕ್ಕಳೇ ಬಂದೇಬಿಟ್ಟೆ' ಎಂದು ಹೇಳುವಂತೆ ಎಷ್ಟೋ ದೂರದಿಂದಲೇ ಸಾರುತ್ತ ನಿನ್ನ ವಾತ್ಸಲ್ಯವನ್ನೆಲ್ಲಾ ಕಣ್ಣಲ್ಲೇ ತಂದು ನಿನ್ನ ಮುದ್ದಿನ ಮಕ್ಕಳನ್ನು ನೋಡುವಿಯಲ್ಲಾ ಆಗ ನಿನ್ನ ಕಣ್ಣಿನ ದಿವ್ಯ ಪ್ರಕಾಶವನ್ನು ಕಂಡು ಇವರು ರಾಕ್ಷಸಿಯೆನ್ನಬೇಕೇ, ಮೂರ್ಖರು! ಅದಕ್ಕಲ್ಲದಿದ್ದರೆ, ಆಶಾವಾದಿಯಾದ ನೀನು, ಆಶಾವಾದಿಗಳನ್ನು ಸಿದ್ಧಪಡಿಸುತ್ತಿರುವ ನೀನು—ನಿರಾಶಾವಾದಿಗಳನ್ನೂ ಅಮೂಲ್ಯವಾದ ಪ್ರಾಣವನ್ನೇ ಬಿಡಬೇಕೆನ್ನುವವರನ್ನೂ ಅಜ್ಞಾನಿಗಳನ್ನೂ (ಪಶುಮುಂತಾದ ಪ್ರಾಣಿ) ಕ್ಷಣಮಾತ್ರದಲ್ಲಿ ನಿನ್ನ ಕಾಲಿನಿಂದೊರಸುವುದನ್ನೂ ಕಂಡು ಹೀಗೆ ರಕ್ಕಸಿಯೆನ್ನಬಹುದಲ್ಲವೇ? ಪಾಪ ಅವರಿಗೆ ನಿನ್ನ ಧ್ಯೇಯ ಅಭಿಲಾಷೆಗಳ ಅರಿಕೆ ಯಿದ್ದರಲ್ಲವೇ? ಅದಕ್ಕೂ ಅಲ್ಲದಿದ್ದರೆ, ಎಂದೆಂದೂ ದಾರಿ ತಪ್ಪದ ನೀನು, ಲೋಕದಲ್ಲಿದ್ದವರೆಲ್ಲಾ ಪಕೃತಿಯ ಪ್ರಭಾವಕ್ಕೊಳಗಾಗುವಂತೆ ಅಕಸ್ಮತ್ತಾಗಿ ನೀನೂ ಅದರ ಪ್ರಭಾವಕ್ಕೊಳಗಾಗಿ ತೀರಾ ಸ್ವಲ್ಪ ದಾರಿ ತಪ್ಪಿದರೂ ನಿಷ್ಠೆ ಕೆಟ್ಟಿತೆಂಬ ಸಂಕಟದಲ್ಲಿ ನಿನ್ನ ಮಕ್ಕಳನ್ನೂ ಲಕ್ಷಿಸದೆ ಬಿದ್ದು ಒದ್ದಾಡುವಾಗ ನಿನ್ನ ಮಕ್ಕಳಿಗಾಗುವ ಅನಾಹುತವನ್ನು ಇವರು ಲಕ್ಷಿಸಿ ಹೀಗೆನ್ನಬಹುದೇ? ಪಾಪ–ನಿನ್ನ ನಿಷ್ಠೆಯ ಔನ್ನತ್ಯ ಅವರಿಗೇನು ಗೊತ್ತು! ನೀನು ನಿಷ್ಠೆಗಾಗಿ ಪ್ರಾಣವನ್ನು ತ್ಯಜಿಸುವೆ; ನದಿಯಲ್ಲಿ ಹಾರಿಕೊಂಡು ಅನೇಕ ಮಕ್ಕಳೊಡನೆ ಪ್ರಾಣ ಕೊಡಬಲ್ಲೆ. ಅದೆಲ್ಲಾ ಮಂಕುಮತಿಗಳಿಗೇನು ಗೊತ್ತು!

ನಿನ್ನಂಥ ಉಗ್ರನಿಷ್ಠಾವಂತಳ, ನಿರಾಶಾವಾದಿ ರಿಪು, ಆಶಾವಾದಿ ಕಲ್ಯಾಣಿ, ದಿವ್ಯ ಪ್ರೇಮ-ವಾತ್ಸಲ್ಯಮಯಿಯಾದವಳ ಮಡಲಲ್ಲಿ ಮೇಲಿಂದ ಮೇಲೆ ಆಶ್ರಯ ಪಡೆಯಬೇಕೆನಿಸುತ್ತದೆ. ಆದರೆ ಅದಕ್ಕೆ ಬೇಕು ಟಿಕೆಟ್! ಟಿಕೆಟ್ ಕೊಂಡು ಕೊಂಡು ನಿನ್ನ ಮಡಲಲ್ಲಿ ಬೀಳಬಹುದು. ಹಣ ಕೊಡಬೇಕೆಂಬ ಚಿಂತೆಯಿಲ್ಲ. ಆದರೆ ಒಂದೇ ಒಂದು ಬಲವಾದ ಚಿಂತೆ–ಅಪರಿಮಿತ, ಅಮೌಲ್ಯ, ದಿವ್ಯವಾದ ನಿನ್ನ ವಾತ್ಸಲ್ಯದ ಕುಲಗೆಡಿಸಿದಂತಾಗುತ್ತದಲ್ಲಾ ಎಂಬುದು. ಜಾತ್ಯಾತೀತಳಾದ ನಿನ್ನ ಮುಂದೆ ಕುಲದ ಶಬ್ಧ ನುಡಿದದ್ದಕ್ಕೆ ಸಿಟ್ಟಾಗಬೇಡತಾಯಿ. ನಿನ್ನ ವಾತ್ಸಲ್ಯವನ್ನು ಸಾಮಾನ್ಯವಾದುವುಗಳನ್ನು ಬಾಡಿಗೆಗೆ ಕೊಟ್ಟಂತೆ ಕೊಡುತ್ತಾದಲ್ಲಾ ನಮ್ಮ ಸರಕಾರ ಎಂಬುದಕ್ಕೆ ಹಾಗೆಂದೆ. ತಪ್ಪು ತಿಳಿದುಕೊಳ್ಳದಿರು ಕೊಟ್ಟೂರ್ ರೇಲಮ್ಮ! ನನ್ನಪೇಕ್ಷೆಯ

ವಿರುದ್ಧ ಮೇಲಿಂದ ಮೇಲೆ ನಿನ್ನಾಶ್ರಯಕ್ಕೆ ಏಕೆ ಬರುವುದಿಲ್ಲವೆಂದರೆ ಇದಕ್ಕೆ– ನಿನ್ನ ವಾತ್ಸಲ್ಯವನ್ನು ಕೀಳುಮಾಡಿದಂತಾಗುತ್ತದಲ್ಲಾ ಎಂಬುದಕ್ಕೆ !

ಕೊಟ್ಟೂರ್ ಟ್ರೇನಮ್ಮಾ, ನಾನು ಬೇರೆ ಅಮ್ಮಗಳನ್ನು ಬಹಾಳ ನೋಡಿದ್ದೇನೆ. ಆದರೆ ಯಾರಲ್ಲಿಯೂ ನಿನ್ನ ಜೂಕವಿಲ್ಲ, ತಟ್ಟುವಿಕೆಯಿಲ್ಲ; ಹೃದಯದ ಮಿಡಿತವೂ ಅಷ್ಟಿಲ್ಲ. ಅಂದಮೇಲೆ ಆ ಹರ್ಷವೆಲ್ಲಿ? ವಾತ್ಸಲ್ಯ ವಿಲ್ಲದ ಸ್ಥಳದಲ್ಲಿ ಹರ್ಷವೆಲ್ಲಿಯದು? ನನಗಂತೂ ಅಂಥಾ ಆಶ್ರಯದಿಂದ ಯಾವಾಗ ಕಡೆಗಾದೇನೋ ಎಂದೆನಿಸುತ್ತಿರುತ್ತದೆ. ಆದರೆ ನಿನ್ನ ಮಡಲಲ್ಲಿ? ಸ್ವರ್ಗೀಯವಾದ ಆನಂದವುಂಟಾಗುತ್ತದೆ! ನನ್ನ ಕೊನೆಯ ದಿನಗಳನ್ನಂತೂ ನಿನ್ನ ಮಡಲಲ್ಲೇ ಕಳೆಯಬೇಕೆಂಬ ಹೆಬ್ಬಯಕೆಯೂ ಇದೆ!

# ಔತಣ ತಯಾರಕರ ಬಗ್ಗೆ........

ಶ್ರೀ ದೇಶಿಯವರು ಉತ್ತಮ ಹಾಸ್ಯಗಾರರು, ತರುಣ ಸಾಹಿತಿ, ರಸಿಕ ಕವಿ ಮತ್ತು ಕುಶಲ ಕಲಾವಿದರು. ಸಾಹಿತ್ಯ ಮತ್ತು ನಾಟ್ಯಕಲೆಯಲ್ಲಿ ಇವರಿಗೆ ತುಂಬಾ ಅಭಿರುಚಿ. ಇವರ ಕೃತಿಗಳಲ್ಲಿ ತಮ್ಮದೇ ಆದಂಥಾ ವೈಶಿಷ್ಟ್ಯವಿದೆ. ಇವರ ಶೈಲಿಯು ಆಕರ್ಷಕವಾಗಿದ್ದು, ನಿರೂಪಣೆಯು ತುಂಬಾ ರಸವತ್ತಾಗಿರುತ್ತದೆ. ಇವರಿಂದ ಇನ್ನೂ ಅನೇಕ ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದಾಗಿದೆ.

ಇವರು **''ಗೆಳೆಯರ ಗುಂಪು''** ಎಂಬ ಆದರ್ಶ ಸಂಘವನ್ನು ಸ್ಥಾಪಿಸಿ, ಅದರ ಸರ್ವ ಕಾರುಭಾರವನ್ನು ತಾವೇ ವಹಿಸಿಕೊಂಡು ದುಡಿಯುತ್ತಿದ್ದಾರೆ.

**ಸಾಹಿತ್ಯ ಪ್ರಕಾಶನ**
ಕೋಟೆ, ಕೊಟ್ಟೂರು.

## ಅಚ್ಚಿಗೆ ಸಿದ್ಧವಾಗಿರುವ ದೇಶಿಯವರ ಕೃತಿಗಳು.

೧. ಸ್ವಪ್ನ - ಸುಂದರಿ.
[ನಾಟಕ]

೨. ಸೋದರ ಮಾವ.
[ನಾಟಕ]

೩. ನನ್ನ ಕೃತಿಗಳು.
[ವಿವಿಧ ಕೃತಿಗಳ ಸಂಗ್ರಹ]

೪. ದೇಸಾಯ್ ಕತೆಗಳು.
[ಕವಿ ಜೀವನ ಕತೆಗಳು]